Sri D. Devaraj Urs.—The matter is before the Court. It is certainly going to prejudice the court. This being so, neither I nor you can do it according to the rules. That is my point.

Madam Speaker.—You can leave the matter to the Chief Minister. ಅದರ ಔಟ್‌ಕಂ ಅಥವಾ ರಿಜಲ್ಟ್ ಹೇಳುತ್ತಾರೆ.

Sri H. D. Deve Gowda.—The report has been drawn up by the COD. ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರ ಮೇಲೆ ಪ್ರೈವಸಿ ಇರಬೇಕು: ಏನೇನು ರಿಪೋರ್ಟ್‌ನಲ್ಲಿ ಇದೆ ಅದು ಪತ್ರಿಕೆಯಲ್ಲಿ ಬಂದಂಥಾದ್ದಲ್ಲ. ಸಿ ಓ ಡಿ. ಅಧಿಕಾರಿಗಳು ಬರೆದಂತಹ ರಿಪೋರ್ಟ್. ಈ ರಿಪೋರ್ಟ್ ಆಧಾರದ ಮೇಲೆ ಪರಮಾವಧಿ ಇರುತ್ತದೆ. ಈ ಸಭೆಗೆ ತಿಳಿಸದಿದ್ದರೆ ಹೇಗೆ ? we cannot keep the house in dark.

Madam Speaker.—The outcome of it will be made known to the House.

ಶ್ರೀ ಕೋಣಂದೂರು ಲಿಂಗಪ್ಪ.—ಆ ರಿಪೋರ್ಟ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಅನ್ನಿಸುತ್ತದೆ ?

Sri D. Devaraj Urs.—I did say that I would again go into the matter in detail. I would sit with the Minister and find out what the matter is. If I am satisfied, I would take a particular decision, If I am not satisfied, if things are different, then I will have to take some other decision for which the House has to accord approval.

Sri H. D. Deve Gowda.—We have no objection.

Sri D. Devaraj Urs.—Otherwise, you take a decision, we are prepared to abide by it.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇವತ್ತು ಈ ವಿಚಾರದಲ್ಲಿ ಪ್ರವೇಶಮಾಡಬೇಕೆಂದಿಲ್ಲ. ಈ ಸದನದ ಕೆಲಸಕಾರ್ಯಗಳು ಸುಗಮವಾಗಿ ಆಗುವ ದೃಷ್ಟಿಯಿಂದ ನಾನು ಕೆಲವಾರು ವಿಷಯಗಳನ್ನು ಈಗಾಗಲೇ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದನ್ನು ಪ್ರಸ್ತಾಪ ಮಾಡಿದ್ದೇ ತಪ್ಪು ಎಂದರೆ ಹೇಗೆ? In fact I suggested for the smooth working of the House.

ಶ್ರೀ ಡಿ. ದೇವರಾಜ ಅರಸ್.—ವಿರೋಧಪಕ್ಷದವರೂ ಸಹ ಅದೇ ರೀತಿಯಲ್ಲಿಯೇ ಹೇಳುತ್ತಿದ್ದಾರೆ. ಆ ಪಕ್ಷದ ನಾಯಕರು he volunteered to say that he is prepared to accept either to stay or to resign ಹಾಗಾದರೆ ಆ ರೀತಿ ಹೇಳುವುದೂ ಒಂದು ತಪ್ಪೇ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಇದನ್ನು ವಿಚಾರಣೆ ಮಾಡಿ ಈ ಸಭೆಗೆ ಯಾವಾಗ ತಿಳಿಸುತ್ತಾರೆ ?

Sri D. Devaraj Urs.—Sometime in the course of the session, I shall inform you.

Budget Estimates for 1977 78 Demands for Grants

Demand Nos. 28 and 29

Sri B. Subbaih Shetty (Minister of State for Information and Electricity).—Madam on the recommendation of the Governor, I beg to move:

'That a sum not exceeding Rs. 1,80,90,000 inclusive of the sum granted on account' be granted to the Government to defray the

charges which will come in course of payment during the financial year ending 31st day of March 1978 in respect of Demand No. 28 "Information and Publicity".

MADAM SPEAKER.—Motion moved:

'That a sum not exceeding Rs. 1,80,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 28 "Information and Publicity",

SRI C.N. PATIL (Minister for Labour).—Madam, on the recommendation of the Governor, I beg to move.

"That a sum not exceeding Rs 2,70,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 29 "Labour and Employment".

MADAM SPEAKER.—Motion moved;

'That a sum not exceeding Rs. 2,70.90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 29 "Labour and Employment"

Both the demands are before the House.

†ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ) —ಸನ್ಮಾನ್ಯ ಅಧ್ಯಕ್ಷರೆ. ಈ ವರ್ಷದ ಕಾರ್ಮಿಕ ಇಲಾಖೆಯ ವರದಿಯಲ್ಲಿ ಕಾರ್ಮಿಕ ಇಲ್ಲಾಖೆಯ ಹಲವು ಜವಾಬ್ದಾರಿಗಳನ್ನು ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅವುಗಳಲ್ಲಿ ಕೆಲವು ಮುಖ್ಯಾಂಶಗಳನ್ನು ಕಾರ್ಮಿಕ ಇಲಾಖೆಯವರು ಯಾವ್ಯಾವ ರೀತಿಯಲ್ಲಿ ಸಂಪೂರ್ಣವಾಗಿ ಮರೆತಿದ್ದಾರೆ ಎನ್ನುವುದನ್ನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳಬೇಕಾಗಿದೆ ನಮ್ಮ ರಾಜ್ಯದಲ್ಲಿ ಕೈಗಾರಿಕಾ ವಿವಾದಗಳ ಬಗ್ಗೆ ಕೈಗಾರಿಕಾ ಕ್ಷೇತ್ರಗಳಲ್ಲಿ ಶಾಂತಿ ನೆಲಸುವ ಹಾಗೆ ಬಹಳ ಶೀಘ್ರವಾಗಿ ತೀರ್ಮಾನ ಮಾಡುವುದಕ್ಕೆ ಇಲಾಖೆಯವರು ಶ್ರಮ ವಹಿಸಿದ್ದರೂ ಕೂಡ ಕಾರ್ಮಿಕ ಇಲಾಖೆಯಲ್ಲಿ ಬಹಳ ಜವಾಬ್ದಾರಿಯುತವಾದ ಸ್ಟ್ರೈಕ್ಸ್ ಮತ್ತು ಲಾಕೌಟ್‌ಗಳಿಂದ ಸಂಪೂರ್ಣವಾಗಿ ಕಾರ್ಖಾನೆಗಳನ್ನು ಮುಚ್ಚುವುದನ್ನು ತಡೆಯುವುದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದು ಅವರ ಮೊದಲನೆಯ ಜವಾಬ್ದಾರಿಯೆಂಬುದಾಗಿ ಇದರಲ್ಲಿ ಹಾಕಿಕೊಂಡಿದ್ದಾರೆ.

ಈ ವರದಿಯನ್ನು ನೋಡಿದರೆ ತುರ್ತುಪರಿಸ್ಥಿತಿಯ ಅವಧಿಯವರೆಗೂ ಕೂಡ ನಮ್ಮ ರಾಜ್ಯದಲ್ಲಿ ಸ್ಟ್ರೈಕ್ ಮತ್ತು ಲಾಕೌಟ್‌ಗಳಲ್ಲಿ 23,313 ಮತ್ತು 14,780 ಜನ ಕೆಲಸಗಾರರು ಇದರಲ್ಲಿ ಭಾಗಿಗಳಾಗಿದ್ದಾರೆ, 1 29,982 ಮ್ಯಾನ್‌ಡೇಸ್‌ಗಳು ನಷ್ಟವಾಗಿದೆ ಎಂದು ವರದಿಯಲ್ಲಿ ಹೇಳಿದ್ದಾರೆ. ಈ ಬಗ್ಗೆ ಒಂದು ವಿಷಯವನ್ನು ಹೇಳಬೇಕು ಎಂದರೆ ಈ ಒಂದು ಅವಧಿಯಲ್ಲಿ ಸ್ಟ್ರೈಕ್ ಮತ್ತು ಲಾಕ್‌ಔಟ್ ಮೂಲಕ ನಮ್ಮ ರಾಜ್ಯದಲ್ಲಿ ಹೆಚ್ಚು ಕೆಲಸದ ದಿನಗಳು ನಷ್ಟವಾಗಿದೆ. ಹೆಚ್ಚು ಜನರು ಕೆಲಸಕ್ಕೆ ಹಾಜರಾಗದೆ ಇದ್ದುದರಿಂದ ಕಾರ್ಖಾನೆ ನಡೆಯದೆ ಇರತಕ್ಕಂಥಾ ಪರಿಸ್ಥಿತಿ ಬಂತು ಎಂಬುದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಹಾಗೆಯೇ ಇನ್ನೊಂದು ವಿಚಾರವನ್ನು ಹೇಳಿದ್ದಾರೆ. ಲೇ ಆಫ್ ಮತ್ತು ಕಾರ್ಖಾನೆಗಳನ್ನು ಮುಚ್ಚಿದ್ದರ ಮೂಲಕ ಲಾಕ್

ಜಿಟಿಗಿಂತ ಹೆಚ್ಚು ದಿನಗಳು ಎಂದರೆ 1,55,965 ಮ್ಯಾನ್‌ಡೇಸ್ ಲಾಸ್ ಆಗಿವೆ ಎಂದು ಹೇಳಿದ್ದಾರೆ ಒಟ್ಟಿನಲ್ಲಿ ತುರ್ತುಪರಿಸ್ಥಿತಿಯು ಕಾಲದಲ್ಲಿ ಶಿಸ್ತು ಜಾರಿಗೆ ಬಂದಿದೆ ಉತ್ಪತ್ತಿ ಜಾಸ್ತಿಯಾಗಿದೆ. ಎಂದು ಮಾನ್ಯ ಮಂತ್ರಿಗಳು ಮತ್ತು ಮಾನ್ಯ ಸದಸ್ಯರು ಕೆಲವರು ಹೇಳಿದರು. ಕೆಲಸಗಾರರು ನಿಜವಾಗಿಯೂ ಕೆಲಸ ಮಾಡಿದ್ದಾರೆ. ಮೊದಲಿಗಿಂತ ಹೆಚ್ಚು ಉತ್ಪಾದನೆ ಮಾಡಿದ್ದಾರೆ. ಆದರೆ ಮಾಲೀಕರು ತುರ್ತುಪರಿಸ್ಥಿತಿಯ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಕೆಲಸಗಾರರನ್ನು ನಿರುದ್ಯೋಗಿಗಳನ್ನಾಗಿ ಮಾಡಿದ್ದಾರೆ. ಅವರು ಸಣ್ಣಪುಟ್ಟ ಕೇಳಿಕೆಗಳನ್ನು ಇಟ್ಟರೂ ಕೂಡ ಅವುಗಳನ್ನು ತೀರ್ಮಾನ ಮಾಡ ವುದಕ್ಕೆ ಇಲಾಖೆಯವರು ಶ್ರಮವಹಿಸದೆ ಇದ್ದ ಪರಿಣಾಮವಾಗಿ 48 ಕಾರ್ಖಾನೆಗಳನ್ನು ಆ ಕಾಲದಲ್ಲಿ ಮುಚ್ಚಿಹಾಕಿದ್ದಾರೆ. ಅಲ್ಲದೆ ಅನೇಕ ಕಡೆಗಳಲ್ಲಿ ಕಾರ್ಖಾನೆಗಳು ಲೇ ಅಫ್ ಆಗಿವೆ. ಹಿಂದೆ ಲೇ ಅಫ್ ಆದ ಕಾರ್ಖಾನೆಗಳನ್ನು ತೆರೆಯದೆ ಇರುವವು ಅನೇಕ ಇವೆ. ಇವುಗಳ ಬಗ್ಗೆ ಯಾವುದೇ ಒಂದು ಕ್ರಮವನ್ನು ಕೂಡ ಇಲಾಖೆಯವರು ತೆಗೆದುಕೊಂಡಿಲ್ಲ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ

ಇನ್ನೊಂದು ಮುಖ್ಯವಾದ ಅಂಶವೆಂದರೆ ಇಂಪ್ಲಿಮೆಂಟೇಷನ್ ಆಫ ರೆಕಮಂಡೇಷನ್ ವೇರಿಯಸ ವೇಜ್‌ಬೋರ್ಡ್ಸ್ ಅಂಡ್ ಅದರ್ ಟ್ರೈಪಾರ್ಟೈಟಿಸ್ಟ್ಸ್ ಎಂದು ಹೇಳಿದ್ದಾರೆ. ಈ ಸಂಬಂಧದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಅಪೇಕ್ಷೆ ಮಾಡುತ್ತೇನೆ. 1975ನೇ ಇಸವಿಯಲ್ಲಿ ಜುಲೈ 31ನೇ ತಾರೀಖಿನ ಕರ್ನಾಟಕ ಗೆಜೆಟ್‌ನಲ್ಲಿ ಈ ವಿಚಾರ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕೊಯ್ಲ ಎಂಬಲ್ಲಿ ಒಂದು ಜಾನುವಾರು ಸಾಕಾಣಿಕೆಯ ಕೇಂದ್ರ ಇದೆ. ಅಲ್ಲಿರುವ ಕೆಲಸಗಾರರನ್ನು 1976ನೇ ಜುಲೈ ತಿಂಗಳಲ್ಲಿ ಅವರನ್ನು ಪರ್ಮನೆಂಟ್ ಮಾಡಬೇಕೆಂದು ಮತ್ತು ಅವರಿಗೆ ವೇತನ ಮತ್ತು ಇತರ ಸವಲತ್ತುಗಳನ್ನು ಕೊಡಬೇಕೆಂದು ಲೇಬರ್ ಕೋರ್ಟಿನವರು ಒಂದು ಅವಾರ್ಡನ್ನು ಕೊಟ್ಟರು. ಕೆಲಸದಿಂದ ಕಿತ್ತು ಹಾಕಿದಂತಹ ಕೆಲಸಗಾರರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಮತ್ತು ಅವರೆಲ್ಲರಿಗೂ ಕೂಡ ವೇಜಸ್ ಬಾಕಿ ಕೊಡಬೇಕು ಎಂದು 1975ನೇ ಇಸವಿ ಮಾರ್ಚಿ 17ನೇ ತಾರೀಖು ಕರ್ನಾಟಕ ಗೆಜೆಟ್‌ನಲ್ಲಿ ಇನ್ನೊಂದು ಅವಾರ್ಡನ್ನು ಪ್ರಕಟಿಸಿದರು 1975ನೇ ಇಸವಿಯಲ್ಲಿ ಕೊಟ್ಟಂತಹ ಅವಾರ್ಡನ್ನು ಸರ್ಕಾರದ ಇಲಾಖೆಯವರು ಇವೊತ್ತಿನವರೆಗೂ ಜಾರಿಗೆ ತರಲಿಲ್ಲ. ಇದರ ಬಗ್ಗೆ ಲೇಬರ್ ಇಲಾಖೆಯವರು ಸಂಬಂಧಪಟ್ಟ ಅನಿಮಲ್ ಹಸ್ಬೆಂಡರಿ ಇಲಾಖೆಗೆ ಎಷ್ಟು ಸಾರಿ ಕಾಗದ ಬರೆದಿದ್ದರೂ ಕೂಡ ಇದರ ಬಗ್ಗೆ ಯಾವ ಒಂದು ಕ್ರಮವನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ಸಂಬಂಧಪಟ್ಟ ಇಲಾಖೆಗೆ ತೀರ್ಮಾನ ಮಾಡುವುದಕ್ಕೆ ಒಂದು ಮಾರ್ಗ ದರ್ಶನ ಕೊಡಬೇಕು ಲೇಬರ್ ಕೋರ್ಟ್ ಕೊಟ್ಟ ಅವಾರ್ಡನ್ನು ತಾವು ಜಾರಿ ಮಾಡುವುದಿಲ್ಲ ಎಂದರೆ ಮತ್ತೆ ಯಾರು ಅದನ್ನು ಜಾರಿ ಮಾಡಬೇಕೋ ನನಗೆ ಅರ್ಥವಾಗುವುದಿಲ್ಲ. ಇದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟೋ ವೇಜ್‌ಬೋರ್ಡುಗಳು ಕೊಟ್ಟಂತಹ ತೀರ್ಮಾನವನ್ನು ಜಾರಿಗೆ ತರದೆ ಇದ್ದರೆ ನಾವು ಯೋಚನೆ ಮಾಡಬೇಕು?

ಈಗ ಉದಾಹರಣೆಗೆ ಹೇಳುವುದಾದರೆ ವರ್ಕಿಂಗ್ ಜರ್ನಲಿಸ್ಟ್ ವೇಜ್‌ಬೋರ್ಡ್ ಪತ್ರಿಕಾ ನೌಕರರಿಗೆ ವರದಿಗಾರರಿಗೆ ಜರ್ನಲಿಸ್ಟ್‌ಗಳಿಗೆ ತಾತ್ಕಾಲಿಕವಾಗಿ ಪರಿಹಾರವನ್ನು ಕೊಡಬೇಕು ಎಂದು ತೀರ್ಮಾನ ಕೊಟ್ಟಿದೆ. ಕಾಯಿದೆ ಬದ್ಧವಾಗಿ ನೇಮಕವಾದಂತಹ ವೇಜ್‌ಬೋರ್ಡ್ ತೀರ್ಮಾನ ಕೊಟ್ಟಿದ್ದು ಕಾಯಿದೆ ಬದ್ಧವಾಗಿ ಜಾರಿಗೆ ಬರಬೇಕು. ಅವರು ಅದನ್ನು ಜಾರಿಗೆ ತರದಿದ್ದರೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಸೆಕ್ಷನ್ 18ರ ಪ್ರಕಾರ ಮತ್ತು ವರ್ಕಿಂಗ್ ಜರ್ನಲಿಸ್ಟ್ ಸೆಕ್ಷನ್ 3, 2ರ ಪ್ರಕಾರ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೇವೆ ಎಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ ಆದರೆ ಸ್ವಾತಂತ್ರ್ಯೋತ್ಸ್ಕರ ಹೋರಾಟ ನಡೆಸಿ. ಪ್ರಜಾಪ್ರಭುತ್ವ ಹೋರಾಟದಲ್ಲಿ ಪತ್ರಿಕಾ ಅಧಿಪತಿಗಳು ಇವರಿಗೆ ಸಹಾಯ ಮಾಡಿರುವುದರಿಂದ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂದೇಟು ಹಾಕುತ್ತಾರೆ ಇರುವಂತಹ ಹೇಳಿಕೆಗಳು ಕಂಡುಬರುತ್ತಿವೆ. ಪತ್ರಿಕಾ ಅಧಿಪತಿಗಳ ಮೇಲೆ ಕ್ರಮ ತೆಗೆದುಕೊಳ್ಳುವುಧಕ್ಕೆ ರಾಜ್ಯ ಸರ್ಕಾರಕ್ಕೂ ಅಧಿಕಾರ ಇದೆ. ಕೇಂದ್ರ ಸರ್ಕಾರಕ್ಕೂ ಅಧಿಕಾರ ಇದೆ. ಅವರ ಧೋರಣೆ ಏನೇ ಇರಲಿ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ತಮಗೆ ಇರುವ ಅಧಿಕಾರವನ್ನು ಉಪಯೋಗಿಸಿಕೊಂಡು ಪತ್ರಿಕಾ ಅಧಿಪತಿಗಳನ್ನು ಕರೆದು ತಾತ್ಕಾಲಿಕ ಪರಿಹಾರವನ್ನು

ಈ ಪತ್ರಿಕಾ ಪ್ರತಿನಿಧಿಗಳಿಗೆ ಪತ್ರಿಕಾ ಜರ್ನಲಿಸ್ಟ್‌ಗಳಿಗೆ ಪತ್ರಿಕಾ ನೌಕರರಿಗೆ ಕೊಡುವುದಕ್ಕೆ ಒತ್ತಾಯ ಮಾಡಿದ್ದಾರೆಯೇ ಒಂದೆರಡು ಸಲವಾದರೂ ಕೂಡ ಪತ್ರಿಕಾ ಅಧಿಪತಿಗಳನ್ನು ಕರೆದು ಅವರನ್ನು ಕೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ? ಸರ್ಕಾರದವರು ಹಾಗೆ ಅವರನ್ನು ಕರೆದು ಮಾತನಾಡಿಲ್ಲ, ಕಾನೂನಿನಲ್ಲಿ ತಮಗೆ ಏನೇನು ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ ಅದನ್ನು ಚಲಾವಣೆ ಮಾಡಬೇಕು. ಇವರು ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ ನಿಜವಾಗಿಯೂ ಕೂಡ ನಮ್ಮ ರಾಜ್ಯದಲ್ಲಿ ಕೈಗಾರಿಕಾ ಶಾಂತಿ ಇರಬೇಕು ಎಂದರೆ ಕಾರ್ಮಿಕರಿಗೆ ಕಾನೂನುಬದ್ಧವಾಗಿ ಸಿಕ್ಕಬೇಕಾದಂತಹ ಸವಲತ್ತುಗಳು ಸಿಗಬೇಕು ಎಂದರೆ ಅವರು ಇನ್ನು ಸ್ವಲ್ಪ ತೀವ್ರವಾದ ರೀತಿಯಲ್ಲಿ ತಮ್ಮ ಅಧಿಕಾರವನ್ನು ಉಪಯೋಗಿಸಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ವರದಿಯಲ್ಲಿ ಹೇಳಿದ್ದಾರೆ. ಕಾಂಟ್ರಾಕ್ಟ್ ಲೇಬರ್ಸ್ ಇದನ್ನು ಅಬಾಲಿಸ್ ಮಾಡಬೇಕು ಎಂದು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಧೋರಣೆ ಇದೆ. ಇದನ್ನು ಅಬಾಲಿಷ್ ಮಾಡಿರುವುದನ್ನು ರೆಗ್ಯುಲೇಷನ್ ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಕಾನೂನು ಪ್ರಕಾರ 1970ನೇ ಇಸವಿಯಲ್ಲಿ ಇದ್ದಂತಹ ಕಾನೂನಿಗೆ ಒಳಪಟ್ಟು ರೂಲ್ಸ್ ಮಾಡಿದ್ದಾರೆ, ಅದು ಜಾರಿಗೆ ಬಂದಿದೆ. ಈಗ ಆಗಬೇಕಾಗಿರುವುದು ಏನೆಂದರೆ ಒಂದು ಬೋರ್ಡ್ ನೇಮಕ ಮಾಡಬೇಕು, ಅದರಂತೆ ಒಂದು ಬೋರ್ಡನ್ನು ನೇಮಕ ಮಾಡಿದ್ದಾರೆ. 1970ನೇ ಇಸವಿಯಿಂದ 1977ನೇ ಇಸವಿವರೆಗೂ ಕಾಂಟ್ರಾಕ್ಟ್ ಲೇಬರ್ ರೆಗ್ಯುಲೇಷನ್ ಅಂಡ್ ಅಬಾಲಿಷನ್ ಆಕ್ಟನ್ನು ಜಾರಿಗೆ ತರುವುದಕ್ಕೆ ಒಂದು ಬೋರ್ಡನ್ನು ನೇಮಕ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ರಾಜ್ಯದಲ್ಲಿ ಈಗ ಅನೇಕ ಬೋರ್ಡುಗಳು ಆಗಿವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾ ಸರ್ಕಾರದವರು ಎಷ್ಟು ಬೋರ್ಡನ್ನು ನೇಮಕ ಮಾಡಿದ್ದಾರೆಂಬುದನ್ನು ಲೆಕ್ಕ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಹೀಗೆ ಬೇಕಾದಷ್ಟು ಬೋರ್ಡುಗಳನ್ನು ಮಾಡಿರುವಾಗ ಕಾರ್ಮಿಕರಿಗೆ ಬಹಳ ಮುಖ್ಯವಾದ ಕಾಯಿದೆಯಾದ ಈ ಕಾಂಟ್ರಾಕ್ಟ್ ಲೇಬರ್ ರೆಗ್ಯುಲೇಷನ್ ಅಂಡ್ ಅಬಾಲಿಷನ್ ಆಕ್ಟ್ ಅನ್ನು ಜಾರಿಗೆ ತರುವುದಕ್ಕೆ ಬೇಕಾದಂತಹ ಒಂದು ಬೋರ್ಡನ್ನು ಏತಕ್ಕೆ ನೇಮಕ ಮಾಡಲಿಲ್ಲ ಎಂಬುದು ಗೊತ್ತಾಗಲಿಲ್ಲ. ಈ ಒಂದು ಕಾಯಿದೆಯನ್ನು ಜಾರಿಗೆ ತರದಿದ್ದರೆ ಕಾರ್ಮಿಕರ ಯಾವುದೇ ಕಾಯಿದೆಗೆ ರಕ್ಷಣೆ ಸಿಕ್ಕುವುದಿಲ್ಲ. ಆದ್ದರಿಂದ ಇದು ಬಹಳ ಮುಖ್ಯವಾದ ಕಾಯಿದೆ. ಈಗ ಮಂಗಳೂರಿನ ಹಾರ್ಬರ್ ಪ್ರಾಜೆಕ್ಟ್‌ನಲ್ಲಿ ನೂರಾರು ಜನ ಕಾಂಟ್ರಾಕ್ಟ್ ಲೇಬರರ್ಸ್ ಕೆಲಸ ಮಾಡುತ್ತಿದ್ದಾರೆ,

ಮಂಗಳೂರು ಹಾರ್ಬರ್‌ನಲ್ಲಿ ಒಂದು ಬೋರ್ಡನ್ನು ನೇಮಿಸುವ ಅಗತ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ತೀರ್ಮಾನ ಕೊಟ್ಟಿದ್ದಾರೆ. ಮಂಗಳೂರು ಹಾರ್ಬರ್‌ನಲ್ಲಿ ಲೋಡಿಂಗ್ ಅನ್‌ಲೋಡಿಂಗ್ ಮತ್ತಿತರ ಕೆಲಸ ಅಲ್ಲಿ ನಡೆಯುತ್ತಿದ್ದಾಗ್ಯೂ ಕೂಡ ಅಲ್ಲಿಯ ಕೆಲಸಗಾರರು ಕನಿಷ್ಠ ವೇತನಕ್ಕಿಂತಲೂ ಕಡಿಮೆ ವೇತನವನ್ನು ತೆಗೆದುಕೊಂಡು ಅಲ್ಲಿಯ ಕಂಟ್ರಾಕ್ಟರ್ ಹತ್ತಿರ ಕೆಲಸ ಮಾಡುತ್ತಿದ್ದಾರೆ. ಕಂಟ್ರ್ಯಾಕ್ಟರ್ ಅವರು ಇವತ್ತು ಯಾವುದೇ ಒಂದು ನೀತಿ ನಿಯಮವಿಲ್ಲದೇ ಆ ಕೆಲಸಗಾರರನ್ನು ಶೋಷಣೆ ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವತ್ತು ಲೇಬರ್ ಆ್ಯಕ್ಟ್ ಪ್ರಕಾರ ಅಲ್ಲಿ ಬೋರ್ಡನ್ನು ನೇಮಕ ಮಾಡುವುದಕ್ಕೆ ಅವಕಾಶ ಕೊಡದೆ ಹಾಗೂ ಕಾನೂನು ಪ್ರಕಾರ ಅವರಿಗೆ ಕೊಡಬೇಕಾದಂಥ ಸೌಲಭ್ಯಗಳನ್ನು, ರಕ್ಷಣೆಯನ್ನು ಏತಕ್ಕೆ ತಾವು ಕೊಡಬಾರದೆಂದು ನಾನು ಕೇಳುತ್ತೇನೆ. ಇವತ್ತು ಕಂಟ್ರ್ಯಾಕ್ಟರ್‌ಗಳವರು ಅವರ ಕೈ ಕೆಳಗೆ ಕೆಲಸ ಮಾಡತಕ್ಕಂಥವರಿಗೆ ಸರಿಯಾದ ವೇತನವನ್ನು ಕೊಡದೆ ಅವರು ಅತಿ ಹೆಚ್ಚಿನ ಲಾಭವನ್ನು ಹೊಡೆಯುತ್ತಿದ್ದಾರೆ. ಇದನ್ನು ಸರಿಪಡಿಸಲು ಒಂದು ಆಜ್ಞೆ ಸಿದ್ಧವಾಗಿದ್ದು ಅದಕ್ಕೆ ತಮ್ಮ ಒಂದು ಸಹಿ ಬಿದ್ದ ಕೂಡಲೇ ಅದು ಆಜ್ಞೆಯಾಗಿ ಆದರಿಂದ ಹಲವಾರು ನೌಕರರಿಗೆ ಕನಿಷ್ಠ ವೇತನ ಕೂಲಿ ಸಿಗುವಂತಾಗುತ್ತದೆ. ಆದರೆ ಆ ಕೆಲಸವನ್ನು ತಾವು 7 ವರ್ಷಗಳಾದರೂ ಇನ್ನೂ ಮಾಡಿಲ್ಲ. ಹಿಂದಿನ ಸರ್ಕಾರದವರಂತೂ ಮಾಡಲಿಲ್ಲ ತಾವಾದರೂ 1977ನೇ ಇಸವಿಯ ನಂತರ ಬಂದಿರತಕ್ಕಂಥ ಸರ್ಕಾರದವರಾದರೂ ಮಾಡುತ್ತಾರೆ ಎನ್ನುವ ನಿರೀಕ್ಷಣೆಯನ್ನು ಜನತೆ ಇಟ್ಟುಕೊಂಡಿದ್ದಾರೆ. ಇದನ್ನು ತಾವು ಬಿಟ್ಟು ಹೋಗುತ್ತಿರುವಂಥಾ ಕೊನೆಯ ಘಳಿಗೆಯಲ್ಲಾದರೂ ಈಡೇರಿಸಿ ಕೊಡು

ತ್ತೇರಿ ಎಂದು ಭಾವಿಸಿದ್ದೇವೆ. 5—6 ವರ್ಷಗಳ ಮುಂಚೆ ಮಾಡುವುದಕ್ಕೆ ಆಗದಿದ್ದರೂ ಕೂಡ ಇನ್ನು ಕೆಲವೇ ತಿಂಗಳು ಬಾಕಿ ಉಳಿದಿರುವುದರಿಂದ ದಯಮಾಡಿ ಲೇಬರ್ ಅಬಾಲಿಷನ್ ಆ್ಯಕ್ಟ್ ಪ್ರಕಾರ ಅವರಿಗೆ ಮಿನಿಮಂ ವೇಜಸ್ ಕೊಡಿಸಿ ಕೊಡಬೇಕು ಮತ್ತು ಅಲ್ಲಿಗೆ ಒಂದು ಬೋರ್ಡ್ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವರ್ಕಿಂಗ್ ಜರ್ನಲಿಸ್ಟ್‌ರವರ ಬಗ್ಗೆ ಈಗಾಗಲೇ ಹೇಳಿದ್ದೇನೆ ಇನ್ನು ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಹಲವಾರು ವಿವಾದಗಳು ಲೇಬರ್ ಕೋರ್ಟಿನಲ್ಲಿ ಇಥ್ಯರ್ಥವಾಗದೇ ಉಳಿದಿವೆ. 3 ನೇ ಡಿಸೆಂಬರ್ 1976ಕ್ಕೆ 1,789 ಕೇಸ್‌ಗಳು ಪೆಂಡಿಂಗ್ ಬಿದ್ದಿವೆ. ಅವಕ್ಕೆ ಇನ್ನೂ ತೀರ್ಮಾನ ಮಾಡಿಲ್ಲ. ಕೆಲವು ತೀರ್ಮಾನವಾಗಿದೆ, ಇನ್ನು ಕೆಲವು ತೀರ್ಮಾನವಾಗಿಲ್ಲ. ಪ್ರತಿ ವರ್ಷದ ಲೆಕ್ಕವನ್ನು ನಾವು ತೆಗೆದು ನೋಡಿದರೆ ತೀರ್ಮಾನವಾದ ಕೇಸ್‌ಗಳಿಗಿಂತ ತೀರ್ಮಾನವಾಗದೇ ಉಳಿದಿರುವಂಥ ಕೇಸ್‌ಗಳ ಸಂಖ್ಯೆಯೇ ಹೆಚ್ಚಾಗುತ್ತದೆ. 1972ಕ್ಕೂ ಮುಂಚಿನ ಎಷ್ಟೋ ಕೇಸ್‌ಗಳು ಇವತ್ತಿಗೂ ಪೆಂಡಿಂಗ್‌ನಲ್ಲಿರುವುದನ್ನು ತಾವು ಗಮನಿಸಿರಬಹುದು. ಇದಕ್ಕೆ ಕಾರಣ ಏನು ಎಂಬುದನ್ನು ಹೇಳುವುದಕ್ಕೆ ಒಂದೆರಡು ವಿಚಾರಗಳನ್ನು ಮಾತ್ರ ಹೇಳಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ 3 ಲೇಬರ್ ಕೋರ್ಟ್‌ಗಳು ಇವೆ. ಒಂದು ಮಂಗಳೂರಿನಲ್ಲಿ ಮತ್ತೊಂದು ಬೆಂಗಳೂರಿನಲ್ಲಿ ಇನ್ನೊಂದು ಹುಬ್ಬಳ್ಳಿಯಲ್ಲಿ ಈ ಮೂರು ಕಡೆಗಳಲ್ಲಿ ಲೇಬರ್ ಕೋರ್ಟುಗಳು ನಡೆಯುತ್ತಿವೆ. ಈ 3 ಕೋರ್ಟುಗಳಿಗೂ ಕೂಡ ಇಡಿ, ರಾಜ್ಯದ ವ್ಯಾಪಕವಾದಂಥ ಜ್ಯುರಿಸ್‌ಡಿಕ್ಷನ್ ಕೊರತೆಯ ವ್ಯಾಪ್ತಿ ಇದೆ. ತಾವು ಏನು ಮಾಡಿದ್ದೀರಿ ಮಂಗಳೂರು ಲೇಬರ್ ಕೋರ್ಟಿನಲ್ಲಿ ಜಡ್ಜ್ ಇಲ್ಲಾ. ಅಲ್ಲಿ ಅವರನ್ನು ನೇಮಕ ಮಾಡಿಲ್ಲ. ಇದರ ಬಗ್ಗೆ ನಾವು ಎಷ್ಟೋ ಸಲ ಹೇಳಿದ್ದೇವೆ ಅಡಿಷನಲ್ ಡಿಸ್ಟ್ರಿಕ್ಟ್ ಜಡ್ಜ್ ಯಾರಿದ್ದಾರೆ ಅವರೇ ಈ ವ್ಯಾಜ್ಯಗಳನ್ನು ತನಿಖೆ ಮಾಡಬೇಕು. ಅವರಿಗೆ ಸಿವಿಲ್ ಮತ್ತು ಕ್ರಿಮಿನಲ್ ಕೇಸ್‌ಗಳು ಬರುತ್ತಿರುತ್ತವೆ. ಆಗ ಅವರು ಎಲ್ಲಾ ಕೇಸ್‌ಗಳನ್ನೂ ನೋಡಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಎಷ್ಟೋ ಕೇಸ್‌ಗಳನ್ನು ನೋಡಿ ತೀರ್ಮಾನ ಮಾಡದೇ ಉಳಿದಿರುವಂಥ ಸಂದರ್ಭದಲ್ಲಿ ಪುನಃ ಅವರಿಗೆ ಈ ಕೇಸ್‌ಗಳನ್ನೂ ಕೊಟ್ಟರೆ ಅವರೊಬ್ಬರೇ ಈ ಎಲ್ಲಾ ಕೇಸ್‌ಗಳನ್ನು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಹೀಗಾಗಿ ಅವರು 2 ದಿವಸಕ್ಕೊಂದು ಸಾರಿಯಂತೆ ಆ ಕೆಲಸ ಮತ್ತು ಈ ಕೆಲಸಗಳನ್ನೂ ನೋಡಿಕೊಳ್ಳುತ್ತಿದ್ದಾರೆ. ಲೇಬರ್ ಲಾಸ್ ಮತ್ತು ಲೇಬರ್ ಡಿಪಾರ್ಟ್‌ಮೆಂಟ್ ಒಂದು ಸ್ಪೆಷಲೈಜ್ಡ್ ಡಿಪಾರ್ಟ್‌ಮೆಂಟ್ ಆಗಿದೆ. ಇವತ್ತು ಲೇಬರ್ ಟ್ರಿಬ್ಯೂನಲ್ಸ್ ಮತ್ತು ಲ್ಯಾಂಡ್ ರಿಫಾರಂಸ್ ಪ್ರತ್ಯೇಕವಾಗಿದ್ದರೂ ಕೂಡ ಲೇಬರರ್ಸ್ ವಿವಾದಗಳು ಇತ್ಯರ್ಥವಾಗದೇ ಸಾಮಾನ್ಯ ನ್ಯಾಯಾಲಯಗಳಲ್ಲಿ ಉಳಿಯುವಂಥಾ ಸಂದರ್ಭ ಬಂದಿದೆ. ಲೇಬರ್ ಕೋರ್ಟಿಗೆ ನ್ಯಾಯಾಧೀಶರನ್ನು ಕೊಡಿ ಎಂದು ನೀವು ಹೈಕೋರ್ಟಿನವರನ್ನು ಕೇಳಿದರೆ ಅವರನ್ನು ಕೊಡುವುದಿಲ್ಲ ಆದಕ್ಕೆ ತಾವು ಪ್ರತ್ಯೇಕವಾಗಿ ನ್ಯಾಯಾಧೀಶರನ್ನು ಲೇಬರ್ ಇಲಾಖೆಯಲ್ಲಿ ಮತ್ತು ಲೇಬರ್ ಕೋರ್ಟುಗಳಲ್ಲಿ ಕೆಲಸ ಮಾಡುತ್ತಿರುವಂಥ ನ್ಯಾಯಾಧೀಶರನ್ನೇ ನೇಮಕ ಮಾಡಬೇಕು. ಮತ್ತು ಅದಕ್ಕೆ ಬೇಕಾದಂಥ ಕಾನೂನನ್ನು ತಿದ್ದುಪಡಿ ಮಾಡಿ ಅವರನ್ನು ನೇಮಕ ಮಾಡಬೇಕು ಅಂದರೆ ಆಗ ಮಾತ್ರ ಶೀಘ್ರವಾಗಿ ಈ ವಿವಾದಗಳನ್ನು ಲೇಬರ್ ಕೋರ್ಟಿನಲ್ಲಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದಕ್ಕಾಗಿ ತಾವು ಪ್ರತ್ಯೇಕವಾದ ಕೇಡರ್ ನೇಮಕ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತೆ ಈ ಕೇಸ್‌ಗಳು ಇತ್ಯರ್ಥವಾಗದೇ ಉಳಿದಿರುವುದಕ್ಕೆ ಇನ್ನು ಕೆಲವು ಕಾರಣಗಳನ್ನು ಕೊಡುವುದಾದರೆ 1976ಕ್ಕಿಂತ ಹಿಂದೆ ಏನು ಕೇಸ್‌ಗಳು ಇದ್ದವು ಅವುಗಳಲ್ಲಿ ಕೆಲವನ್ನು ಬೆಂಗಳೂರು ಲೇಬರ್ ಕೋರ್ಟಿನಿಂದ ಹುಬ್ಬಳ್ಳಿಗೆ ಟ್ರಾನ್ಸ್‌ಫರ್ ಮಾಡಿದ್ದೀರಿ. ಮೈಸೂರು, ಮಂಡ್ಯ ಜಿಲ್ಲೆಗಳಿಗೆ ಸಂಬಂಧಪಟ್ಟಂಥ ಕೇಸ್‌ಗಳನ್ನು ಅಲ್ಲಿಯ ಡಿಸ್ಟ್ರಿಕ್ಟ್ ಕೋರ್ಟ್‌ಗಳಿಗೆ ಟ್ರಾನ್ಸ್‌ಫರ್ ಮಾಡಿದ್ದರು ಮತ್ತೆ ಇವತ್ತು ತಿರುಗಿ ಹುಬ್ಬಳ್ಳಿ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ.

ಅಧ್ಯಕ್ಷರು.—ನಮ್ಮ ಹತ್ತಿರ ಇನ್ನು 5-6 ಜನ ಮಾತನಾಡುವುದರ ಪಟ್ಟಿ ಇದೆ. 5 ಗಂಟೆಗೆ ಉತ್ತರ ಶುರುವಾಗಬೇಕಾಗಿರುವುದರಿಂದ ಅಷ್ಟರೊಳಗೆ ಮಾನ್ಯ ಸದಸ್ಯರು ಇರತಕ್ಕ ಕಾಲವನ್ನು ಹೊಂದಾಣಿಕೆ ಮಾಡಿಕೊಂಡು ತಮ್ಮ ಮಾತನ್ನು ಮುಗಿಸಬೇಕು.

[ಚೇರ್ಮನ್ (ಶ್ರೀಮತಿ ರೇಣುಕ ರಾಜೇಂದ್ರನ್) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಶ್ರೀ ಬಿ. ವಿ. ಕಕ್ಕಿಲಾಯ.—ಈ ರೀತಿ ಕೇಸನ್ನು ತಿರುಗಿ ವರ್ಗಾವಣೆ ಮಾಡಿರುವುದರಿಂದ ಅನೇಕ ಮಂದಿ ಮಾಲೀಕರು ಕೋರ್ಟಿಗೆ ಹೋಗಿದ್ದಾರೆ ಜ್ಯುರಿಸ್‌ಡಿಕ್ಷನ್ ಇಲ್ಲದ ಕಡೆಗೆ ಕೇಸ್‌ಗಳನ್ನೆಲ್ಲಾ ವರ್ಗಾವಣೆ ಮಾಡಿದ್ದಾರೆ. ಅವರು ಅದನ್ನು ತನಿಖೆ ಮಾಡುವುದಕ್ಕೆ ಆಗುವುದಿಲ್ಲ. ಅದು ಪುನಃ ಹಿಂದಕ್ಕೆ ವಾಪಸ್ಸು ಬರುತ್ತದೆ. ಹೀಗೆ ಜ್ಯುರಿಸ್‌ಡಿಕ್ಷನ್ ಇಲ್ಲದೆ ಇಂಥಾ ಒಂದು ಗೊಂದಲಮಯವಾದ ವಾತಾವರಣ 3—4 ವರ್ಷಗಳಿಂದ ನಿರ್ಮಾಣವಾಗಿ ಬಂದಿರುವುದರಿಂದ ಅನೇಕ ಕೇಸ್‌ಗಳು ಇತ್ಯರ್ಥವಾಗದೇ ಹಾಗೆಯೇ ಉಳಿದುಕೊಂಡು ಬಂದಿದ್ದಾರೆ

ಇನ್ನು ನಮ್ಮ ರಾಜ್ಯದಲ್ಲಿ ಶಿಕ್ಷಣ ಕ್ರಮಗಳು ಇತ್ತೀಚೆಗೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಅದರಲ್ಲೂ ಕಾರ್ಮಿಕರ ಮೇಲೆ ಯಾವುದೇ ಒಂದು ಕಾನೂನು ಬದ್ಧವಾಗಿ ಕ್ರಮ ತೆಗೆದುಕೊಳ್ಳದೇ ಅವರ ಮೇಲೆ ಸಿಕ್ಕಿದ ಹಾಗೆ ಕ್ರಮ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ತಮಗೆ ಕೆಲವು ನಿದರ್ಶನಗಳನ್ನು ಹೇಳಬಯಸುತ್ತೇನೆ. ಬಿ.ಇ.ಎಲ್.ನಲ್ಲಿ 1966ರಲ್ಲಿ ಕಾರ್ಖಾನೆಯ ಲಾಕ್‌ಔಟ್ ಆದಾಗ 9ಜನ ಕೆಲಸಗಾರರನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಕೆ.ಆರ್.ಮಿಲ್ಸ್ ಮೈಸೂರಿನಲ್ಲಿ 57 ಜನ ಕೆಲಸಗಾರರನ್ನು ವಜಾ ಮಾಡಿರುವಂಥಾ ಪ್ರಶ್ನೆ ಇದೆ ಇನ್ನು ಆಂಧ್ರ ಸ್ಟೀಲ್ ಕಾರ್ಪೊರೇಷನ್‌ನಲ್ಲಿ 71ರಲ್ಲಿ 386 ಜನ ಕೆಲಸಗಾರರನ್ನು ವಜಾ ಮಾಡಿದ್ದಾರೆ, ಮೈಸೂರು ಕಿರ್ಲೋಸ್ಕರ್ ಇಂಡಸ್ಟ್ರೀಸ್‌ನಲ್ಲಿ 1974ರಲ್ಲಿ 91 ಜನ ಕೆಲಸಗಾರರನ್ನು ಡಿಸ್‌ಮಿಸ್ ಮಾಡಿರುತ್ತಾರೆ, ಹರಿಹರ ಪಾಲಿಫೈಬರ್ಸ್ ಫ್ಯಾಕ್ಟರಿಯಲ್ಲಿ 76 ಜನರನ್ನು ಮತ್ತು ಇನ್ನು ಕೆಲವರು ಟ್ರೇಡ್ ಯೂನಿಯನ್ನಿನ ಚಟುವಟಿಕೆಯಲ್ಲಿ ಭಾಗವಹಿಸಿದ್ದರು ಎನ್ನುವ ಬಗ್ಗೆ ಕೆಲವರನ್ನು ಡಿಸ್‌ಮಿಸ್ ಮಾಡಿದ್ದಾರೆ. ಹೀಗೆ ಹಲವಾರು ಜನರನ್ನು ಯಾವುದೇ ಕಾರಣವಿಲ್ಲದೆ ಡಿಸ್‌ಮಿಸ್ ಮಾಡಿದ್ದಾರೆ. ಅಂಥವರ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸುವುದಕ್ಕಾಗಿ ತೀವ್ರವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

3--30 P.M.

ಈಗ ನಮ್ಮ ಕೆಲಸಗಾರರಿಂದ ಬಂದಿರುವ ಬೇಡಿಕೆಗಳನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಬಹಳ ಮುಖ್ಯವಾದುದೆಂದರೆ ವೃತ್ತಿ ತೆರಿಗೆಯನ್ನು ರದ್ದು ಮಾಡುವುದು. ಒಂದು ತಿಂಗಳಿಗೆ ಐನೂರು ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಬಳ ಪಡೆಯುವ ನೌಕರರ ಮೇಲೆ ಇಂದು ಸರ್ಕಾರದವರು ವೃತ್ತಿ ತೆರಿಗೆಯನ್ನು ವಿಧಿಸಿದ್ದಾರೆ. ಬ್ಯಾಂಕುಗಳಲ್ಲಿ, ಜೀವವಿಮಾ ಸಂಸ್ಥೆಯಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುವ ಕೈಗಾರಿಗಳಲ್ಲಿ ಹಾಗೂ ಆ ಮಟ್ಟದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವವರು ಸಾಮಾನ್ಯವಾಗಿ ತಿಂಗಳಿಗೆ ಐನೂರು ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಬಳ ಪಡೆಯುವವರಿದ್ದಾರೆ. ಈ ತೆರಿಗೆ ಮೊದಲು ಹಾಕಿದಾಗ ತಿಂಗಳಿಗೆ ಐನೂರು ರೂಪಾಯಿಗಳಿಗಿಂತಲೂ ಕಡಮೆ ವರಮಾನ ಬರುತ್ತಿದ್ದವರಿಗೂ ಅನ್ವಯಿಸುತ್ತಿತ್ತು. ಆದರೆ ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಿ ಅದನ್ನು ಏರಿಸಬೇಕೆಂದು ಸಲಹೆ ಕೊಡಲಾಯಿತು. ಅನಂತರ ಅರ್ಥ ಸಚಿವರು ವರ್ಷಕ್ಕೆ ಆರು ಸಾವಿರ ರೂಪಾಯಿಗಳಿಗಿಂತ ಕಡಮೆ ವರಮಾನವಿರುವವರಿಗೆ ಇದರಿಂದ ವಿನಾಯಿತಿ ನೀಡಿ, ಅದರ ಮೇಲ್ಪಟ್ಟು ವರಮಾನ ಬರುವವರಿಗೆ, ಅವರವರ ವರಮಾನಕ್ಕೆ ತಕ್ಕಂತೆ ಬೇರೆ ಬೇರೆ ಮಟ್ಟದಲ್ಲಿ ವೃತ್ತಿ ತೆರಿಗೆಯನ್ನು ವಿಧಿಸಿದರು. ಕಳೆದ ವೇತನ ಪರಿಷ್ಕರಣದಿಂದ ಮತ್ತು ವರ್ಷೇ ವರ್ಷೇ ಸಿಗುವ ಇನ್‌ಕ್ರಿಮೆಂಟ್‌ಗಳಿಂದಲೂ ಸಾಮಾನ್ಯ ನಾಲ್ಕನೆ ದರ್ಜೆ ನೌಕರನ ಸಂಬಳವೂ 400-500 ರೂಪಾಯಿಗಳ ಮಟ್ಟಕ್ಕೆ ಬಂದಿರುತ್ತದೆ ರಾಜ್ಯದ ಬೊಕ್ಕಸಕ್ಕೆ ನಮ್ಮದೇ ಆದ ಆರ್ಥಿಕ ಶಕ್ತಿ ಇರಬೇಕು, ಕೇಂದ್ರವನ್ನು ನಾವು ಯಾವಾಗಲೂ ಕಾಯಬಾರದೆಂಬುದು ನನ್ನ ಅಭಿಪ್ರಾಯ. ವರಮಾನ ತೆರಿಗೆ ಕೇಂದ್ರ ಸರ್ಕಾರದ ಸಂಪನ್ಮೂಲವೆಂಬುದೂ ನನಗೆ ಗೊತ್ತು ಆದುದರಿಂದ, ತತ್ವಶಃವಾಗಿ ರಾಜ್ಯ ಸರ್ಕಾರದವರು ತೆರಿಗೆಯ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕೆನ್ನುವುದರಲ್ಲಿ ನನ್ನ ವಿರೋಧವಿಲ್ಲ. ಆದರೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುವಾಗ, ಜೀವನಕ್ಕೆ ಯಾವ ಮಾರ್ಗವೂ ಇಲ್ಲದೆ, ತನ್ನ ಶ್ರಮ ಶಕ್ತಿಯಿಂದಲೇ ಬದುಕುತ್ತಿರುವ ಮತ್ತು ತನ್ನ ಸಾಕುಬೇಕುಗಳನ್ನು ತೃಪ್ತಿಪಡಿಸಲಾರದಂತವನಿಂದ ತೆರಿಗೆ ವಸೂಲು ಮಾಡುವುದು ಬೇಡ. ಆದರೆ, ವೇತನದ ಜೊತೆಗೆ ವೃತ್ತಿ ತೆರಿಗೆಯ ಹಣವನ್ನು ಭರಿಸಿ, ಸಂಬಳವನ್ನು ಜಾಸ್ತಿ ಮಾಡಿ

ಅದರಲ್ಲಿ ಈ ತೆರಿಗೆಯನ್ನು ವಸೂಲ್ಮಾಡುವುದಾದರೆ ಅದಕ್ಕೆ ನನ್ನ ಆಕ್ಷೇಪವಿಲ್ಲ ಮಾರಾಟ ತೆರಿಗೆಯನ್ನು ಯಾವ ರೀತಿ ವಸ್ತುವಿನ ಮೇಲೆ ಕಂಪೆನಿಯವರು ಹಾಕಿ ಅದನ್ನು ಆ ನಂತರ ಕೊಡುವ ಹಾಗೆ ಇದನ್ನೂ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇನ್ನೂ ಕೇಂದ್ರ ಸರ್ಕಾರದವರು ರಾಷ್ಟ್ರೀಯ ವೇತನಾ ತತ್ವಕ್ಕೆ ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಕೇಂದ್ರ ಸರ್ಕಾರ ಒಂದು ವೇಳೆ ಒಪ್ಪಿದರೆ, ಅದು ದೇಶಾದ್ಯಂತ ಜಾರಿಗೆ ಬಂದರೆ ಅದನ್ನು ರಾಜ್ಯ ಸರ್ಕಾರದವರೂ ಕಡ್ಡಾಯವಾಗಿ ಜಾರಿಗೆ ತರಬೇಕಾಗುತ್ತದೆ. ಅದು ಬಿಟ್ಟು ಒಂದೇ ಒಂದು ರಾಜ್ಯದಲ್ಲಿ ರಾಷ್ಟ್ರೀಯ ವೇತನ ತತ್ವವನ್ನು ತರಲು ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಇಲ್ಲಿರುವ ಪ್ರಶ್ನೆ: ಯಾರು ತನ್ನ ಶ್ರಮಶಕ್ತಿಗನುಗುಣವಾಗಿ ಸರಿಯಾದ ಪ್ರತಿಫಲ ಸಿಕ್ಕದೇಯಿರುವವರಿಗೆ ವೃತ್ತಿ ತೆರಿಗೆಯಿಂದ ವಿನಾಯತಿ ದೊರೆಯಬೇಕು. ಈ ವೃತ್ತಿ ತೆರಿಗೆಯ ಭಾರ ಸಾಮಾನ್ಯರ ಮೇಲೆ ಬೀಳಬಾರದು. ಇಂದು ಅರ್ಥ ಸಚಿವರು ಸದನದಲ್ಲೇ ಇದ್ದಾರೆ. ಅವರೊಂದಿಗೆ ಮಾನ್ಯ ಕಾರ್ಮಿಕ ಸಚಿವರು ಸಮಾಲೋಚನೆ ನಡೆಸಿ, ವೃತ್ತಿ ತೆರಿಗೆಯಿಂದ ಸಾಮಾನ್ಯ ಜನರಿಗೆ ವಿನಾಯಿತಿ ಕೊಡಬೇಕೆಂದು ಪ್ರಾರ್ಥನೆ.

ವಿಧಾನಸೌಧದ ಸುತ್ತಲೂ ದುಡಿಯುವ ಜನ ತಮ್ಮ ಬೇಡಿಕೆಗಳು ಈಡೇರದ ಕಾರಣ ಟೆಂಟ್‌ಗಳನ್ನು ಹಾಕಿಕೊಂಡು ಅನ್ನ ಸತ್ಯಾಗ್ರಹಗಳನ್ನು ಮಾಡುತ್ತಿದ್ದಾರೆ. ಅಲ್ಲಿ ಮೂಲ ಅರೋಗ್ಯ ಕಾರ್ಯಕರ್ತರು, ಕಾಲೇಜು ವಿದ್ಯಾರ್ಥಿಗಳು, ಅಧ್ಯಾಪಕರು ಮುಂತಾಗಿ ಅನೇಕ ರೀತಿಯ ಸರ್ಕಾರಿ ನೌಕರರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರುಗಳು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸತ್ಯಾಗ್ರಹ ಮಾಡುತ್ತಿರುವುದು, ಮಗು ಉಪವಾಸವಿದ್ದರೆ ತಾಯಿ ಕರುಳು ಚುರ್ ಎನ್ನುವ ಹಾಗೆ, ತಮ್ಮ ಮನಸ್ಸು ಕರಗಬಹುದು ತಮ್ಮ ಕರುಳು ಚುರ್ ಎನ್ನಬಹುದು ಎನ್ನುವ ಆಸೆಯ ಉದ್ದೇಶದಿಂದಲೇ ಅವರು ಇಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ, ಅವರ ಬಗ್ಗೆ ತಾವೇನೂ ಆಶ್ವಾಸನೆ ಕೊಡುತ್ತಿಲ್ಲ, ಚರ್ಚೆಯನ್ನೂ ಮಾಡುತ್ತಿಲ್ಲ ತಮಗೆ ಕರುಳು ಇದೆಯೋ ಇಲ್ಲವೋ ಹೃದಯ ಇದೆಯೋ ಇಲ್ಲವೋ ಎನ್ನುವ ಅನುಮಾನ ಆ ಸತ್ಯಾಗ್ರಹಿಗಳಿಗೆ ಬಂದರೆ ಮುಂದೆ ಕಷ್ಟವಾಗಬಹುದು. ಅದುದರಿಂದ ಸರ್ಕಾರದವರು ಎಲ್ಲ ಕಡೆ ನಡೆಯುತ್ತಿರುವ ಚಳವಳಿಗಳ ಬಗ್ಗೆ ಸಹಾನುಭೂತಿ ತೋರಿಸಬೇಕು. ಈ ಸದನದ ಸದಸ್ಯರು, ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ನೌಕರರು ಮತ್ತು ಅವರ ಅಸೋಸಿಯೇಷನ್ನಿನವರು ಮತ್ತು ನೌಕರರ ಸಂಘದ ವೇದಿಕೆಯವರು ಪ್ರತ್ಯೇಕ ಪ್ರತ್ಯೇಕವಾಗಿಯಾದರೂ ಒಟ್ಟಿನಲ್ಲಿ ಒಂದೇ ಬೇಡಿಕೆಗಳಿಗೋಸ್ಕರ ಇಂದು ಅನ್ನ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬೇಡಿಕೆಗಳಿಗೆ ಸರ್ಕಾರ ತನ್ನ ಸಹಾನುಭೂತಿಯನ್ನು ತೋರಿಸಿ ಅವೆಲ್ಲವನೂ ಪರಿಶೀಲನೆ ಮಾಡಿ ಅವುಗಳನ್ನು ಈಡೇರಿಸುವುದಕ್ಕೆ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಚಾರ ಖಾತೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಹಲವಾರು ಸಣ್ಣ ಪತ್ರಿಕೆಗಳು ಅಸ್ತಿತ್ವದಲ್ಲಿದೆ. ಗ್ರಾಮಾಂತರ ಪ್ರದೇಶಗಳಿಗೆ ಸಣ್ಣ ಪತ್ರಿಕೆಗಳೇ ಸುದ್ದಿಯನ್ನು ಮುಟ್ಟಿಸುವುವು ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯಾ ಮುಂತಾದ ಪತ್ರಿಕೆಗಳು ಹಳ್ಳಿ ಪ್ರದೇಶಗಳಿಗೆ ಹೋಗುವುದಿಲ್ಲ. ಹಳ್ಳಿ ಪ್ರದೇಶಗಳಿಗೆ ಸುದ್ದಿಗಳನ್ನು ಮುಟ್ಟಿಸುವ ಸಣ್ಣ ಪತ್ರಿಕೆಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಡುವುದು ಅಗತ್ಯ. ಪತ್ರಿಕೆಯ ಸರ್ಕ್ಯುಲೇಷನ್ ಹಾಗೂ ಗಾತ್ರವನ್ನು ನೋಡಿಕೊಂಡು ಪ್ರೋತ್ಸಾಹ ಕೊಡುವ ನೀತಿಯನ್ನು ಕೈಬಿಡಬೇಕು. ಇಂದು ಪ್ರಕಟವಾಗುತ್ತಿರುವ ಅನೇಕ ಪತ್ರಿಕೆಗಳನ್ನು ನೋಡಿದರೆ, ಇವುಗಳಿಗೆ ಹೇಗೆ ದುಡ್ಡು ಕೊಡುವುದು ಅನ್ನಿಸುತ್ತಿದೆ. ಅವುಗಳಲ್ಲಿ ಅಕ್ಷರ ತಪ್ಪಿರುತ್ತವೆ, ಎಲ್ಲ ರೀತಿಯ ತಪ್ಪುಗಳೂ ಇರುತ್ತವೆ. ಇನ್ನು ಕೆಲವು ಪತ್ರಿಕೆಗಳಲ್ಲಿ ದೇಶದಲ್ಲಾಗುತ್ತಿರುವ ವಿಚಾರಗಳೇ ಇರುವುದಿಲ್ಲ, ಇಡೀ ಪತ್ರಿಕೆಯೆಲ್ಲವೂ ಜಾಹಿರಾತುಗಳಿಂದ ತುಂಬಿರುತ್ತದೆ. ಆ ಪತ್ರಿಕೆಗಳವರು ಕೇವಲ ಜಾಹಿರಾತುಗಳಿಗೋಸ್ಕರವೇ ಪತ್ರಿಕೆ ನಡೆಸುತ್ತಿದ್ದು ವರದಿ ಮತ್ತು ಸುದ್ದಿಗಳನ್ನು ಪ್ರಕಟಿಸುತ್ತಿಲ್ಲವಾದರೆ ಅವುಗವನ್ನು ನಾವು ಏತಕ್ಕೆ ದುಡ್ಡು ಕೊಟ್ಟು ಕೊಂಡುಕೊಳ್ಳಬೇಕು ? ಎನ್ನುವ ಭಾವನೆ ಬರುತ್ತದೆ. ಆದುದರಿಂದ ಜಾಹಿರಾತುಗಳನ್ನು ಕೊಡುವಾಗ ಯೋಚನೆ ಮಾಡಿ ಕೊಡಬೇಕು, ಬರೀ ದುಡ್ಡು ಕೊಡಬೇಕೆನ್ನುವುದೇ ಜಾಹಿರಾತುಗಳ ಉದ್ದೇಶವಲ್ಲ. ಈ ದೃಷ್ಟಿಯಿಂದ ಸುದ್ದಿಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಸಣ್ಣ ಪತ್ರಿಕೆಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಡಬೇಕು. ಕೇವಲ ಜಾಹಿರಾತುಗಳನ್ನು ಪ್ರಕಟಿಸಿ ಹಣ ಸಂಪಾದನೆ ಮಾಡುವ ಪತ್ರಿಕೆಗಳಿದ್ದರೆ, ಅಂತಹುಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಡಬೇಕಾಗಿಲ್ಲ. ಹಾಗೂ ಕೊಟ್ಟ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವುದನ್ನೂ ಸರ್ಕಾರದವರು ಕಡಮೆ ಮಾಡಬೇಕು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ದಕ್ಷಿಣ ಕನ್ನಡದ ತುಳು ಭಾಷೆಯಲ್ಲಿ ಮಂಗಳೂರಿನ ಆಕಾಶವಾಣಿಯಲ್ಲಿ, ಪ್ರಸಾರ ಮಾಡುತ್ತಿದ್ದಾರೆ ಈ ಆ ಭಾಷೆಯಲ್ಲಿ ಚಲನ ಚಿತ್ರಗಳೂ ಬರುತ್ತಿವೆ. ಅಂದರೆ ಆ ಭಾಷೆ ಪ್ರಚಾರ ಮಾಧ್ಯಮವಾಗುತ್ತಿದೆ. ಸರ್ಕಾರದವರು ಹಳ್ಳಿಗಾಡು ಪ್ರದೇಶಗಳಿಗೆ ಭೂಸುಧಾರಣೆ ಬಗ್ಗೆ, ಕೈಗಾರಿಕೆಗಳ ಕುರಿತು ಮತ್ತು ಸಣ್ಣ ಸಣ್ಣ ಕೈಗಾರಿಕೆಗಳ ಬೆಳವಣಿಗೆ ಹಾಗೂ ಮೀನುಗಾರಿಕೆ ಅಭಿವೃದ್ಧಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಾಮಾನ್ಯ ಜನರಿಗೆ ಮಾಹಿತಿ ಮುಟ್ಟಿಸಲು ತುಳು ಭಾಷೆಯಲ್ಲಿ ಲಘು ಪ್ರಕಟಣೆಗಳನ್ನು ಪ್ರಕಟಿಸಬೇಕೆಂದೂ ಮತ್ತು ಸರ್ಕಾರ ತುಳು ಭಾಷೆಯ ಅಭಿವೃದ್ಧಿಗೆ ಆಸಕ್ತಿ ವಹಿಸುವುದು ಸೂಕ್ತವೆಂದೂ ತಿಳಿಸಿ. ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಾಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀಗ್ನಾಳಿಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ವಾರ್ತಾ ಹಾಗೂ ಕಾರ್ಮಿಕ ಸಚಿವರು ತಂದಿರುವ ಬೇಡಿಕೆಗೆ ಬೆಂಬಲ ಸೂಚಿಸಿ ಎರಡು ಮಾತುಗಳನ್ನಾಡುವುದಕ್ಕೆ ಬಯಸುತ್ತೇನೆ. ವಾರ್ತಾ ಇಲಾಖೆ 100ಕ್ಕೆ 80 ಭಾಗ ಅನಕ್ಷರಸ್ತರಿಂದ ಕೂಡಿರತಕ್ಕ ಈ ದೇಶದಲ್ಲಿ ಬಹಳ ಮುಖ್ಯವಾದ ಇಲಾಖೆ ಮಾನ್ಯ ಸುಬ್ಬಯ್ಯಶೆಟ್ಟರು ಈ ಇಲಾಖೆ ಕಡಿಮೆ ಎಂದು ತಿಳಿದುಕೊಂಡಿದ್ದಾರೆ ಬಹಳ ತಪ್ಪಾಗುತ್ತದೆ. ವಾರ್ತಾ ಇಲಾಖೆಗಿಂತಲೂ ಪ್ರಾಮುಖ್ಯವಾದ ಇಲಾಖೆ ಇನ್ನೊಂದು ಇಲ್ಲ ಎಂದು ನನ್ನ ಅಭಿಪ್ರಾಯ 100ಕ್ಕೆ 80 ಭಾಗ ಅನಕ್ಷರಸ್ತರೂ ಇದ್ದರೂ ಕೂಡ ಅಕ್ಷರಸ್ತರ ಪೈಕಿ ಶೇಕಡ 5 ಭಾಗ ಕೂಡ ಪತ್ರಿಕೆಯನ್ನು ಓದುತ್ತಿಲ್ಲ ತಮ್ಮ ಇಲಾಖೆಯು ಎಷ್ಟು ಪ್ರಾಮುಖ್ಯವಾದುದು ಎಂಬುದು ಇದರಿಂದ ಗೊತ್ತಾಗುತ್ತದೆ. ನಾನು ವಾರ್ತಾ ಇಲಾಖೆಯ ಬಗ್ಗೆ ಕೆಲವು ಸೂಚನೆಗಳನ್ನು ಹೇಳಿದರೆ, ತಪ್ಪು ಭಾವಿಸಬೇಡಿ ತಮ್ಮ ಇಲಾಖೆಯಿಂದ ಡಾಕ್ಯುಮೆಂಟರಿ ಫಿಲ್ಮ ಮಾಡುತ್ತಿದ್ದೀರಿ ಆ ಫಿಲ್ಮಗಳಲ್ಲಿ ಬರುವುದು ಏನೆಂದರೆ ಮಂತ್ರಿಗಳು ಬಂದು ಅಸ್ತಿಭಾರ ಹಾಕಿದ್ದು ಪ್ರಾರಂಭೋತ್ಸವ ನೆರವೇರಿಸಿದ್ದು ಇಂಥದ್ದೇ ವರ್ತಮಾನ ಇರುತ್ತದೆ. ಪ್ರಚಲಿತ ಸಮಸ್ಯೆಗಳ ಮೇಲೆ ಕ್ಷಕಿರಣ ಬೀರತಕ್ಕ ವರ್ತಮಾನಗಳು ಇರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಇಂಥ ಚಿತ್ರಗಳನ್ನು ಕಡ್ಡಾಯವಾಗಿ ಪ್ರತಿಯೊಂದು ಸಿನಿಮಾಮಂದಿರದಲ್ಲಿಯೂ ಪ್ರದರ್ಶನ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಚಿತ್ರ ಹೇಗಿರಬೇಕೆದಂರೆ ನಗರ ನೈರ್ಮಲ್ಯದ ಬಗ್ಗೆ ಮಕ್ಕಳನ್ನು ಬೆಳೆಸತಕ್ಕ ವಿಚಾರದಲ್ಲಿ, ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳುಹಿಸತಕ್ಕ ವಿಚಾರದಲ್ಲಿ, ಕುಟುಂಬ ಯೋಜನೆ ವಿಚಾರದಲ್ಲಿ, ಇಂಥ ಜ್ವಲಂತ ವಿಚಾರಗಳ ಬಗ್ಗೆ ಜನತೆಯ ಹಿತದೃಷ್ಟಿಯಿಂದ ಚಿತ್ರಗಳನ್ನು ತೆಗೆಯುವುದಾದರೆ ಅದರಿಂದ ದೇಶದ ಹಾಗೂ ಜನತೆಯ ಕಲ್ಯಾಣ ಮಾಡಿದಂತಾಗುತ್ತದೆ ಎಂದು ನನ್ನ ಕಳಕಳಿಯ ಪ್ರಾರ್ಥನೆ. ಡಾಕ್ಯುಮೆಂಟರಿ ಫಿಲ್ಮಗಳು ಸಮಾರಂಭಗಳಿಗೆ ಹೊರತಾಗಿ ಬರುವುದೇ ಕಷ್ಟ. ಅಖಿಲ ಭಾರತ ಮಟ್ಟದಲ್ಲಿ ಕಾಶ್ಮೀರ ಮತ್ತು ಅರುಣಾಚಲ ಪ್ರದೇಶದಿಂದ ಈ ದೇಶಕ್ಕೆ ಸಂಬಂಧಪಟ್ಟ ವಿಚಾರವನ್ನು ದೊಡ್ಡದಾಗಿ ಚಿತ್ರಮಾಡಿ ಒಳ್ಳೆಯ ಬಣ್ಣದಲ್ಲಿ ತೆಗೆಯುತ್ತಾರೆ. ಆದರೆ, ಸಂಸ್ಥಾನದ ಮಟ್ಟದಲ್ಲಿ ಪ್ರದೇಶ ಮಟ್ಟದಲ್ಲಿ ಜ್ವಲಂತವಾದ ಸುವಸ್ಯೆಗಳನ್ನು ಕುರಿತು ಬೆಳಕಿಗೆ ತರತಕ್ಕ ಚಿತ್ರಗಳನ್ನು ತೆಗೆಯುತ್ತಿಲ್ಲ. ಈ ಒಂದು ವಿಚಾರದಲ್ಲಿ ತಾವು ಗಮನ ಕೊಟ್ಟರೆ ತಮಗೂ ಕೀರ್ತಿ ಸರ್ಕಾರಕ್ಕೂ ಕೀರ್ತಿ ಬರುತ್ತದೆ ಸರ್ಕಾರದಲ್ಲಿ ಆಗತಕ್ಕ ಜನಹಿತ ಕಾರ್ಯಕ್ರಮಗಳನ್ನು ಜನರಿಗೆ ಮನವರಿಕೆಯಾಗುವಂತೆ ಚಿತ್ರದ ಮೂಲಕ ಬೆಳಕಿಗೆ ತರಬೇಕು. ಉದಾಹರಣೆಗೆ ಋಣಪರಿಹಾರ ಕಾನೂನು ಮಾಡಿದ್ದೇವೆ, ಇನ್ನೂ ಅನೇಕ ಪ್ರಗತಿಪರವಾದ ಕಾನೂನುಗಳನ್ನು ಮಾಡಿದ್ದೇವೆ. ಅವುಗಳನ್ನು ಜನತೆಗೆ ಚಿತ್ರ ಮುಖಾಂತರ ತಿಳಿಸುವ ವ್ಯವಸ್ಥೆ ಮಾಡಿದರೆ ಜನತೆಗೆ ಅರಿವಾಗುತ್ತದೆ. ಭೂ ಸುಧಾರಣಾ ಕಾನೂನು ಪ್ರಕಾರ ಇವತ್ತು ಕೂಡ ಅರ್ಜಿ ಹಾಕದೇ ಇರತಕ್ಕ ಅನೇಕ ರೈತರು ಇದ್ದಾರೆ, ಕಾರಣ ಏನು ಎಂದರೆ ಅವರಿಗೆ ಓದು ಬರಹ ತಿಳಿಯದು. ಡಾಕ್ಯುಮೆಂಟರಿ ಚಿತ್ರಗಳ ಹಳ್ಳಿ ಹಳ್ಳಿಗಳಲ್ಲಿ ಕಾನೂನುಗಳನ್ನು ಪ್ರಚಾರ ಮಾಡಿದರೆ, ಅನೇಕ ಜನರಿಗೆ ಉಪಯೋಗ ಪಡೆಯುವುದಕ್ಕೆ ಅವಕಾಶವಾಗುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ತಮ್ಮ ಇಲಾಖೆ ಬಹಳ ಮುಖ್ಯವಾದುದು. ಏತಕ್ಕೆಂದರೆ, ನಾಗರೀಕನ ಜವಾಬ್ದಾರಿ ಅಂದರೆ ಎಲ್ಲರೂ ಕೂಡ ಸರ್ವಾಂಗೀಣವಾಗಿ ವಿದ್ಯಾಭ್ಯಾಸದಲ್ಲಿ ಮುಂದುವರಿಯಬೇಕಾಗುತ್ತದೆ. ಆದರೆ ನಮ್ಮಲ್ಲಿ ಇನ್ನೂ 50–100 ವರ್ಷಗಳು ಬೇಕಾಗಬಹುದು. ಚಿತ್ರದ ಮೂಲಕ ಪ್ರಚಲಿತ ಸಮಸ್ಯೆಗಳ ಬಗ್ಗೆ ನಾಗರೀಕ

ಜನತೆ ಯಾವ ರೀತಿ ನಡೆದುಕೊಳ್ಳಬೇಕು, ಸರ್ಕಾರಕ್ಕೂ ಮತ್ತು ಜನತೆಗೂ ಯಾವ ರೀತಿ ಸಂಪರ್ಕ ಇರಬೇಕು ಎನ್ನುವುದನ್ನು ಪ್ರಚಾರ ಮಾಡುವುದರಿಂದ ಒಳ್ಳೆಯ ಸಮಾಜವನ್ನು ಕಟ್ಟಲಿಕ್ಕೆ ಆದೀತು ಎನ್ನುವುದೇ ನನ್ನ ಕಳಕಳಿ.

ಇನ್ನು ತಾವು ಸಬ್ಸಿಡಿ 50 ಸಾವಿರ ರೂಪಾಯಿ ಕೊಡುತ್ತಿದ್ದೀರಿ. ಆದರೆ, 50 ಸಾವಿರ ರೂಪಾಯಿ ಕೊಡುವುದರಿಂದಲೇ ತೃಪ್ತಿಪಡೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರ ಎಂಥ ಚಿತ್ರ ಇರಬೇಕು ಚಿತ್ರದ ಮೌಲ್ಯ ಯಾವರೀತಿ ಇರಬೇಕು, ಎನ್ನುವ ಬಗ್ಗೆ ನಿಯಮ ಏತಕ್ಕೆ ಮಾಡಬಾರದು. ಅಂಥ ನಿಯಮ ಇಲ್ಲದೇ ಇರುವುದರಿಂದ ಇವತ್ತಿನ ಚಿತ್ರಗಳಲ್ಲಿ ಏನಿದೆ ಎಂದರೆ, ಹೆಣ್ಣು ಮಗು ಹುಟ್ಟಿದ್ದು, ಗಂಡು ಮಗು ಹುಟ್ಟಿದ್ದು ಗಂಡು ಹೆಣ್ಣಿನ ಅಂತ್ಯ ದುರಂತ ಇಷ್ಟನ್ನು ಬಿಟ್ಟರೆ. ಇವತ್ತು ಬೇರೆ ಚಿತ್ರವನ್ನು ನೋಡುವುದೇ ಅಪರೂಪ. ಇತ್ತೀಚೆಗೆ ಕನ್ನಡದಲ್ಲಿ ಬಹಳಷ್ಟು ದೊಡ್ಡ ದೊಡ್ಡ ಚಿತ್ರಗಳು ಬರುತ್ತಿವೆ, ಕೆಲವು ಪ್ರಾಯೋಗಿಕ ಚಿತ್ರಗಳು ಕನ್ನಡದಲ್ಲಿ ಬಂದು ಒಳ್ಳೆಯ ಹೆಸರುಗಳಿಸಿವೆ ಅಮೆಚ ರಾಕ್ ಆಕ್ಟರ್ಸ್‌ಗಳಿಂದ ಉತ್ತಮ ಚಿತ್ರಗಳು ಬರಬೇಕು ಇತ್ತೀಚೆಗೆ ಬಿಡುಗಡೆಯಾದ 'ತಬ್ಬಲಿ ನೀನಾದೆ ಮಗನೆ' ಚಿತ್ರವೂ ಕೂಡ ಬಹಳ ಚೆನ್ನಾಗಿದೆ. ಇಂಥ ಚಿತ್ರಗಳು ಬರಬೇಕಾದರೆ ಸರ್ಕಾರದ ಆಶೀರ್ವಾದ ಸಂಪೂರ್ಣವಾಗಿ ಇರಬೇಕು. ಇಂಥ ಸಿನಿಮಾಗಳಿಗೆ ಪ್ರೋತ್ಸಾಹ ಕೊಡುತ್ತಾ ಹೋದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಆದರಿಂದ ಜನತೆಯ ಕಲ್ಯಾಣ ಸಾಧನೆಯಾಗುತ್ತದೆ ಆದುದರಿಂದ ಈ ವಿಚಾರದಲ್ಲಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಮೊನ್ನೆ ತಾನೇ ಗೆಳೆಯ ತಿಮ್ಮಪ್ಪನವರು ''ಕರಾವಳಿ'' ಚಿತ್ರದ ಬಗ್ಗೆ ಗಮನಸೆಳೆಯುವ ಸೂಚನೆಯನ್ನು ಶಾಸನ ಸಭೆ ಮುಂದೆ ತಂದಿದ್ದರು. ನಾನು ಮಧ್ಯೆ ಪ್ರವೇಶಿಸುವುದು ಸರಿಯಲ್ಲವೆಂದೂ ಅಲ್ಲದೆ ಅಧ್ಯಕ್ಷರು ಕೂಡ ಅಪ್ಪಣೆ ಕೊಡುತ್ತಾ ಇರಲಿಲ್ಲೆಂದು ಭಾವಿಸಿ ನಾನು ತೆಪ್ಪಗೆ ಕೂತುಕೊಂಡೆ. ಬಹುಶಃ ಸುಬ್ಬಯ್ಯಶೆಟ್ಟರು ಬಹುಮಾನ ವಿತರಣೆ ಮಾಡುವ ಸಂದರ್ಭ ಇದೆ ಇದೆ ಎಂದು ತಂದರೇನೋ ? ಕರಾವಳಿ ಚಿತ್ರವನ್ನು ಏತಕ್ಕೆ ಬಹಿಷ್ಕರಿಸಿದ್ದಾರೆ, ಯಾವುದೋ ಒಂದು ಸಮಾಜದ ಒಂದು ಅಂಶದ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ಬಹಿಷ್ಕಾರಿಸಿದ್ದಾರೆಯೋ ಏನೋ ನನ್ನಗೆ ತಿಳಿಯದು. ಕರಾವಳಿ ಚಿತ್ರ ನಿಜವಾಗಿಯೂ ಚೆನ್ನಾಗಿ ಇರತಕ್ಕ ಚಿತ್ರ, ಒಂದು ಸಮಾಜದ ಸಮಸ್ಯೆಯನ್ನು ಎತ್ತಿ ತೋರಿಸತಕ್ಕ ಚಿತ್ರ, ಆ ಸಮಾಜದಲ್ಲಿರುವ ಮೌಢ್ಯಗಳನ್ನು ಕಂದಾಚಾರಗಳನ್ನು ಬೆಳಕಿಗೆರತಕ್ಕ ಅಂದರೆ, ದೊಡ್ಡ ಮೀನು, ಸಣ್ಣ ಮೀನನ್ನು ತಿನ್ನತಕ್ಕ ರೀತಿಯಲ್ಲಿ ಬಹಳ ಚೆನ್ನಾಗಿ ಚಿತ್ರವನ್ನು ಚಿತ್ರಿಸಿದ್ದಾರೆ. ಆ ಚಿತ್ರದಿಂದ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಅನುಕೂಲವಾಗುತ್ತಿತ್ತು, ಅಂಥಾದನ್ನು ಅಲ್ಲಿ ಪ್ರದರ್ಶನ ಮಾಡಬಾರದು, ಎಂದು ಮಾಡಿರುವುದರಿಂದ ಅಲ್ಲಿನ ಸಮಾಜಕ್ಕೆ ಅದರಿಂದ ಅನ್ಯಾಯವಾಯಿತೋ ಏನೋ ಎನ್ನುವ ವಾದ ನನ್ನದು ಕಾರಣ, ದಕ್ಷಿಣ ಕನ್ನಡ ಜಿಲ್ಲೆಯ ಜನ ಜೀವನವನ್ನು ಬಿಂಬಿಸತಕ್ಕ ಚಿತ್ರ, ಅಲ್ಲಿರತಕ್ಕ ವಿದ್ಯಾವಂತ ಜನ ವಿದ್ಯಾವಂತರಲ್ಲದವರನ್ನು ಯಾವರೀತಿ ಶೋಷಣೆ ಮಾಡುತ್ತಾರೆ ಎನ್ನುವ ವಿಷಯವನ್ನು ವಿಹಂಗಮವಾಗಿ ಚಿತ್ರಿಸಿರುವ ಆ ಚಿತ್ರವನ್ನು ಬಹಿಷ್ಕರಿಸಿರುವುದರಿಂದ ಅನ್ಯಾಯವಾಗಿದೆಯೆಂದು ನಾನಾದರೂ ಭಾವಿಸುತ್ತೇನೆ, ಆದುದರಿಂದ ಇದನ್ನು ಪರಿಶೀಲನೆ ಮಾಡಬೇಕು.

ಇನ್ನು ಚಲನಚಿತ್ರಗಳ ಕಥೆಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ, ಇವತ್ತು ಸಮಾಜವನ್ನು ಹೊಗಳತಕ್ಕ ಕತೆಯನ್ನು ಬರೆಯುವುದು ಸಾಧ್ಯ. ಆದರೆ ಸಮಾಜದ ನ್ಯೂನತೆಯನ್ನು ಎತ್ತಿಹಿಡಿಯತಕ್ಕದ್ದು ಚಲನಚಿತ್ರ ತಯಾರು ಮಾಡತಕ್ಕವರ ಜವಾಬ್ದಾರಿಯಾಗಿರುತ್ತದೆ. ಇವತ್ತು ನೇರವಾಗಿ ಒಂದು ಸಾಮಾಜಿಕ ಸಮಸ್ಯೆಯನ್ನು ಕುರಿತಂತ ಚಿತ್ರವನ್ನು ಬಹಿಷ್ಕರಿಸಿದ್ದಾರೆ, ಇದರ ಬಗ್ಗೆ ನಾನು ಮತ್ತೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ, ಇವತ್ತು ತಮ್ಮ ಇಲಾಖೆ ಬಹಳ ಚುರುಕಾಗಿ ಕೆಲಸ ಮುಂದುವರಿಸಬೇಕಾಗಿದೆ ಇವತ್ತು ತಮ್ಮ ಇಲಾಖೆಯಿಂದ ಬರುತ್ತಿರುವ ಡಾಕ್ಯುಮೆಂಟರಿ ಫಿಲ್ಮಗಳನ್ನು ವರ್ಷದಲ್ಲಿ ಎಷ್ಟು ದಿವಸ ಪ್ರದರ್ಶನ ಮಾಡುತ್ತಾರೆ. ಇವತ್ತು ನಮ್ಮ ಕಡೆಗೆ ಡಾಕ್ಯುಮೆಂಟರಿ ಫಿಲ್ಮಗಳನ್ನು ನೋಡುವುದೇ ಅಪರೂಪವಾಗಿದೆ. ತಾವು ಸರ್ಕ್ಯುಲರ್ ಕಳುಹಿಸಿದರೆ ಹಾಕುತ್ತಾರೆ, ತಿಂಗಳಿಗೆ ಎರಡು ತಿಂಗಳಿಗೆ ಒಂದುಸಾರಿ ನೋಡುತ್ತಿದ್ದೇವೆ. ಡಾಕ್ಯುಮೆಂಟರಿ ಫಿಲ್ಮಗಳ ಉದ್ದೇಶ ಅವುಗಳ ಉಪಯೋಗವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಸಾಮಾಜಿಕ ಸಮಸ್ಯೆಗಳನ್ನು ಕ್ಷಕಿರಣ ಬೀರತಕ್ಕ ಚಿತ್ರಗಳನ್ನು ತೆಗೆದು ಅವುಗಳನ್ನು ಪ್ರತಿದಿನವೂ ಪ್ರದರ್ಶನ ಮಾಡತಕ್ಕ ಕೆಲಸವನ್ನು ಮಾಡಬೇಕು.

ಅಧ್ಯಕ್ಷರೆ, ಇನ್ನು ಕಾರ್ಮಿಕ ಮಂತ್ರಿಗಳ ಬೇಡಿಕೆ ಬಗ್ಗೆ ಕೆಲವು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ತುಂಗಭದ್ರ ಷುಗರ್ ಫ್ಯಾಕ್ಟರಿಯ ನೌಕರರಿಗೆ ಕೆಲಸವಿಲ್ಲದಂತ ಪರಿಸ್ಥಿತಿ ಬಂದಿದೆ. ಈ ಒಂದು ತುಂಗಭದ್ರ ಷುಗರ್ ಫ್ಯಾಕ್ಟರಿಗೆ ಕೊಟ್ಟಿಗಟ್ಟಲೆ ಲಾಭ ಇತ್ತು. ಇವೊತ್ತು ಮುಖೇಷ್ ಟೆಕ್ಸ್‌ಟೈಲ್ ಎಂದು ಹೇಳಿ, ನಾಮಧೇಯ ಬದಲು ಮಾಡಿ ಲುಕ್ಸಾನ್ನಲ್ಲಿ ಇದ್ದಂತಹ ಫ್ಯಾಕ್ಟರಿಯನ್ನು ತಂದು, ಈ ತುಂಗಭದ್ರ ಷುಗರ್ ಫ್ಯಾಕ್ಟರಿಗೆ ಸೇರಿಸಿ, ಈ ಷುಗರ್ ಫ್ಯಾಕ್ಟರಿಯನ್ನು ಮುಚ್ಚತಕ್ಕ ಕೆಲಸ ನಡೆಯುತ್ತಿದೆ. ಇದರಿಂದ ನೂರಾರು ಜನರಿಗೆ ತೊಂದರೆಯಾಗುತ್ತದೆ, ಈ ಬಗ್ಗೆ ತಮಗೆ ಈಗಾಗಲೇ ಅರ್ಜಿಗಳು ಬಂದಿರಬಹುದು ಎಂದು ಕಾಣುತ್ತದೆ, ಈ ಒಂದು ಕಾರ್ಖಾನೆಯಲ್ಲಿ ಸಹಸ್ರಾರು ಜನ ಕಾರ್ಮಿಕರು ಇದ್ದಾರೆ, ಆದುದರಿಂದ ಇದರ ಬಗ್ಗೆ ಅಮೂಲಾಗ್ರವಾಗಿ ಪರಿಶೀಲಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಹೇಳಬೇಕು ಎಂದರೆ ಶಿವಮೊಗ್ಗದಲ್ಲಿ ಸರ್ಕಾರದ ಮರಗಳನ್ನು ಕೊಯ್ಯುತಕ್ಕ ಕಾರ್ಖಾನೆ ಮತ್ತು ಫುಡ್ ಪ್ರಿಸರ್‌ವೇಷನ್ ಪ್ಲಾಂಟ್ ಕಾರ್ಖಾನೆ ಇದೆ. ಆ ಕಾರ್ಖಾನೆಗಳಲ್ಲಿ ನೂರಾರು ಜನ ಕಾರ್ಮಿಕರು ಕೆಲಸದಲ್ಲಿ ಇದ್ದಾರೆ, ಅಲ್ಲಿ ಏನಾಗುತ್ತಿದೆ ಎಂದರೆ, ಒಂದು ಸ್ವಲ್ಪ ದಿವಸ ಒಂದು ಸೆಕ್ಷನ್ ಕ್ಲೋಸ್ ಮಾಡಿ ಅಲ್ಲಿ ಕೆಲಸ ಮಾಡುತ್ತಾ ಇದ್ದಂತಹವರನ್ನು ಮನೆಗೆ ಕಳುಹಿಸುವುದು, ಮತ್ತೊಂದು ಸ್ವಲ್ಪ ದಿವಸದ ನಂತರ ಇನ್ನೊಂದು ಸೆಕ್ಷನ್ ಕ್ಲೋಸ್ ಮಾಡುವುದು ಈ ರೀತಿ ನಡೆಯುತ್ತಿದೆ. ಅವರಿಗೆ ಹೇಳುವವರು, ಕೇಳುವವರು ಯಾರು ಇಲ್ಲ. ಅಲ್ಲಿ ಬಿಲ್ಲನನಾಯಕ ಎಂಬ ಆಫೀಸರ್ ಇದ್ದಾರೆ, ಅವರು ತಮ್ಮ ಅರಣ್ಯ ಇಲಾಖೆಯಲ್ಲಿ ಇಲ್ಲದಸಲ್ಲದ ಅಡ್ವಾನ್ ಮಾಡಿಕೊಂಡು, ಎಲ್ಲಾ ವಿಧದಲ್ಲೂ ಪರಿಣಿತರಾದಂತಹವರನ್ನು ಸರ್ಕಾರದವರು ಆ ಕಾರ್ಖಾನೆಯಲ್ಲಿ ಹಾಕಿದ್ದಾರೆ.

ಶ್ರೀ ಸಿ.ಎನ್. ಪಾಟೀಲ್.—ಇದನ್ನು ಫಾರೆಸ್ಟ್ ಡಿಮ್ಯಾಂಡ್ ಬಂದಾಗ ಮಾತನಾಡಬಹುದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇದು ಫಾರೆಸ್ಟ್ ಡಿಮ್ಯಾಂಡ್ ಅಲ್ಲ ಎನ್ನತಕ್ಕ ಅರಿವು ನನಗೆ ಇದೆ, ಅಲ್ಲಿ ಅವರು ಕಾರ್ಮಿಕರಿಗೆ ಯಾವರೀತಿ ಕಠೋರವಾಗಿ ಇದ್ದಾರೆ, ಯಾವರೀತಿ ಸಿಂಹಸ್ವಪ್ನವಾಗಿದ್ದಾರೆ ಎನ್ನುವುದನ್ನು ಹೇಳುತ್ತಿದ್ದೇನೆ. ಅಲ್ಲಿಯ ಕಾರ್ಮಿಕರು ಸುಮಾರು ನಾಲ್ಕೈದು ವರ್ಷಗಳಿಂದಲೂ ನಮ್ಮನ್ನು ಖಾಯಂ ಆಗಿ ಮಾಡಬೇಕು. ಎನ್ನತಕ್ಕ ಬೇಡಿಕೆಯನ್ನು ಇಡುತ್ತಿದ್ದಾರೆ, ಅವರಿಗೆ ಯಾವ ಒಂದು ಗ್ರ್ಯಾಚ್ಯುಟಿ ಇಲ್ಲ. ಅವರು 20 ವರ್ಷವಾದರೂ ಟೆಂಪರರಿಯಾಗಿ ಇರಬೇಕಾಗುತ್ತದೆ, ಆದುದರಿಂದ ಅವರನ್ನು ತ್ರಿಶಂಕುಸ್ವರ್ಗದಿಂದ ಮುಕ್ತಾಯ ಮಾಡಬೇಕು ಎಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI ABDUL KHUDDUS ANWAR (Bhadravathi).—Madam Chairman, while opposing this demand I want to bring to the notice of the Government some of the irregularities that have been committed by the Labour and Employment Department. Most of these Acts have been only published but have not been properly implemented. The Department is not taking care to impl ment some of these Acts. The Labour Department officers are not pulling up to implement the statutes law relating to Visveswaraya Iron & Steel Ltd, M.P.M. and Tungabhadra Sugar Factory and for having not implimented is taken against the management this officer thnik that They are super human beings, I.A.S. officers who think that nobody can question them. Even our Ministers are not in a position to question them.

SRI C.N. PATIL.—The Labour Minister can take action against the lapses. Let the hon'ble Member bring any specific instances to my notice.

SRI ABDUL KHUDDUS ANWAR.—The Labour Department is under the control of these people. There are so many atrocities committed by them. The Hon'ble Minister is aware that four of the office bearers of the M.P.M were dismissed without any reason In spite of our repeated request to the Government and to the Labour Minister; the Department has not taken any action and the Minister was pleased to say that let the matter be referred to adjudication. But it is not a matter to be referred to adjudication. It is a matter of humanitarian consideration and justice should be done immediately. The Labour Officer or the Labour Commissioner should intervene and settle the issue by party negotiation. The appeal is pending with the Hon'ble Minister. Demonstrations have been there and people are performing satyagraha and situation is restrained ಅಲ್ಲಿ ೨೪ ಗಂಟೆಯೊಳಗೆ ಕಾರ್ಮಿಕರುಗಳನ್ನು ಬಿಟ್ಟು ಕಳುಹಿಸಿದ್ದಾರೆ. ಆದುದರಿಂದ ತಾವು ದಯವಿಟ್ಟು ಅವರನ್ನು ಇಮೀಡಿಯಟ್ ಆಗಿ ರೀಇನ್‌ಸ್ಟೇಟ್ ಮಾಡುವುದಕ್ಕೆ ಆಜ್ಞೆ ಮಾಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

Even during worst British region such action was not taken there are no bonded labour in my district They were paid Rs. 300 per year with two uniforms. Ultimately we said they should be paid Rs. 60 per month with food or Rs. 90 without food. What has happened is that about 6000 of them have been thrown out o job on account of our political interferance Not even a single bonded labourer has been rehabilitated. I would request the Hon'ble Minister to see that they are given relief and rehabilitated and recommend from the cluches of politicians.

Last time our Chief Minister was kind enough to say that the case of working journalists will be considered. I would request him to see that their condition is improved.

Finally I would request the Government to see that bonus for the year 1975-76 is paid to the Iron and Steel workers, as promised by you and Hon'ble Minister for Industries.

It was assumed that election to the Labour Union of VISL will be conducted Unfortunately though it is past two years no elections are conducted. The practice of contract labour is not abolished. Even though Contract Labour Abolition Act has been passed, the department has not forced the mangment of ISL to implemented it. The people at the helm of affairs do not like to touch this problem. What has happened is thousands of workers have been engaged in the VISL as contract labourers and nearly 7000 workers are still working in the mines on a meagre wage. Though the Government of India has issued a directive to see that under the Mines Act they must be paid minimum wage, they are not paid. because some interested parties are

exploiting I reuest the Government to see that minimum wage is paid to the mines workers and the factory workers and Contract Labour Abolition Act is implemented.

With these words I thank the Chair for the opportunity given to me to speak.

† ಶ್ರೀ ಕೆ.ಆರ್. ಶ್ರೀನಿವಾಸುಲು (ಶಾಂತಿನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗ ನಮ್ಮ ಮುಂದೆ ಮಂಡಿಸಿರತಕ್ಕ 28 ಮತ್ತು 29 ಅಂದರೆ ವಾರ್ತಾ ಪ್ರಕಟಣೆ ಮತ್ತು ಕಾರ್ಮಿಕ ಇಲಾಖೆಯ ಬೇಡಿಕೆಗಳು ಏನಿವೆ ಇವು ನಿಜವಾಗಿಯೂ ಬಹಳ ಒಳ್ಳೆಯ ಬೇಡಿಕೆಗಳು ಎಂದು ಹೇಳುತ್ತೇನೆ. ಆದರೆ ಈ ಎರಡೂ ಇಲಾಖೆಯ ಸಚಿವರು ಕೇಳಿರತಕ್ಕ ಬೇಡಿಕೆಗಳು ಏನಿವೆ ಇವು ಏನೇನೂ ಸಾಲವು. ವಾರ್ತಾ ಇಲಾಖೆಯವರು ಕೇಳಿರತಕ್ಕದ್ದು ಕೇವಲ 2 ಕೋಟಿ ರೂಪಾಯಿಗಳು ಮಾತ್ರ. ಇದು ಯಾವ ಮೂಲೆಗೂ ಸಾಲುವುದಿಲ್ಲ. ಕನಿಷ್ಟ ಪಕ್ಷ 5 ಕೋಟಿ ರೂಪಾಯಿಗಳನ್ನಾದರೂ ಕೇಳಬೇಕಾಗಿತ್ತು. ಇವತ್ತು ಅಮೇರಿಕ, ರಷ್ಯ ಮುಂತಾದ ಮುಂದುವರಿದ ದೇಶಗಳಲ್ಲಿ ಈ ಪಬ್ಲಿಸಿಟಿ ಯಾವ ಮಟ್ಟದಲ್ಲಿದೆ? ಈ ಇಲಾಖೆಗಳು ಎಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ ಎಂಬುದನ್ನು ತಾವು ಹೋಗಿ ನೋಡಿದರೆ ಗೊತ್ತಾಗುತ್ತದೆ. ಅವರು ಈ ಇಲಾಖೆ ಬಹಳಷ್ಟು ಹಣವನ್ನು ಖರ್ಚುಮಾಡುತ್ತಾರೆ ಎಂದು ಕೇಳಿ ಬಂದಿದ್ದೇವೆ.

ಮಾನ್ಯ ಅಧ್ಯಕ್ಷಿಣಿಯವರೆ ನಮ್ಮ ಮಾನ್ಯ ಮಿತ್ರರು ಈಗತಾನೆ ಹೇಳಿದಂತೆ ಸುಮಾರು 100ಕ್ಕೆ 80 ಜನ ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಯಾವುದೇ ಒಂದು ದೇಶದ ಸಂಸ್ಕೃತಿ ಜನತೆಗೆ ಗೊತ್ತಾಗಬೇಕಾದರೆ ಪತ್ರಿಕೆಗಳು, ಸಿನಿಮಾ ಮತ್ತು ರೇಡಿಯೋ ಇವು ಮಾಧ್ಯಮಗಳು. ಇವತ್ತು ನಮ್ಮ ಪತ್ರಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾದರೆ ಅವರಲ್ಲೂ ಸಣ್ಣ ಪತ್ರಿಕೆಗಳು ಮತ್ತು ದೊಡ್ಡ ಪತ್ರಿಕೆಗಳು ಎಂದು ಎರಡು ರೀತಿ ಇವೆ ಈ ದೊಡ್ಡ ಪತ್ರಿಕೆಗಳು ಕೇವಲ ದೊಡ್ಡ ದೊಡ್ಡ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಇವು ಗ್ರಾಮಾಂತರ ಪ್ರದೇಶಗಳಿಗೆ ಅಷ್ಟು ಹೋಗುವುದಿಲ್ಲ. ಇದರಿಂದಾಗಿ ಹಳ್ಳಿಗಳ ಕಡೆ ವಿಷಯಗಳು ತಿಳಿಯುವುದು ಕಷ್ಟವಾಗುತ್ತದೆ. ಅನೇಕ ಕಡೆಗಳಲ್ಲಿ ನಾವು ಪ್ರತಿನಿತ್ಯ ನೋಡುತ್ತಿರುತ್ತೇವೆ ಒಂದು ಪೇಪರ್ ಇದ್ದರೆ ಆದನ್ನು 5-6 ಜನ ಸೇರಿಕೊಂಡು ಓದುತ್ತಿರುತ್ತಾರೆ. ನಾನು ಹೇಳುವುದೇನೆಂದರೆ ಈ ಪತ್ರಿಕೆಗಳು ಹಳ್ಳಿಗಳ ಕಡೆಗೂ ಹೋಗಿ ಜನಗಳಿಗೆ ಸಮಾಚಾರ ತಿಳಿಯುವಂತೆ ವ್ಯವಸ್ಥೆ ಮಾಡಬೇಕು.

ಮಾನ್ಯ ಅಧ್ಯಕ್ಷಿಣಿಯವರೆ, ಇನ್ನು ಫಿಲಂಸ್ ಬಗ್ಗೆ ಅಂದರೆ ಸಿನಿಮಾಗಳ ಬಗ್ಗೆ ಹೇಳುವುದಾದರೆ, ತಾವೂ ನೋಡಿರುವಂತೆ ಮೊದಲು ನಮ್ಮ ದೇಶದಲ್ಲಿ ಇಂಗ್ಲೀಷ್ ಮತ್ತು ಹಿಂದಿಫಿಲಂಗಳು ಬಹಳವಾಗಿ ಬಜಾರ್‌ನಲ್ಲಿದ್ದುವು ಕನ್ನಡಸಿನಿಮಾಗಳು ಬಹಳ ಕಡಮೆ ಬರುತ್ತಿದ್ದುವು. ಇದಕ್ಕೆ ಕಾರಣ ಇಂಗ್ಲೀಷ್ ಮತ್ತು ಹಿಂದಿ ಚಿತ್ರಗಳಲ್ಲಿ ಒಳ್ಳೊಳ್ಳೆ ನ್ಯಾಚುರಲ್ ಸೀನ್ಸ್ ಒಳ್ಳೊಳ್ಳೆ ನಟನಟಿಯರು, ಒಳ್ಳೆಯ ಸಂಗೀತ ಇಂಥಾದ್ದೆಲ್ಲಾ ಇರುವುದರಿಂದ ಅವಕ್ಕೆ ಬೇಡಿಕೆ ಹೆಚ್ಚು ಇದೆ ನಾವು ಇಥಿಯೋಪಿಯ USA U S S.R, ಮತ್ತು ಯುಗೋಸ್ಲಾವಿಯ ಮುಂತಾದ ದೇಶಗಳಿಗೆ ರಫ್ತು ಆಗಿರುವುದನ್ನು ಕೇಳಿದರೆ ಬಹಳ ಸಂತೋಷ ವಾಗುತ್ತದೆ ಮೊಟ್ಟಮೊದಲನೇ ಸಾರಿಗೆ ಕನ್ನಡ ಚಿತ್ರಗಳು International Market ನ್ನು ಸೇರಿರುವುದು ಅದೇರೀತಿ ನಾವು ಕೂಡ ನಮ್ಮ ದೇಶದಲ್ಲಿರುವ ನಟನಟಿಯರಿಗೆ, ನಿರ್ದೇಶಕರಿಗೆ ಚಿತ್ರಗ್ರಾಹಕರಿಗೆ, ಸಂಗಿತ ನಿರ್ದೇಶಕರಿಗೆ ಪ್ರೋತ್ಸಾಹ ಕೊಟ್ಟು ಇವರೂ ಕೂಡ ತಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶವನ್ನು ಮಾಡಿಕೊಡಬೇಕು. ನಮ್ಮ ದೇಶದಲ್ಲ ಒಳ್ಳೊಳ್ಳೆ ನ್ಯಾಚುರಲ್ ಸೀನ್ಸ್ ಇವೆ. ನಮ್ಮ ಕನ್ನಡ ನಾಡು ಚಿನ್ನದ ನಾಡು, ನಮ್ಮ ಕನ್ನಡ ಶ್ರೀಗಂಧದ ಬೀಡು ಎಂಬುದನ್ನು ಹೊರದೇಶದವರಿಗೆ ತೋರಿಸಿಕೊಡಲು ಅವಕಾಶವನ್ನು ಮಾಡಿ ಕೊಡಬೇಕು. ಈ ಚಿತ್ರಗಳನ್ನು ತೆಗೆಯುವುದೂ ಕೂಡ ಅಷ್ಟು ಸುಲಭವಾದುದಲ್ಲ. ಲಕ್ಷಾಂತರ ರೂಪಾಯಿಗಳನ್ನು ಅದರ ಮೇಲೆ ಹಾಕಬೇಕಾಗುತ್ತದೆ, ಈ ಚಿತ್ರಗಳನ್ನು ತೆಗೆಯಲು ಹೋಗಿ ಅನೇಕ ಜನ ತಮ್ಮ ಮನೆ ಮಠಗಳನ್ನು ಮಾರಿಕೊಂಡು ಹೋಗಿದ್ದಾರೆ. ಉದಾಹರಣೆ ಹೇಳುವುದಾದರೆ ಗುಬ್ಬಿ ವೀರಣ್ಣನವರು ಕೊಟ್ಟೂರು ಬಸಪ್ಪನವರು ಹೊನ್ನಪ್ಪಭಾಗವತರು, ಮಲ್ಲಪ್ಪನದರು ಇನ್ನೂ ಮುಂತಾದವರು ಚಿತ್ರರಂಗದಲ್ಲಿ ಹೆಸರಾದವರು ನಾವು ಇವತ್ತು ಈ ಕನ್ನಡ ಚಿತ್ರ

ಗಳಿಗೆ ಸಬ್ಸಿಡಿ ಕೊಡದೇ ಹೋಗಿದ್ದರೆ ಇಷ್ಟು ಚಿತ್ರಗಳು ಬರುತ್ತಲೇ ಇರಲಿಲ್ಲ. ಆದರೆ ಈಗ ಕೊಡುತ್ತಿರುವ ಸಬ್ಸಿಡಿ ಹಣ ಏನಿದೆ ಇದು ಸಾಲದು ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕು. ''ಕಲರ್ ಫಿಲಂಸ್‌ಗೆ'' ಕೂಡ ಇನ್ನೂ ಹೆಚ್ಚು ಸಬ್ಸಿಡಿ ಹಣವನ್ನು ಕೊಡಬೇಕು ಹಿಂದೆ ನಾವು ನಮ್ಮ ಮಕ್ಕಳಿಗೆ ಆಡಿಯೋ ವಿಜುಯಲ್ ಎಜುಕೇಷನ್ ಎಂದು ಇಟ್ಟು ಆ ಮಕ್ಕಳಿಗೆ ಇದು ಕುರಿ, ಇದು ಆನೆ ಎಂದು ತೋರಿಸುತ್ತಿದ್ದೆವು. ಈಗ ಅದು ಕಡಿಮೆಯಾಗುತ್ತಿದೆ. ಹಿಂದೆ ಬರುತ್ತಿದ್ದ ಚಿತ್ರಗಳು ಬಹಳ ಕೆಳದರ್ಜೆಯಲ್ಲಿರುತ್ತಿದ್ದುವು ಕಾರಣ ಅವರು ಹೆಚ್ಚು ಹಣವನ್ನು ಆ ಚಿತ್ರಗಳ ಮೇಲೆ ಹಾಕಲು ಸಾಧ್ಯವಿರಲಿಲ್ಲ ಇವತ್ತು ನಮ್ಮ ರಾಜ್ಯದಲ್ಲಿ ಚಲನಚಿತ್ರಗಳಿಂದ ಸುಮಾರು 70 ಕೋಟಿ ರೂಪಾಯಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುತ್ತಿದೆ. ಈ ಆದಾಯದಲ್ಲಿ ಕನಿಷ್ಟ 5-6 ಕೋಟಿ ರೂಪಾಯಿ ಯಷ್ಟಾದರೂ ಕನ್ನಡ ಚಿತ್ರಗಳಿಗೆ 'ಸಬ್ಸಿಡಿ' ರೂಪ ದಲ್ಲಿ ಕೊಟ್ಟರೆ ಅನುಕೂಲವಾಗುತ್ತದೆ ಮತ್ತು ಇದರ ಜೊತೆಗೆ ಕನ್ನಡ ಚಲನಚಿತ್ರ ನಟನಟಿಯರಿಗೂ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಈಗ 5-6 ವರ್ಷಗಳಿಗಿಂತ ಹಿಂದೆ ಬಹಳ ಕಡಿಮೆ ಸಂಖ್ಯೆಯಲ್ಲಿ ಬರುತ್ತಿದ್ದುವು. ಈಗ ಸಬ್ಸಿಡಿಯನ್ನು ಹೆಚ್ಚು ಮಾಡಿದ್ದರಿಂದ ಬರುವ ಚಿತ್ರಗಳ ಸಂಖ್ಯೆಯೂ ಹೆಚ್ಚುತ್ತಿದೆ. ಈ ಚಿತ್ರಮಂದಿರಗಳ ಲೈಸೆನ್ಸ್‌ನ್ನು ಡೆಪ್ಯುಟಿಕಮಿಷನರ್‌ರವರಿಗೆ ಏನು ಕೊಟ್ಟಿದ್ದೀರಿ ಅವರು ಅದನ್ನು ರೆವಿನ್ಯೂ ಆಫೀಸರ್ ಕಳಿಸುತ್ತಾರೆ, ಅದು ಅಲ್ಲಿಂದ ಬರುವ ಹೊತ್ತಿಗೆ ಬಹಳ ನಿಧಾನವಾಗುತ್ತದೆ. ಆದ್ದರಿಂದ ಅದನ್ನು ತೆಗೆದು ಆ ಫಿಲಂ ಡಿವಿಜನ್‌ಗೇ ಕೊಟ್ಟರೆ ಬಹಳ ಒಳ್ಳೆಯ ದೆಂದು ಸಲಹೆ ಮಾಡುತ್ತೇನೆ ಸ್ವಾಮಿ, ತಾವು ಪತ್ರಿಕೆಗಳಲ್ಲಿ ಓದಿರಬಹುದು ; ಹಾಲಿವುಡ್‌ನಲ್ಲಿ ಫಿಲಂ ಫೆಸ್ಟಿವಲ್ ಎಂದು ಮಾಡುತ್ತಾರೆ. ಅವರು ಇದಕ್ಕಾಗಿ 4 ಕೋಟಿ ರೂಪಾಯಿಗಳನ್ನು ಹಾಕುತ್ತಾರೆ. ಇದಕ್ಕೆ ಕರ್ನಾಟಕ ಪ್ರಾಂತ್ಯವನ್ನು Select ಮಾಡಿದ್ದಾರೆ. ಇದು ಬಹಳ ಸಂತೋಷವಾದ ವಿಷಯ ಅದರಂತೆ ನೀವೂ ಕೂಡ ಒಂದೆರಡು ಕೋಟಿ ರೂಪಾಯಿಗಳನ್ನು ಹಾಕಿ ನಮ್ಮ ಚಿತ್ರಗಳೂ ಅಲ್ಲಿ ಪ್ರದರ್ಶನವಾಗುವಂತೆ ಮಾಡಿ. ಇವತ್ತು ಇಂಟರ್ ನ್ಯಾಷನಲ್ ಲೆವೆಲ್ ನಲ್ಲಿ ನಮ್ಮ 12 ಚಿತ್ರಗಳು ಪ್ರದರ್ಶನಕ್ಕೆ ಹೋಗಿವೆ ಎಂದು ಕೇಳಿ ನನಗೆ ಬಹಳ ಸಂತೋಷ ವಾಯಿತು. ಹಾಲಿವುಡ್‌ನಲ್ಲಿರುವಂತೆ ನಮ್ಮಲ್ಲಿಯೂ ಒಳ್ಳೆಯ ಜಾಗವನ್ನು ಆಯ್ಕೆಮಾಡಿ ಅಲ್ಲಿ ಒಂದು ಡಿಸ್ನೆ ಲ್ಯಾಂಡ್ ಮಾಡಿ ಎಂದು ಸೂಚಿಸಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ನ್ಯಾಚುರಲ್ ಸೀನ್ಸ್ ಬಹಳ ಇದೆ. ಇದನ್ನೆಲ್ಲಾ ಉಪಯೋಗಿಸಿಕೊಂಡು ಚಿತ್ರ ತೆಗೆದರೆ ನಮ್ಮ ಚಿತ್ರಗಳಿಗೆ ಇಂಟರ್ ನ್ಯಾಷನಲ್ ಲೆವೆಲ್‌ನಲ್ಲಿ ಒಂದು ಗೌರವ, ಸ್ಥಾನಮಾನ ಸಿಕ್ಕುತ್ತದೆಂದು ನಾನು ಭಾವಿಸಿದ್ದೇನೆ. ಇವತ್ತು ನಮ್ಮ ಬೆಂಗಳೂರಿನ ಗಾಂಧಿನಗರದಲ್ಲಿ ಬರೀ ಫಿಲಂ ಪ್ರೊಡ್ಯೂಸರ್‌ಗಳು ಮತ್ತು ಡಿಸ್ಟ್ರಿಬ್ಯೂಟರ್‌ಗಳೇ ಇದ್ದಾರೆ. ಇವರೂ ಲೈಸೆನ್ಸ್ ತೆಗೆದು ಕೊಳ್ಳುವ ಹಾಗೆ ಮಾಡಬೇಕು. ಸಿನಿಮಾಗಳಿಗೆ ಲೈಸೆನ್ಸ್ ಕೊಡುವುದನ್ನು ಇವರಿಗೆ ಕೊಟ್ಟರೆ ಇದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಆದಾಯ ಬರುತ್ತದೆ.

ಇನ್ನು ಸಿನಿಮಾಗಳಲ್ಲಿ ಉಪಯೋಗಿಸುವ ಟಿಕೆಟ್‌ಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಇದು ಬ್ಲಾಕ್‌ಮಾರ್ಕೆಟ್ ಆಗುತ್ತಿದೆ. ಇದು ಹೇಗೆ ಎಂದರೆ ಆ ಟಿಕೆಟ್‌ಗಳ ಮೇಲೆ ಸೀಲ್ ಒತ್ತುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಸಿನಿಮಾ ಥೀಯೇಟರ್‌ನವರೇ ಡೂಪ್ಲಿಕೇಟ್ ಸೀಲ್ ಒತ್ತಿಬಿಡುತ್ತಾರೆ. ಇದನ್ನು ತಪ್ಪಿಸಿ ಸರ್ಕಾರದವರೇ ಆ ಸೀಲನ್ನು ಒತ್ತಿಕೊಡಬೇಕು. ಇಲ್ಲದೇ ಹೋದರೆ ಆ ಟಿಕೆಟ್‌ಗಳ ಮೇಲೆ ರೆವಿನ್ಯೂ ಸ್ಟ್ಯಾಂಪ್ ಆದರೂ ಹಚ್ಚುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಹಣ ಬರುತ್ತದೆ. ಮಾನ್ಯ ಸದಸ್ಯ ರಾದ ಶ್ರೀಮಾನ್ ಚಂದ್ರಶೇಖರ್‌ರವರು ಹೇಳಿದಂತೆ ನೂರಕ್ಕೆ 80 ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲಿ ಸಾಮಾನ್ಯವಾಗಿ ಥೀಯೇಟರ್‌ಗಳು ಇರುವುದಿಲ್ಲ. ದೊಡ್ಡ ದೊಡ್ಡ ಪಟ್ಟಣ ಗಳಲ್ಲಿಯೇ ದೊಡ್ಡ ದೊಡ್ಡ ಥೀಯೇಟರುಗಳು, ಮಿನಿ ಥೀಯೇಟರುಗಳು ಇರುತ್ತವೆ ಇಲ್ಲಿ ಮಾಡ್ರನ್ ಥೀಯೆಟರ್ಸ್, ವೆಲ್‌ಎಕ್ವಿಪ್ಡ್ ಥೀಯೇಟರ್ಸ್ ಎಲ್ಲಾ ಇರುತ್ತವೆ. ಗ್ರಾಮಾಂತರ ಪ್ರದೇಶದಲ್ಲಿ ಇರುವುದಿಲ್ಲ. ಆದುದರಿಂದ ಈ ಒಂದು ಥೀಯೇಟರ್ಸ್, ಮಿನಿ ಥೀಯೇಟರ್ಸ್ ಸೌಕರ್ಯ ಗ್ರಾಮಾಂತರದಲ್ಲೂ ಸಿಕ್ಕಬೇಕು. ರಾಜ್ಯದ 176 ತಾಲ್ಲೂಕುಗಳಲ್ಲೂ ಬರುವಂತೆ ಮಾಡಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ. ನಾವು ಏನೇ ಮಾಡಿದರೂ ಕೂಡ ಅದನ್ನು

ದೇಶದ ಜನತೆಯ ಮುಂದೆ ಇಡಬೇಕು. ಅದನ್ನು ಪಿಕ್ಚರ್‌ಗಳ ಮೂಲಕ ತೋರಿಸಬೇಕು, ಆಡಿಯೋ ವಿಜುಯಲ್ ಎಜುಕೇಷನ್ ಮೂಲಕ ತೋರಿಸಬೇಕು. ಇದರ ಉಪಯೋಗ ಗ್ರಾಮಾಂತರದಲ್ಲಿರುವ ಬಡ ಬೋರೇಗೌಡನಿಗೂ ಸಿಕ್ಕುವಂತಿರಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಸಂಜಯ್ ಗಾಂಧಿ ಮೆರವಣಿಗೆಯನ್ನೂ ತೋರಿಸಬೇಕು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈಗ ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. 100ಕ್ಕೆ 80 ಜನ ಏನು ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದಾರೆ ಅವರಿಗೆ ಆಡಿಯೋ ವಿಷುಯಲ್ ಮುಖಾಂತರ ಸರಳ ಜೀವನವನ್ನು ನಡೆಸತಕ್ಕಂಥ ರೀತಿಯಲ್ಲಿ ತೋರಿಸತಕ್ಕಂಥ ಚಿತ್ರ ಬರಬೇಕು. ಅವು ಹಳೆಯಕಾಲದ ತರಹದಂತೆ ಇರಬಾರದು. ಅದಕ್ಕೆ ನಮ್ಮಲ್ಲಿ ಬೇಕಾದಷ್ಟು ಸಾಹಿತ್ಯ, ಗ್ರಂಥಗಳು ಇರುತ್ತವೆ. ಅದನ್ನೆಲ್ಲ ಉಪಯೋಗಿಸಿಕೊಂಡು ಆಧುನಿಕ ರೀತಿಯಲ್ಲಿ ಭೋದನೆ ಮಾಡತಕ್ಕಂಥ ರೀತಿಯಲ್ಲಿ ಚಿತ್ರಗಳನ್ನು ತಯಾರಿಸಬೇಕು. ಆದ್ದರಿಂದ ಇನ್ನೂ ಹೆಚ್ಚಿನ ಹಣವನ್ನು ಈ ಸ್ಕೀಮಿಗೆ ಒದಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಲೇಬರ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡರೆ ಇಂಡಿಸ್ಟ್ರಿಯಲ್ ಲೇಬರರ್ಸ್ ರೀಆರ್ಗನೈಸ್ ಮಾಡುವ ಅಗತ್ಯತೆಯನ್ನು ಒತ್ತಿಹೇಳಬೇಕಾಗಿದೆ. ಅಗ್ರಿಕಲ್ಚರಲ್ ಇಂಡಿಸ್ಟ್ರೀಸ್ ಲೇಬರರ್ಸ್‌ಗೆ ಸರ್ಕಾರದಲ್ಲಿ ಯಾವವಿಧವಾದ ಪ್ರಾತಿನಿಧ್ಯವೂ ಸಿಕ್ಕಿಲ್ಲ. 100ಕ್ಕೆ 80 ಜನ ಗ್ರಾಮಾಂತರ ಪ್ರದೇಶದಲ್ಲಿ ಏನು ಇದ್ದಾರೆ ಅವರಿಗೆ ಏನು ವ್ಯವಸ್ಥೆಯನ್ನು ಮಾಡಿಲ್ಲ. ಬಾಂಡೆಡ್ ಲೇಬರ್ಸ್ ಎಂದು ಏನು ಇದ್ದಾರೆ ಆದಕ್ಕೆ ಡೆಫನೇಷನ್ ಗೊತ್ತಿಲ್ಲದೆ ತೊಂದರೆಯನ್ನು ಪಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಈ ಸ್ಕೀಮಿಗಾಗಿ ಕೊಟ್ಟಿರತಕ್ಕಂಥಾದ್ದು ಸರಿಯಾದ ರೀತಿಯಲ್ಲಿ ವಿತರಣೆಯಾಗದೆ ವ್ಯರ್ಥವಾಗುತ್ತಿದೆ. ಆದ್ದರಿಂದ ಇದಕ್ಕೆ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ 4,86,000 ಎಜ್ಯುಕೇಟೆಡ್ಸ್ ಇರುತ್ತಾರೆ. ಇದರಲ್ಲಿ 5 ಸಾವಿರ ಜನ Educated ಗ್ರಾಜ್ಯುಯೇಟ್ಸ್ ಇದ್ದರೆ ಒಂದು ಲಕ್ಷದಷ್ಟು ಜನರು ಪ್ರಿಯೂನಿವರ್ಸಿಟಿ ಓದಿರತಕ್ಕಂಥವರು ಇರುತ್ತಾರೆ. ಇವರಿಗೆ ಉದ್ಯೋಗವನ್ನು ಕಲ್ಪಿಸಿಕೊಡಲು ಯಾವ ಸ್ಕೀಮನ್ನು ಮಾಡಿದ್ದೀರೆಂದು ಕೇಳುತ್ತೇನೆ. ಇಂಡಸ್ಟ್ರಿಯಲ್ ಲೇಬರರ್ಸ್‌ನ್ನು ರೀಆರ್ಗನೈಸ್ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆರ್ಬಿಟ್ರೇಷನ್ ಬಗ್ಗೆ ಹೇಳುವುದಾದರೆ ಎಮರ್ಜೆನ್ಸಿ ವೇಳೆಯಲ್ಲಿ ಕೆಲವು ಲೇಬರರ್ಸ್‌ಗೆ ತೊಂದರೆಯಾಗಿರುತ್ತದೆ, ಅದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಸತ್ಯ, ಧರ್ಮದಿಂದ ನ್ಯಾಯವನ್ನು ಅವರಿಗೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ನಾಲ್ಕುವರೆ ಲಕ್ಷ ಸರ್ಕಾರಿ ನೌಕರರುಗಳೇ ಇದ್ದಾರೆ. ಇವರಿಗೆ ರಾಜ್ಯದ ರೆವಿನ್ಯೂವಿನಲ್ಲಿ ಮೂರನೆ ಒಂದು ಭಾಗದಷ್ಟು ಸಂಬಳ ಸಾರಿಗೆಗೆ ಹೋಗುತ್ತಿದೆ. ಆದರೆ ಒಂದು ಲಕ್ಷ ತೊಂಬತ್ತೆರಡು ಸಾವಿರ ಅಗ್ರಿಕಲ್ಚರ್ ಲೇಬರರ್ಸ್‌ಗೆ ಅವರ ವಿಷಯವಾಗಿ ಏನು ಯೋಚನೆಯನ್ನು ಮಾಡಿಲ್ಲ. ಅವರಿಗೂ ಮಿನಿಮಮ್ ವೇಜಸ್ ಆಕ್ಟ್ ಅಪ್ಲೈಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಅವರಿಗೆ ಎಜ್ಯುಕೇಷನ್ ಕೊಡುವುದಕ್ಕೂ ಕೂಡ ತಮ್ಮ ಕಾಲದಲ್ಲಿಯೇ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮುಖ್ಯವಾಗಿ ವಾರ್ತಾ ಮತ್ತು ಪಬ್ಲಿಸಿಟಿ ಇಲಾಖೆಯ ಬಗ್ಗೆ ಎಷ್ಟು ಸಲಹೆಗಳನ್ನು ಕೊಟ್ಟಿರುತ್ತೇನೆ. ಇದನ್ನು ತಾವು ಅಕ್ಷರಶಃ ಪಾಲಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲಾಖೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡತಕ್ಕಂಥ ಮುಖ್ಯಾಧಿಕಾರಿಯವರಾದ ಚಿರಂಜೀವಿಸಿಂಗ್‌ರವರು ಮತ್ತು ಶ್ರೀ ಚಡಪ್ಪ ರೆಡ್ಡಿಯವರು ಇಲಾಖೆಯನ್ನು ಪ್ರಗತಿಪರವಾಗಿ ನಡೆಸುವಲ್ಲಿ ಬಹಳವಾಗಿ ಶ್ರಮಿಸುತ್ತಿದ್ದಾರೆ. ಅವರ ಬಗ್ಗೆ ಒಳ್ಳೇ ಮಾತುಗಳನ್ನು ಹೇಳಬೇಕಾಗುತ್ತೆ.

ಇನ್ನು ಫಿಲಮ್ ಬಗ್ಗೆ ಹೇಳುವುದಾದರೆ ಕರ್ನಾಟಕ ಫಿಲಮ್ ಇಂಡಸ್ಟ್ರೀಸ್‌ರವರು ರಾ ಫಿಲಮ್ಸ್‌ಗಳನ್ನು ತಯಾರು ಮಾಡುತ್ತಿದ್ದಾರೆ. ಉದಕಮಂಡಲದಲ್ಲಿ ಫಿಲಮ್ ಯೂನಿಟ್ ಇರುವಂಥ ನಮ್ಮ ಕರ್ನಾಟಕದಲ್ಲಿಯೂ ಒಂದು ಫಿಲಮ್ ಯೂನಿಟ್ಟನ್ನು ಏತಕ್ಕೆ ಮಾಡಬಾರದೆಂದು ಹೇಳುತ್ತೇನೆ. ತಮ್ಮ ಕಾಲದಲ್ಲಿಯೇ ಇದೂ ಆಗಬೇಕೆಂದು ಕೇಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ತಮ್ಮ ಕಾಲದಲ್ಲಿ ಹೆಚ್ಚಿನ ಪ್ರಗತಿ ಪರವಾಗಿ ಸಾಧನೆಯಾಗಲು ಈಗ ಕೊಟ್ಟಿರತಕ್ಕಂಥ ಹಣ ಸಾಲದಾಗಿರುತ್ತದೆ. ಆದ್ದರಿಂದ ಇನ್ನೂ ಹೆಚ್ಚಿನ ಹಣವನ್ನು ವಾರ್ತಾ ಪಬ್ಲಿಸಿಟಿ ಇಲಾಖೆಗೆ ಒದಗಿಸಿಕೊಡಬೇಕೆಂದು ಹೇಳುತ್ತಾ, ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI B B. SAYANAK (Belgaum).— Madam Chairman, I rise to oppose the Demands Nos. 28 and 29 tabled by the Hon'ble Ministers for Information and Publicity and Labour. India is industrially developing and progressing after 30 years of independence. The Labour Department came into existence to see to the welfare of the labourers or the workers. There must be cordial relationship between the owner or employer and labourers, and if there is any dispute, the Labour Department should intervene. Though there are so many officers appointed by the Government, they are not implementing the 28 Acts pertaining to labourers. The Agricultural Labourers' Wages Act is also not implemented. Though the workers have got a right to form their Union, the industrialists or the employers are not allowing them to form a Union, and when these matters are brought to the notice of the Government, even the Government is not allowing them to form their Union. There is an industry in Belgaum by name Manic-Bag started long back. In this industry, the labourers are working on daily wages for the last more than ten years. They want to have a Union of their own, but the owner of the industry is not allowing them to form the Union. In this factory, if a worker is on leave for one day, his three days wages are curtailed. They are not getting the benefit of 10 days casual leave or 30 days privilege leave per year. I request the Government to look into this matter. I had spoken about this industry last year also, and the then Labour Commissioner asked me to give the details I gave the relevant details, but the Government has not taken any action so far The functions of the Government are: prevention of strike and lockouts. I am sorry to say that the officers are protecting the rights of the employers of the factories but they are not taking care of the rights of the workers. Whenever the labourers make their demands, these demands are not being looked by them immediately.

There is an Alluminium Factory at Belgaum with a labour strength of 1060. The labourers started the strike on the 20th April 1977 but Government did not take any action for about two months and the settlement was effected only on the 16th of this month. As a result of this strike the Central Government lost Rs. one crore per

month and the State Government lost about Rs. 10 lakhs. The Labour Minister ought to have intervened in the matter and redressed the grievances of the workers. As a result of his in action, the Government had to put to such huge loss. I know the labour leaders are comming and going but nobody is taking action. For this huge loss, I should say that the Labour Minister is responsible and none else.

There is a BEMCO industry at Belgaum. In this connection I had tabled a question also. There was a settlement in the year 1975. But the management has not respected the settlement. The workers are insisting for the implementation of the settlement but for two years the Government has slept over this matter. Now the Labour Minister has told the workers that he is going to prosecute the management. What is the use of prosectution so late? I do not know the reason why the Government is not pulling up this management and direct the management to pay the wages according to the settlement already reached. When both the parties have arrived at some conclusion or settlement and if one party refuses to honour the commitment. what is the use of keeping the Labour Commissioners and the Inspectors. The must look into these things and do justice to the labourers.

There is an ANMOL Auto Works at Belgaum which is employing 80 persons. This industry is there for the last six years. Recently the owner has served a notice to the workers informing the workers about the termination of their services. On the 19th of this month, the owner of the factory has served a notice to the workers saying that you are availing leave without wages; you are requested to join duty on 1st June 1977. We have decided to continue the work. The idea behind such a notice is to treat the labourers as temporary labourers. There are so many cases like this. I do not want to elaborate on this point any further.

You have mentioned in your pamphlet that as a result of Emergency and on account of timely intervention by the departmental officers the labour situation during year has improved remarkably. May I ask the Minister, do you mean to say that emergency is good for the workers and the owners? During the emergency you had curbed the rights of the workers to agitate for their rights. You have said that during the emergency there were no strikers and lockouts. You have given wide publicity of things which were not correct. You must give the right to the labourers to fight for their rights. There was one union at Belgaum which shouted slogans during emergency in front of the hotels because the owner had dismissed some 60-70 persons. In this connection I asked the Superintendent of Police why he had permitted the workers to shout slogans during the emer-

gency. His reply was that they had every right to start agitation. He had permitted the union to agitate because that union happened to belong to the Communist Party. At my instance, the Superintendent of Police intervened and settled the matter. I cannot understand why you are giving chance to the unions of particular party and depriving the other unions during the emergency of their right to agitate.

Regarding the Compulsory Deposit Scheme. This scheme was introduced by the previous Congress Government in this Centre. Now that the Janata Party is ruling, I request the State Government to bring pressure upon the Central Government to scrap this scheme and refund the deposit to the workers.

The Labour Inspectors are visiting the factories, the hotels and other shops. They are only seeing the owners and are collecting money. They never inquire into the grievances of the workers. If that is the case, what is the use of having the Labour Inspectors? You must direct your Inspectors to ask the workers about their difficulties and settle their grievances and justice to the labour class.

Regarding Employment Exchange, there are so many educated graduates who are unemployed The Government has not done justice for these unemployed graduates. I request the Government that wherever there are vacancies, they may be filled up with these graduates. I want that some justice should be done to these people

Regarding Information and Publicity, there is a Publicity office at Belgaum. The sign Board is only in Kannada and English. I request the Minister to direct your office to have three language Board *viz.*, Marati, Kannada and English when Marati are in majority in Belgaum.

There are some Marathi newspapers in Belgaum and the circulaton of which is very large one. I want to ask the Minister why he is inot giving advertisements to Marathi newspapers? Why you are only giving advertisements to Kannada papers but not Marathi papers? Therefore, I request the Minister through you Madam, that they must also give the advertisements to Marathi newspapers That too Belgaum Tarun Bharath.

4-30 P.M.

Regarding the films, now the people are accustomed to see vulga pictures but not the good or moral pictures. That has become a habit of the people, They don't want to see good and moral pictures. Whenever there is a picture having some naked scenes, there will be a big

crowd, whereas when there is a good moral film there will not be such a crowd. Therefore, I request the Government to give some facilities by way of incentives to good moral pictures.

Then regarding showing of Kannada film compulsorily you are making it compulsory for the cinema owners to show the Kannada film. This is a profession or business Whenever there is great demand for certain film, the owners of the theatres will show such films. They can show any film-whether it is Kannada, Marathi or Hindi. Then why there is a compulsion to show Kannada pictures. I am not against the Kannada language. But the Dy. Commissioner of Belgaum making a compulsion on the Cinema owners to exhibit the first show in Kannada. This compulsion should not be there. If he gets more customers he can exhibit any film of any language. Therefore I request the Minister not to make any compulsion to show Kannada films. With these few words, I thank the Chair and conclude my speech.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಇವತ್ತು ಭಾರತದಲ್ಲಿ ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ ಪುನಃ ಬಂದಿದ್ದರೂ ಕೂಡ ಕರ್ನಾಟಕದಲ್ಲಿ ಮಾತ್ರ ಇವತ್ತಿಗೂ ಬಂದಿಲ್ಲವೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ಮಾನ್ಯ ಸಚಿವರುಗಳು ಮಂಡಿಸಿರುವ ಡಿಮಾಂಡ್ ನಂ. 28 ಮತ್ತು 29ನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಕಳೆದ ಎರಡು ವರ್ಷಗಳ ಕಾಲದಲ್ಲಿ ಸರ್ಕಾರ ತನ್ನ ಸರ್ವಾಧಿಕಾರ ಬಾಜಾ ಬಜಂತ್ರಿಯನ್ನು ಮುಂದುವರಿಸಿಕೊಂಡು ಮತ್ತು ಪ್ರಕಟಣೆಗಳನ್ನು ಹಾಕಿಸಿ ಹೊಗಳಿಸಿಕೊಳ್ಳುತ್ತಾ ಚಿತ್ರಗಳನ್ನು ಅಚ್ಚು ಹಾಕಿಸಿಕೊಳ್ಳುತ್ತಾ ಅದೇ ಧೋರಣೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ದೇಶದಲ್ಲಿ ಲೋಕಸಭೆಗೆ ಚುನಾವಣೆಗಳು ನಡೆದು ಪುನಃ ಸ್ವಾತಂತ್ರ್ಯ ಬಂದಿದ್ದರು ಕೂಡ ಕರ್ನಾಟಕ ಸರ್ಕಾರದ ಮಾತ್ರ "ಹಿರಿಯಕ್ಕನ ಚಾಳಿ"ಯನ್ನು ತೆಗೆದು ಬೇರೆ ಹೆಜ್ಜೆಯನ್ನು ಇವತ್ತಿಗೂ ಕೂಡ ಬದಲಾಯಿಸಿಲ್ಲ. ಇನ್ನು ನಮ್ಮ ಸರ್ಕಾರದವರು ಏನು ಒಂದು ಪತ್ರಿಕೆಯನ್ನು ಸರ್ಕಾರದವತಿಯಿಂದ ಪ್ರಕಟಿಸುತ್ತಿದ್ದಾರೆ, "ಮಾರ್ಚ್ ಆಫ್ ಕರ್ನಾಟಕ" ಮತ್ತು "ಜನಪದ" ಎಂದು ಸರ್ಕಾರದ ಪತ್ರಿಕೆಗಳು ಏನಿವೆ ಅವು ಇವತ್ತು ದೇಶದಲ್ಲಿ ಉಂಟಾಗಿರತಕ್ಕ ಜನಜಾಗೃತಿಯನ್ನು ಪಾಲಿಸದೆ ತಮ್ಮದೇ ಆದ ಧೋರಣೆಯನ್ನು ಮುಂದುವರೆಸಿಕೊಂಡು ಬರುತ್ತಿವೆ. ಅನಾಮಿಕವಾಗಿ ಮತ್ತು ಅಧಿಕೃತವಾಗಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡು ಅವರ ಭಾವಚಿತ್ರಗಳನ್ನು ಹಾಕಿಸಿಕೊಂಡು ಮೆರೆಯುತ್ತಿದ್ದಾರೆ. ನಮ್ಮ ಭಾರತದ ಪ್ರಧಾನಿಗಳಾದ ಮೊರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಗಳಾಗಿದ್ದರೂ ಕೂಡ ಅವರ ಭಾವಚಿತ್ರವನ್ನು ಮಾರ್ಚ್ ಆಫ್ ಕರ್ನಾಟಕ ಪತ್ರಿಕೆಯಲ್ಲಿ ಮುಖಪುಟದಲ್ಲಿ ಇವತ್ತಿನವರಗೂ ಬಂದಿಲ್ಲ. ಆ ಮಾರ್ಚ್ ಆಫ್ ಕರ್ನಾಟಕ ಪತ್ರಿಕೆ ನಮ್ಮ ಲೈಬ್ರರಿಯಲ್ಲಿ ಈಗ ಬಂದಿದೆ.

ಶ್ರೀ ಸಿ. ಎನ್. ಪಾಟೀಲ್.—ನೀವು ಬಂದಮೇಲೆ ನಿಮ್ಮದು ಹಾಕಿಸಿಕೊಳ್ಳಿ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಬಂದಾಗ ನಿಮ್ಮನ್ನು ಜೈಲಿಗೂ ಕೂಡ ಹಾಕಿಸುತ್ತೇವೆ. ಆದರೆ ವಿಚಾರಣೆ ಮಾಡಿ, ವಿಚಾರಣೆ ಮಾಡದೆ ಹಾಕುವುದಕ್ಕೆ ಹೋಗುವುದಿಲ್ಲ.

ಶ್ರೀ ಸಿ. ಎನ್. ಪಾಟೀಲ್.—ನಾವು ಶಾಸಕರಾಗಿ ಒಂದು ದಿನಕ್ಕೆ 31 ರೂಪಾಯಿ ಭತ್ಯ ಸಿಕ್ಕುತ್ತದೆ, ಅದೇ ಜೈಲಿನಲ್ಲಿ ಸುಖವಾದ ಜೀವನ ನಡೆಯುತ್ತದೆ. ಆದ್ದರಿಂದ ನಾನು ಅದನ್ನು ಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ:—ನಿಮಗೆ ಕೆಲವು ಸ್ಥಳಗಳನ್ನು ಮೀಸಲಾಗಿ ಇಡುವುದು ಅನಿವಾರ್ಯ. ಅದ್ದರಿಂದ ನಿಮಗೆ ಅಚ್ಚುಕಟ್ಟಾದ ಸ್ಥಳವನ್ನು ಗೊತ್ತು ಮಾಡುವುದು ಅನಿವಾರ್ಯ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರದ ಬಗ್ಗೆ ಅದರ ಕಾರ್ಯಕ್ರಮದ ಬಗ್ಗೆ ಒಂದು ಭಾವಚಿತ್ರವೇ ಆಗಲಿ ಅಥವಾ ಅವರ ಕಾರ್ಯಕ್ರಮದ ವಿವರಗಳನ್ನೇ ಆಗಲಿ ನಮ್ಮ ಕರ್ನಾಟಕ ಸರ್ಕಾರದವರು ವರದಿಮಾಡುತ್ತಿಲ್ಲ. ಇವರದು ಒಂದು ಸರ್ವಾಧಿಕಾರ ಸ್ವತಂತ್ರ್ಯ ಸಾರ್ವಭೌಮ ಸರ್ಕಾರವಾಗಿದೆ. ಕೇಂದ್ರ ಸರ್ಕಾರದ ಬಡ್ಜೆಟ್ ಮೇಲೆ ಅಥವಾ ಮಂತ್ರಿಗಳು ನಮ್ಮ ಬೇಸಾಯದ ಅಭಿವೃದ್ಧಿ ಬಗ್ಗೆ ಏನು ನೀತಿಯನ್ನು ಅನುಸರಿಸಿದ್ದಾರೆ ಎಂಬುದು ಯಾವುದೂ ಇದರಲ್ಲಿ ಬಂದಿಲ್ಲ. ಕರ್ನಾಟಕ ಸರ್ಕಾರ ಏನು ಹಳೆಯ ಜಾಡನ್ನು ಅನುಸರಿಸುತ್ತಿತ್ತೋ ಅದನ್ನು ಬಿಡುವುದಕ್ಕೆ ಪ್ರಯತ್ನಮಾಡಿಲ್ಲವೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಪಬ್ಲಿಸಿಟಿ ಮತ್ತು ಇನ್‌ಫರ್‌ಮೇಷನ್‌ಗೆ ಸಂಬಂಧಪಟ್ಟಂತ ಹೇಳಬೇಕಾದರೆ ನಾನು ನಾಲ್ಕು ವರ್ಷಗಳಿಂದ ಹೇಳುತ್ತಾ ಬಂದಿದ್ದರೂ ಕೂಡ ಹೊರ ರಾಜ್ಯಗಳಿಗೆ ನಮ್ಮ ರಾಜ್ಯದ ಮಾಹಿತಿಗಳನ್ನು ತಿಳಿಸುವುದಕ್ಕೆ-ಅಂದರೆ ಫಾರಿನ್ ಕಂಟ್ರೀಸ್‌ಗಳಿಗಲ್ಲ—ನಮ್ಮ ಭಾರತದ ಜನಗಳಿಗೆ ಅನೇಕ ವಿಚಾರಗಳು ಅಂದರೆ ಉದಾಹರಣೆಗೆ ಹೇಳಬೇಕೆಂದರೆ ನಮ್ಮ ರಾಜ್ಯದ ಸುಂದರ ಸ್ಥಳಗಳು ಮತ್ತು ಯಾತ್ರಾಸ್ಥಳಗಳ ಬಗ್ಗೆ ಮಾಹಿತಿಗಳನ್ನು ತೋರಿಸಿಕೊಡಬೇಕು. ಒಂದೆರಡು ವರ್ಷಗಳ ಹಿಂದೆ ಪಬ್ಲಿಸಿಟಿ ಡಿಪಾರ್ಟ್‌ಮೆಂಟ್‌ನ್ನು ಪಂಜಿಮ್‌ನಲ್ಲಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ನೋಡಿದರೆ ಅದು ಅಲ್ಲಿ ಪೆನ್ಷನ್ ಕೊಡುವ ಇಲಾಖೆಯಂತೆ ಕೆಲಸಮಾಡುತ್ತಿದೆ. ನಾನು ಹೇಳುವುದು ನಮ್ಮ ರಾಜ್ಯದ ಮುಖ್ಯವಾದ ಸ್ಥಳಗಳ ಬಗ್ಗೆ ಅಲ್ಲಿಯ ಗೋವನ್ ಭಾಷೆಯಲ್ಲಿ, ಕನ್ನಡದಲ್ಲಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾಹಿತಿಯನ್ನು ಒದಗಿಸಿದರೆ ನಮಗೆ ಯಾತ್ರಾರ್ಥಿಗಳು ಬರುವುದಕ್ಕೆ ಅನುಕೂಲವಾಗುತ್ತದೆ. ಇನ್ನು ದೆಹಲಿಯಲ್ಲಿ ಕರ್ನಾಟಕ ಭವನದಲ್ಲಿ ನೋಡಿದರೂ ಕೂಡ ಕರ್ನಾಟಕ ಒಂದು ಸ್ಮಾರಕವಾಗಿ ಕಾಣುತ್ತದೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮ ರಾಜ್ಯದ ಬಗ್ಗೆ ಮಾಹಿತಿಗಳನ್ನು ಅಲ್ಲಿ ಪ್ರಕಟಿಸಿಲ್ಲ. ಅದೇ ದೆಹಲಿಯಲ್ಲಿ ಬೇರೆ ರಾಜ್ಯಗಳ ಅತಿಥಿ ಗೃಹಗಳು ಏನು ಇವೆ ಮತ್ತು ಅಂಬಾಸಿಡರ್ಸ್ ಹೌಸನ್ಸ್‌ಗಳು ಏನು ಇವೆ ಅವುಗಳಲ್ಲಿ ಮಾಹಿತಿಗಳನ್ನು ಕೊಟ್ಟರೆ ಈ ಕಾರ್ಯಕ್ರಮ ತೆಗೆದುಕೊಂಡ ನಮಗೆ ಯಾತ್ರಾರ್ಥಿಗಳು ನಮ್ಮ ರಾಜ್ಯಕ್ಕೆ ಬರುತ್ತಾರೆ. ಆದರಿಂದ ನಮ್ಮ ರಾಜ್ಯಕ್ಕೆ ಉತ್ಪತ್ತಿ ಜಾಸ್ತಿಯಾಗುತ್ತದೆ. ಮಾನ್ಯ ಮಂತ್ರಿಗಳನ್ನು ಈ ವಿಷಯವನ್ನು ವಿಚಾರಣೆಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ನಮ್ಮ ಸ್ನೇಹಿತರು ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಸಿನಿಮಾ ಬಗ್ಗೆ ಕೆಲಸವನ್ನು ಮಾಡಿರುವುದನ್ನು ತೋರಿಸಬೇಕು. ಅದು ಏನು ಎಂದರೆ 30 ವರ್ಷಗಳ ಕಾಂಗ್ರೆಸ್ ಸರ್ಕಾರ ಏನು ಅಧಿಕಾರದಲ್ಲಿತ್ತು ಅದು ಮೊನ್ನೆವರೆಗೆ ಸಾಧನೆಯನ್ನು ಏನು ಮಾಡಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು 1947ರಲ್ಲಿ ಏನು ದೇಶದಲ್ಲಿ ಅನಕ್ಷರಸ್ಥರು ಇದ್ದರು ಅದಕ್ಕೆ ನಾಲ್ಕರಷ್ಟು ಜಾಸ್ತಿಮಾಡಿದ್ದಾರೆ. ದೇಶದಲ್ಲಿ ಮತ್ತು ರಾಜ್ಯಗಳಲ್ಲಿ ನಾವು ದೂರದರ್ಶನದ ಮೂಲಕ ಅವರಿಗೆ ಜ್ಞಾನವನ್ನು ಮೂಡುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈಗಲಾದರೂ ಜನರಲ್ಲಿರುವ ಅನಕ್ಷರಸ್ಥರನ್ನು ಕಡಿಮೆ ಮಾಡಲು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ. ಆದರೆ ಇವತ್ತಿನವರೆಗೆ ನಮ್ಮ ಸರ್ಕಾರದವರು ಯಾವ ರೀತಿ ಜ್ಞಾನ ಪ್ರಸಾರ ಮಾಡುತ್ತಾರೆ ? ಸಂಜಯ ಗಾಂಧಿಯವರ ಮೆರವಣಿಗೆ, ಅವರ ಕಾಲು ಬುಡದಲ್ಲಿ ಮುಖ್ಯಮಂತ್ರಿಗಳು, ಅವರ ಕಾಲು ಬುಡದಲ್ಲಿ ಚಿಕ್ಕ ಮಂತ್ರಿಗಳು. ಇದು ಗಾಜಿನ ಮನೆಯ ಚಿತ್ರ. ಇವತ್ತು ಸ್ವಾತಂತ್ರ ಬಂದರೂ ಕೆಲವು ಸಿನೆಮಾ ಮಂದಿರಗಳಲ್ಲಿ ಇವರು ಸರ್ವಾಧಿಕಾರದಲ್ಲಿದ್ದಾಗ ಯಾವ ಡಾಕ್ಯುಮೆಂಟರಿ ಸಿನೆಮಾಗಳನ್ನು ತೋರಿಸುತ್ತಿದ್ದರೋ ಅವನ್ನೆ ತೋರಿಸುತ್ತಿದ್ದಾರೆ. ಇವರು ಎಂತಹ ಸಿನೆಮಾಗಳನ್ನು ತೋರಿಸುತ್ತಿದರು ಎಂದರೆ, ದೇಶ್ ಕಾ ದುಶ್ಮನ್ ಜಯಪ್ರಕಾಶ್ ನಾರಾಯಣ್, ದೇಶ್ ಕಾ ದುಶ್ಮನ್ ಮೊರಾರ್ಜಿ ದೇಸಾಯಿ, ದೇಶ್ ಕಾ ದುಶ್ಮನ್ ಜಾರ್ಜ್‌ಫರ್ನಾಂಡೀಸ್ ಎಂದು ಆದರೆ ಇದನ್ನು ಇನ್ನೂ ಕೆಲವು ಚಿತ್ರಮಂದಿರಗಳಲ್ಲಿ ತೋರಿಸುತ್ತಿದ್ದಾರೆ, ಅದ್ದರಿಂದ, ಕರ್ನಾಟಕ ಸರ್ಕಾರ ಸರ್ವಾಧಿಕಾರ ಸರ್ಕಾರ ಆಗಿದೆಯೇ ಹೊರತು ಪ್ರಜಾಪ್ರಭುತ್ವದ ತತ್ವವನ್ನು ಅನುಷ್ಠಾನಗೊಳಿಸತಕ್ಕ ಯಾವುದೇ ಕ್ರಮವನ್ನು ತೆಗೆದು

ಕೊಂಡಿಲ್ಲವೆಂದು ಹೇಳಬಹುದು. ಇನ್ನು ಒಳ್ಳೆಯ ಸಿನೆಮಾಗಳನ್ನು ತೆಗೆಯುವವರಿಗೆ ಸಬ್ಸಿಡಿ ಕೊಡತಕ್ಕದ್ದು ಇದೆ. ಆದರೆ ಅದನ್ನು ಕೆಲವು ಸಿನೆಮಾಗಳಿಗೆ ಮಾತ್ರ ಮೀಸಲಾಗಿಡಲಾಗಿದೆ. ಏಕೆಂದರೆ, ಬಾಂಬೆ ಮದ್ರಾಸ್, ಮತ್ತು ದೆಹಲಿ ಕಡೆ ಹೋದರೆ ದೊಡ್ಡ ದೊಡ್ಡ ಪ್ರೊಡ್ಯೂಸರ್ಸ್ ಮತ್ತು ಹೀರೋಯಿನ್ಸ್ ಸಿಗುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಯಾವ ಸಭೆ, ಯಾವ ಪ್ಲಾಟ್ ಫಾರಂ ಎಂದು ತಿಳಿದು ಮಾತನಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಬಂಗಾರಪ್ಪನವರು ಶಾಸನ ಸಭಾ ಸದಸ್ಯರಾಗಿರತಕ್ಕ ವಿಧಾನಸಭಾ ಸದನದಲ್ಲಿ ಮಾತನಾಡುತ್ತಿದ್ದೇನೆಯೇ ಹೊರತು ಸೊರಬದಲ್ಲಿ ಮಾತನಾಡುತ್ತಿಲ್ಲ. ವಿಮರ್ಶನೆಗೆ ಒಳಗಾಗುವುದು ಬೇಡ. ಹಿಂದೆ ಯಾವ ಸಿನೆಮಾಗಳನ್ನು ತೋರಿಸುತ್ತಿದ್ದರೋ ಅವೇ ಸಿನೆಮಾಗಳನ್ನು ಇವತ್ತಿಗೂ ಕೆಲವು ಚಿತ್ರ ಮಂದಿರಗಳಲ್ಲಿ ತೋರಿಸುತ್ತಿದ್ದಾರೆ, ಆದುದರಿಂದ ಆ ಬಗ್ಗೆ ಕ್ರಮ ತೆಗೆದುಕೊಂಡು ಅವುಗಳನ್ನು ರದ್ದು ಮಾಡಿ ಒಳ್ಳೆಯ ಡಾಕ್ಯುಮೆಂಟರಿ ಸಿನೆಮಾಗಳನ್ನು ತೆಗೆಯಬೇಕೆಂದು ಪ್ರಾರ್ಥಿಸುತ್ತೇನೆ. ನಮ್ಮ ರಾಜ್ಯದ ಇತಿಹಾಸ, ಧರ್ಮ, ಸಂಸ್ಕೃತಿ, ಕಲೆ, ವೈಭವಗಳನ್ನು ತೋರಿಸತಕ್ಕದ್ದು ಮತ್ತು ಚರಿತ್ರಾರ್ಹವಾದ ಐತಿಹಾಸಿಕ ಪ್ರದೇಶಗಳನ್ನು ಸಣ್ಣಪುಟ್ಟ ಸಿನೆಮಾಗಳ ರೂಪದಲ್ಲಿ ಜನತೆಗೆ ಪರಿಚಯ ಮಾಡಿಕೊಡುವ ರೀತಿಯಲ್ಲಿ ಡಾಕ್ಯುಮೆಂಟರಿ ಸಿನೆಮಾಗಳನ್ನು ತೆಗೆಯಬೇಕೇ ಹೊರತು ಅಧಿಕಾರಿಗಳನ್ನು ರಾಜಕಾರಣಿಗಳನ್ನು ತೋರಿಸುವಂತಹ ಸಿನೆಮಾಗಳು ಬೇಡ. ರೈತರ ಸಮಸ್ಯೆ ಬಗ್ಗೆ, ಬಡವರ ಹಿತಸಾಧನೆ ಬಗ್ಗೆ ಅಸ್ಪೃಶ್ಯತೆಯ ನಿವಾರಣೆ ಬಗ್ಗೆ, ಇಂಥ ಸಮಸ್ಯೆಗಳ ಬಗ್ಗೆ ವಿಚಾರ ಪ್ರಚೋದಕವಾದ ಒಳ್ಳೆಯ ಸಿನೆಮಾಗಳನ್ನು ತೆಗೆದರೆ ಅದಕ್ಕೆ ನಮ್ಮ ಸ್ವಾಗತ ಉಂಟು; ಅದನ್ನು ಅಗತ್ಯವಾಗಿ ಮಾಡಬೇಕು. ಐದು ವರ್ಷಗಳ ಕಾಲದಿಂದ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಆದರೆ ಇನ್ನೂ ಆಗಿಲ್ಲ. ನಮ್ಮ ಸ್ನೇಹಿತರು ಕೆಲವರು ಒಳ್ಳೆಯವರು ಇದ್ದಾರೆ. ಅವರು ಒಳ್ಳೆಯ ಸಿನೆಮಾಗಳನ್ನು ತೆಗೆಯಬೇಕೆಂದು ಉದ್ದೇಶಿಸಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಅರ್ಜಿ ಹಾಕಿದರೆ ಅವರ ಅರ್ಜಿ ಅಲ್ಲಿ ಪಾಸಾಗುವುದಿಲ್ಲ. ಈ ಬಗ್ಗೆ ನನಗೆ ಬಹಳ ಶೋಚನೀಯವಾಗುತ್ತಿದೆ. ಇವತ್ತು ಈ ಚಲನಚಿತ್ರದ ಉದ್ಯಮ ಯಾರೋ ಒಬ್ಬ ವ್ಯಕ್ತಿಯ ಕೈಯಲ್ಲಿ ಸಿಕ್ಕಿದೆಯೋ ಏನೋ ಎಂದು ಅನುಮಾನ ಬಂದಿದೆ. ಇದು ಅವರ ಸರ್ವಾಧಿಕಾರದ ದೊಡ್ಡ ಘರ್ಜನೆಗೆ ಮತ್ತು ಅವರ ಕಾಲು ತುಳಿತಕ್ಕೆ ಸಿಕ್ಕಿದೆ, ಇದಕ್ಕೆ ಯಾವುದೇ ಸದಲತ್ತಾಗಲಿ, ರೆಕಗ್ನೀಷನ್ ಆಗಲಿ ಸಿಗುವುದಿಲ್ಲ. ಆದ್ದರಿಂದ ತಮಗೆ ಗೊತ್ತಿರುವ ಹಾಗೆ ಕಳೆದ ಅಧಿವೇಶನದಲ್ಲಿ ಅಲ್ಲಿರತಕ್ಕ ವ್ಯವಸ್ಥೆಯ ಬಗ್ಗೆ ನಮ್ಮ ನಾಯಕರು ಪ್ರಸ್ತಾಪ ಮಾಡಿದ್ದರು ಆಗ ಮಾನ್ಯ ಸುಬ್ಬಯ್ಯಶೆಟ್ಟರು ಈ ಇಲಾಖೆಯ ಮಂತ್ರಿಗಳಾಗಿದ್ದರು. ಇವತ್ತು ಅಲ್ಲಿರತಕ್ಕ ಬಂಡವಾಳವೆಷ್ಟು ಮತ್ತು ಅಲ್ಲಿ ಆಗತಕ್ಕ ಖರ್ಚು ಎಷ್ಟು ಹಾಗೂ ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ (ಸ್ವಯಂಭು) ಸಂಬಳ ಸಾರಿಗೆಗಳು ಎಷ್ಟು? ನನಗೆ ಗೊತ್ತಿರುವ ಹಾಗೆ ಹಾಗೂ ಈ ಸದನದಲ್ಲಿ ಚರ್ಚೆಯಾಗಿರುವ ಹಾಗೆ, ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ಬೋರ್ಡ್ ಮೀಟಿಂಗ್ ಆಗಿ ಮಾನ್ಯ ಮುಖ್ಯಮಂತ್ರಿಗಳಾದ ದೇವರಾಜ ಅರಸ್‌ರವರ ತಮ್ಮ ಕೆಂಪರಾಜ ಅರಸ್‌ರವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ. ಅವರ ಕ್ವಾಲಿಫಿಕೇಷನ್ಸ್ ಏನೆಂದರೆ, 'ವಿಕ್ರಮರಾಜ' 'ಶನಿದೇವರು' ಇತ್ಯಾದಿ. ಇವರ ಮುಂದೆ, ತಮ್ಮ ಮುಕ್ಕಾಲು ಭಾಗ ಜೀವಮಾನವನ್ನು ಯಾವ ರಾಜಕೀಯಕ್ಕು ಬಳಸಿಕೊಳ್ಳದೆ ಸಂಪೂರ್ಣವಾಗಿ ಕಲಾಕ್ಷೇತ್ರಕ್ಕೆ, ಚಲನಚಿತ್ರ ಕ್ಷೇತ್ರಕ್ಕ ಅರ್ಪಣೆ ಮಾಡಿದ ಹುಲಿಮನೆ ಸೀತಾರಾಂ ಶಾಸ್ತ್ರಿಯಂಥವರು, ಗುಬ್ಬಿ ವೀರಣ್ಣನಂಥವರು ಮುಂತಾದ ಜನರು ಎಲ್ಲೋ ಹೋದರು. ಅಂಥವರನ್ನು ಬಿಟ್ಟು ಯಾವ ಕಾರಣಕ್ಕೋಸ್ಕರ ಇವರನ್ನು ಆ ಗದ್ದುಗೆಯಲ್ಲಿ ಕೂರಿಸಿದ್ದೀರಿ? ಅವರಿಗೆ ಇವತ್ತು ತಿಂಗಳಿಗೆ 2500 ರೂಪಾಯಿ ಸಂಬಳ, ಮನೆ ಬಾಡಿಗೆ 750 ರೂಪಾಯಿ, ಹೋದವರಿಗೆ ಕಾಫಿತಿಂಡಿ ಕೊಡುವುದಕ್ಕೆ 500 ರೂಪಾಯಿ, ಮೆಡಿಕಲ್ ಬೆನಿಫಿಟ್ 200 ರೂಪಾಯಿ, ಫ್ರೀ ಟೆಲಿಫೋನ್, ಫ್ರೀ ಕಾರ್, ಫ್ರೀ ಡ್ರೈವರ್, ಫ್ರೀ ಪೆಟ್ರೋಲ್, ಹೀಗೆ ತಿಂಗಳಿಗೆ 6-7 ಸಾವಿರ ರೂಪಾಯಿಗಳು ಲೆಕ್ಕದ ಪ್ರಕಾರ ಸಿಗುವ ಖರ್ಚು. ಈ ಬಗ್ಗೆ ಇಲ್ಲಿ ಪ್ರಸ್ತಾಪವಾದಾಗ, ಬೋರ್ಡ್ ಡಿಸಿಷನ್ ಆದರೂ ಕೂಡ ಜನರಲ್ ಬಾಡಿಯಲ್ಲಿ ಅಪ್ರೂವ್ ಆಗದೆ ಅವರಿಗೆ ಸಂಬಳ ಕೊಡದ ಹಾಗೆ ಪತ್ರ ಬರೆದಿದ್ದೇವೆಂದು ಮಾನ್ಯ ಸಚಿವರು ಈ ಸಭೆಯಲ್ಲಿ ಆಶ್ವಾಸನೆ ಕೊಟ್ಟರು. 1

ಬಾಡಿ ಮೀಟಿಂಗ್ ಇತ್ತು. ಆ ಮೀಟಿಂಗನ್ನು ಇವರು ಪತ್ರ ಬರೆದು ಮುಂದುವರಿಸಿದರು. ಮುಂದಿನ ದಿನಾಂಕವನ್ನು ಗೊತ್ತುಪಡಿಸಿ ತಿಳಿಸುವುದಾಗಿ ತಿಳಿಸಿದ್ದು ಇಂದಿಗೂ ಮುಂದುವರಿದೇ ಇದೆ. ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಯಾರಿದ್ದಾರೆ ಅವರು ಇವತ್ತಿಗೂ ಕೂಡ ತಾವು ಮ್ಯಾನೇಜಿಂಗ್ ಡೈರೆಕ್ಟರ್ ಎಂದೂ, ನಾನೇ ಎಲ್ಲವನ್ನು ವ್ಯವಹರಿಸತಕ್ಕವನು ಎಂದು ಬ್ಯಾಂಕಿಗೆ ಕಾಗದ ಬರೆದು ಸಂಬಳ ತೆಗೆದುಕೊಳ್ಳುತ್ತಿದ್ದಾರೆ ಇದು ಸುಳ್ಳೋ ನಿಜವೋ ಎಂಬುದನ್ನು ಮಾನ್ಯ ಸಚಿವರಿಂದ ತಿಳಿಯುವುದಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳ ತಲೆ ಅಲ್ಲಾಡುತ್ತಿದ್ದುದನ್ನು ನೋಡಿದಾಗ, ಅದು ಏನು ಇಲ್ಲ ಎಂಬ ಭಾವನೆ ವ್ಯಕ್ತವಾಯಿತು. ಆದರೆ ತಾವು 2-3 ವಿಷಯಗಳನ್ನು ಸ್ಪಷ್ಟೀಕರಣ ಮಾಡಬೇಕು.

( ) whether he has not written a letter to a Bank stating that he is Managing Director.

(2) The second point is whether he is not signing cheques as Managing Director.

(3) Has he not drawn all his salary according to the Boards Resolution, from 1-1-1976 ?

(Madam Speaker in the Chair)

If he has drawn, is it not violation of the assurance given by the Hon'ble Minister in this House ?

These are the four points on which I want clarification.

SRI B. SUBBAIAH SHETTY.—Please repeat in the last point.

SRI H. D. DEVE GOWDA.—You have made a categorical assurance that you are not going to allow the emoluments as they have to be approved in the General body. The General body is postponed. The factual position is that he has already drawn the salary according to the decision of the Board, from 1-1-1976. Is it not contrary to the assurance given in this House ? If it is so, what is the action that will be taken by the Government ?

These are the points to be clarified by the Government.

ಶ್ರೀ ಕೋಣಂದೂರು ಲಿಂಗಪ್ಪ.—ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿ ಬೇಡಿಕೆಯ ಬಗ್ಗೆ ಇಷ್ಟು ಹೇಳಿ, ಮಾನ್ಯ ಸಚಿವರು ಇದರಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸುತ್ತಾರೆಂದು ನನ್ನ ನಂಬಿಕೆಯನ್ನು ವ್ಯಕ್ತಮಾಡುತ್ತೇನೆ.

ಎಂಪ್ಲಾಯ್‌ಮೆಂಟ್ ಮತ್ತು ಟ್ರೈನಿಂಗ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಸರ್ಕಾರದವರು ಒದಗಿಸಿರತಕ್ಕ ಅಂಕಿಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು 4,96,396 ಜನ ನಿರುದ್ಯೋಗಿಗಳು ಇದ್ದಾರೆ. ಇವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ನನ್ನ ಅಂದಾಜಿನ ಪ್ರಕಾರ ಹಳ್ಳಿಗಳಲ್ಲಿ ಈ ರೀತಿಯಾಗಿ ರಿಜಿಸ್ಟರ್ ಮಾಡಿಸಿಕೊಳ್ಳದೆ ಇರುವವರು, ವಿದ್ಯಾವಂತರಲ್ಲದವರು ಇನ್ನೂ ಐದು ಲಕ್ಷ ಜನ ಇದ್ದಾರೆ. ಹೆಚ್ಚು ಕಡಿಮೆ 10 ಲಕ್ಷ ಜನ ನಮ್ಮ ರಾಜ್ಯದಲ್ಲಿ ನಿರುದ್ಯೋಗಿಗಳು ಇದ್ದಾರೆ. ಇಷ್ಟು ಜನಕ್ಕೆ ಅಪಾಯಿಂಟ್‌ಮೆಂಟ್ ನಮ್ಮ ರಾಜ್ಯದಲ್ಲಿ ನಿಜವಾಗಿಯೂ ಸಿಕ್ಕುತ್ತದೆಯೇ? ಯಾರೋ ಕೆಲವರು ಹೇಳುತ್ತಿದ್ದರು, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಇಂಟರವ್ಯೂ

ಬರುವ ಹಾಗೆ ಮಾಡಿಕೊಳ್ಳುವುದೇ ಕಷ್ಟ ಎಂದು. ಅವಿದ್ಯಾವಂತ ನಿರುದ್ಯೋಗಿಗಳು, ಮತ್ತು ವಿದ್ಯಾವಂತ ನಿರುದ್ಯೋಗಿಗಳು, ಇವರುಗಳಲ್ಲಿ ಯಾರು ಯಾರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿಲ್ಲ ಅಂಥವರು ಎಷ್ಟು ಜನ ಇದ್ದಾರೆ ಎನ್ನುವುದು ಇನ್ನೂ ಸರಿಯಾಗಿ ನಿರ್ಣಯ ಆಗಿಲ್ಲ. ಪಾಪ ಹಳ್ಳಿಗಾಡುಗಳಲ್ಲಿ ಬಡ ಜನರು ತಮ್ಮ ಮಕ್ಕಳನ್ನು ಓದಿಸಿ ತನ್ನ ಮಗ ಮುಂದೆ ನನ್ನನ್ನು ಸಾಕುತ್ತಾನೆ ಎಂದು ತಿಳಿದುಕೊಂಡು ಆಸೆಯಿಂದ ಇರುವವರು ಎಷ್ಟೋ ಜನರು ಇರುತ್ತಾರೆ. ಇಂಥವರ ಮಕ್ಕಳಿಗೆ ಉದ್ಯೋಗ ಸಿಕ್ಕದೆ, ಉದ್ಯೋಗ ಹುಡುಕುವುದೇ ಒಂದು ಕೆಲಸವಾಗಿದೆ. ಇವರ ಜೀವನದ ಬಗ್ಗೆ ಇವರ ಬದುಕಿನ ಬಗ್ಗೆ ನಮ್ಮ ರಾಜ್ಯ ಸರ್ಕಾರವಾಗಲೀ, ನಮ್ಮ ರಾಷ್ಟ್ರವಾಗಲೀ ಏನೊಂದು ಯೋಜನೆಯನ್ನೂ ಕೂಡ ಮಾಡದೆ, ಗಾಯದ ಮೇಲೆ ಬರೆ ಎಳೆಯುವ ಹಾಗೆ ಬರೆಯನ್ನು ಎಳೆಯುತ್ತಲೇ ಬಂದಿದ್ದಾರೆ. ಇದಕ್ಕಿದ್ದ ಹಾಗೆ ಸರ್ಕಾರದವರು ಹಾಫ್ ಎ ಮಿಲಿಯನ್ ಜಾಬ್ ಸ್ಕೀಂ ಎಂದು ಮಾಡಿದರು. ಇದರಲ್ಲಿ ಕೆಲವರನ್ನು ಕೆಲಸಕ್ಕೆ ಸೇರಿಸಿಕೊಂಡರು. ಮತ್ತೆ ಲೋಕಲ್ ಕ್ಯಾಂಡಿಡೇಟ್ ಎಂದು ನೇಮಕ ಮಾಡಿಕೊಂಡರು. ಇವರುಗಳು ಮೂರು ನಾಲ್ಕು ವರ್ಷ ಸರ್ವೀಸ್ ಮಾಡಿದ ಮೇಲೆ ಇವರನ್ನು ಕನ್‌ಫರ್ಮ್ ಮಾಡಿದರು. ಇವರುಗಳು ಕನ್‌ಫರ್ಮ್ ಆಯಿತು ಎಂದು ಮದುವೆ, ಮುಂಜಿ ಮನೆ ಮಠಗಳನ್ನು ಮಾಡಿಕೊಳ್ಳಬೇಕು ಎನ್ನುವುದರಲ್ಲಿಯೇ ಇವರನ್ನು ಕೆಲಸದಿಂದ ಕಿತ್ತುಹಾಕುವುದು ಮಾಡಿ ಇವರುಗಳಲ್ಲಿಯೂ ಅನೇಕ ಜನ ನಿರುದ್ಯೋಗಕ್ಕೆ ತುತ್ತಾಗಿದ್ದಾರೆ. ಇವರ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಇನ್ನು ಇವರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಸರ್ಕಾರದವರು ಇವರುಗಳನ್ನು ರೀ ಇನ್‌ಸ್ಟೇಟ್ ಮಾಡುವ ಬಗ್ಗೆ ತೀವ್ರ ಕ್ರಮ ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇವಲ ನಾಲ್ಕೈದು ಸಾವಿರ ಜನಕ್ಕೆ ಸಂಬಂಧಪಟ್ಟ ವಿಚಾರ, ಇದು ಗಹನವಾದ ವಿಚಾರ ಸರ್ಕಾರದವರು ಇದನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಬೇಕು. ಇವರಲ್ಲದೆ ನಮ್ಮ ರಾಜ್ಯದಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ಸ್ ಸರ್ಕಾರದವರ ಲೆಕ್ಕದ ಪ್ರಕಾರ 5383 ಜನ ನಿರುದ್ಯೋಗಿಗಳು ಇದ್ದಾರೆ. ಇವರ ಸ್ಥಿತಿ ಏನಾಗಿದೆ ಎಂದರೆ, ಅವರು ಮುಂದೆ ಕೆಲಸಕ್ಕೆ ಹೋಗುವಹಾಗಿಲ್ಲ, ಅವರು ಏಜ್‌ಬಾರ್ ಆಗಿದ್ದಾರೆ. ಅವರೆಲ್ಲರೂ ಈಗ 28 ವರ್ಷಕ್ಕಿಂತ ಜಾಸ್ತಿ ವಯಸ್ಸಿನವರು, ಇವರಿಗೆ ಯಾರು ಉದ್ಯೋಗವನ್ನು ಕೊಡುವಂತಿಲ್ಲ. ಇವರುಗಳಿಂದ ಬಂದಂಥ ಪತ್ರಗಳು ನನ್ನಲ್ಲಿ ಅನೇಕ ಇವೆ. ನಮ್ಮ ಹಳ್ಳಿಗಳ ಕಡೆ ಮಕ್ಕಳನ್ನು ಸರಿಯಾದ ವಯಸ್ಸಿಗೆ ಯಾರನ್ನೂ ಸ್ಕೂಲಿಗೆ ಸೇರಿಸುವುದಿಲ್ಲ. 8–9 ವರ್ಷ ವಯಸ್ಸಿನ ಮೇಲೆಯೇ ಸ್ಕೂಲಿಗೆ ಸೇರಿಸುತ್ತಾರೆ. ಇದು ತಪ್ಪು ಎಂದು ನಾನೂ ಒಪ್ಪುತ್ತೇನೆ. ಆದರೆ ಈ ತಪ್ಪನ್ನು ಮಾಡುವುದಕ್ಕೆ ಕಾರಣಕರ್ತರು ಯಾರು, ಸರ್ಕಾರದವರೇ. ಸರ್ಕಾರದವರು ಕಂಪಲ್ಸರಿ ಎಜುಕೇಷನ್ ಮಾಡಬೇಕು ಎಂದು ಕಾನೂನು ಇದ್ದರೂ ಕೂಡ, ಇವರುಗಳನ್ನು ಸರಿಯಾದ ವಯಸ್ಸಿನಲ್ಲಿ ಶಾಲೆಗೆ ಹೋಗುವ ಹಾಗೆ ಮಾಡದೆ ಇದ್ದದ್ದು ಸರ್ಕಾರದವರ ತಪ್ಪು. ಇದು ಜನರ ತಪ್ಪಲ್ಲ. ಒಟ್ಟು ವಿದ್ಯಾಭ್ಯಾಸ ಆಗಬೇಕಾದರೆ, 23 ವರ್ಷ ಬೇಕಾಗುತ್ತದೆ. ಪ್ರೈಮರಿ ಸ್ಕೂಲು 7 ವರ್ಷ, ಹೈಸ್ಕೂಲು 3 ವರ್ಷ, ಪಿ ಯು. ಸಿ ಎರಡು ವರ್ಷ, ಗ್ರಾಜುಯೇಷನ್ 3 ವರ್ಷ, ಪೋಸ್ಟ್ ಗ್ರಾಜುಯೇಷನ್ 2 ವರ್ಷ, ಮತ್ತೆ ಸೇರುವಾಗ 8 ವರ್ಷ ಇದ್ದರೆ, 23 ವರ್ಷ ಬೇಕಾಗುತ್ತದೆ. ಹಳ್ಳಿಯವರು ಇಷ್ಟು ವಿದ್ಯಾಭ್ಯಾಸ ಮಾಡಬೇಕಾದರೆ 26 ಅಥವಾ 28 ವರ್ಷಗಳನ್ನು ಮುಟ್ಟಿರುತ್ತಾರೆ. ಕೆಲವರು ಮೂವತ್ತು ವರ್ಷದವರೆಗೂ ಬಂದಿರುತ್ತಾರೆ. ಆದರೆ ಇವರಿಗೆ ಕೆಲಸ ಸಿಕ್ಕುವುದು ಅಸಾಧ್ಯವಾದ ಮಾತು. ಇವರನ್ನು ಕೇಳುವವರು ಯಾರೂ ಇಲ್ಲ, ಎಲ್ಲಿಯೂ ಸ್ಥಳ ಇವರಿಗಿಲ್ಲ. ಇವರ ಕಷ್ಟವನ್ನು ಮನಗಂಡ ಕೇರಳ ಸರ್ಕಾರದವರು ಏಜ್ ಎಕ್ಸೆಂಪ್ಷನ್ ಕೊಟ್ಟಿದ್ದಾರೆ. ಇವರು 30 ವರ್ಷದವರೆಗೂ ಕೆಲಸಕ್ಕೆ ಸೇರಲು ಅವಕಾಶ ಇದೆ ಎಂದು ಎಕ್ಸೆಂಪ್ಷನ್ ಕೊಟ್ಟಿದ್ದಾರೆ. ಆಂಧ್ರ ಸರ್ಕಾರದವರೂ ಈ ರೀತಿ ಮಾಡಿದ್ದಾರೆ, ತಮಿಳುನಾಡು ಸರ್ಕಾರದವರೂ ಮಾಡುವವರಿದ್ದಾರೆ ಎಂದು ನಾನು ಕೇಳಿದ್ದೇನೆ. ನಮ್ಮ ಸರ್ಕಾರದವರೂ ಸಹ ಪೋಸ್ಟ್ ಗ್ರಾಜುಯೇಟ್ಸ್‌ಗೆ ವಯೋಮಿತಿಯನ್ನು ಸಡಿಲ ಮಾಡಬೇಕು, ಈ ದಿಸೆಯಲ್ಲಿ ಬೇರೆ ಸರ್ಕಾರಗಳ ನೀತಿಯನ್ನು ತಾವು ಅನುಸರಿಸಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.—ಇನ್ನೂ ಹತ್ತು ವರ್ಷದವರೆಗೆ ಕೇಂದ್ರ ಸರ್ಕಾರದವರು ಇದರ ಬಗ್ಗೆ ಪ್ರಯತ್ನ ಮಾಡಿದರೂ, ಇದು ಸಾಧ್ಯ ಆಗುತ್ತದೆಯೇ?

ಶ್ರೀ ಕೋಣಂದೂರು ಲಿಂಗಪ್ಪ.—ಮಾಡಿ ತೋರಿಸುತ್ತೇವೆ, ನಿಮ್ಮ 30 ವರ್ಷದ ಪಾಪದ ಕೊಳೆ ತೊಳೆಯಲಿಕ್ಕೆ ಸಾಕಷ್ಟು ಸಮಯ ಬೇಕು, ನಾವು ಅಧಿಕಾರಕ್ಕೆ ಬಂದು ಕೇವಲ 70 ದಿವಸಗಳಾಗಿವೆ, ನಾವು ಖಂಡಿತವಾಗಿಯೂ ಇನ್ನು ಹತ್ತು ವರ್ಷದಲ್ಲಿ ಇದನ್ನು ಮಾಡಿಯೇ ತೋರಿಸುತ್ತೇವೆ. ಇಲ್ಲದೇ ಹೋದರೆ ಅಧಿಕಾರ ಬಿಡುತ್ತೇವೆ. ನಿಮ್ಮ ಹಾಗೆ 20 ಪಾಯಿಂಟ್ ಎಂದು ಪ್ರೋಗ್ರಾಂ ಎಂದು ಹೇಳಿಕೊಂಡು ಬೊಂಬೆ ಆಟ ತೋರಿಸುವುದಕ್ಕೆ ಹೋಗುವುದಿಲ್ಲ. ನಾವು ಯಾವ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದ್ದೇವೆಯೋ ಅವುಗಳನ್ನ ಮಾಡಿಯೇ ತೋರಿಸುತ್ತೇವೆ ಅದರ ಬಗ್ಗೆ ಅನುಮಾನ ತಮಗೆ ಬೇಡ.

ಶ್ರೀ ಕೆ. ಬಿ. ಶಿವಯ್ಯ—ಅನುಮಾನ ಬಂದರೆ ಜನತೆಯೇ ನಿಮ್ಮನ್ನು ಅಧಿಕಾರದಿಂದ ಬಿಡಿಸುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರದಲ್ಲಿ ಆಗಲೇ ಬಿಡಿಸಿದ್ದಾರೆ, ಇಲ್ಲಿಯೂ ನಿಮ್ಮನ್ನು ಜನತೆಯು ಬಿಡಿಸುವವರಿದ್ದಾರೆ. ಅದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ರಾಜ್ಯದಲ್ಲಿ ಸರ್ಕಾರದವರಿಗೆ ಗೊತ್ತಿರುವ ಹಾಗೆ ಐದು ಲಕ್ಷ ಜನ ನಿರುದ್ಯೋಗಿಗಳು ಇದ್ದರೂ ಕೂಡ, ಸರ್ಕಾರದವರೇ ರಚನೆ ಮಾಡುವಂಥ ಬೋರ್ಡುಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ತಮಗೆ ಬೇಕಾದವರನ್ನೇ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇವೆಲ್ಲವನ್ನು ನಮಗೆ ಕೇಳಿ ಕೇಳಿ, ಕಿವಿ ಮೂಗು ಜೊಡ್ಡು ಹಿಡಿದುಹೋಗಿದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಕೆ. ಎಸ್. ಆರ್. ಟಿ. ಸಿ. ಇದೆ, ಕೆ. ಇ. ಬಿ ಇದೆ ಮತ್ತು ಹೌಸಿಂಗ್ ಬೋರ್ಡು ಇದೆ, ಇಲ್ಲಿ ಖಾಲಿ ಬೀಳುವ ಹುದ್ದೆಗಳನ್ನು ಯಾವ ರೀತಿ ನೇಮಕ ಮಾಡುತ್ತಾರೆ? ಇವರುಗಳು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಅಭ್ಯರ್ಥಿಗಳ ಹೆಸರುಗಳನ್ನು ತರಿಸಿಕೊಳ್ಳುವುದಿಲ್ಲ. ಸರ್ಕಾರದವರಲ್ಲಿರುವಂತೆ ಅಲ್ಲಿ ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿಯೂ ಇಲ್ಲ, ಬೋರ್ಡಿನವರೇ ತಮಗೆ ಬಂದ ಹಾಗೆ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಮಂತ್ರಿಗಳ ಎಕ್ಸ್‌ಚೇಂಜಿನಿಂದ ಬರುವ ಹೆಸರುಗಳನ್ನು ತರಿಸಿಕೊಂಡು ಆಯ್ಕೆ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಈ ರೀತಿ ಆದರೆ ನಮ್ಮ ಹಳ್ಳಿಗಾಡಿನ ಬಡ ಜನತೆ ಎಲ್ಲಿಗೆ ಹೋಗಬೇಕು, ಯಾರಿಗೆ ಅರ್ಜಿ ಹಾಕಬೇಕು? ಸಾಮಾನ್ಯವಾಗಿ ನಮ್ಮ ಜನರಿಗೆ ವೇಕೆನ್ಸಿ ಎಲ್ಲೆಲ್ಲಿ ಇವೆ ಎನ್ನುವುದೂ ಗೊತ್ತಾಗುವುದಿಲ್ಲ. ಕರ್ನಾಟಕ ಗೆಜೆಟ್ ಬರುತ್ತದೆ ಅದರಲ್ಲಿ ಕೆಲವು ಹುದ್ದೆಗಳಿಗೆ ಅರ್ಜಿಯನ್ನು ಕರೆಯುತ್ತಿರುತ್ತಾರೆ. ಆದರೆ ಹಳ್ಳಿಯಲ್ಲಿರತಕ್ಕ ಹುಡುಗರಿಗೂ ಇದೂ ಸಹ ಗೊತ್ತಿರುವುದಿಲ್ಲ. ಅವರ ಪೇಚಾಟ ನೋಡಿ ನಾನೇ ಶಿವಮೊಗ್ಗದ ನನ್ನ ಮನೆಯ ಮುಂದೆ ನನಗೆ ಬರುತ್ತಿದ್ದ ಗೆಜೆಟ್ ಕಾಪಿಯನ್ನು ಇಡುತ್ತಿದ್ದೆ. ಯಾರೋ ಪುಣ್ಯಾತ್ಮರು ಅಡ್ವರ್‌ಟೈಸ್‌ಮೆಂಟ್ ಷೀಟ್‌ನ್ನೇ ಕಿತ್ತುಕೊಂಡು ಹೋಗಿ ಬೇರೆಯವರು ಅರ್ಜಿಯನ್ನು ಹಾಕದಂತೆ ಮಾಡಿದರು. ಇದನ್ನು ತಿಳಿದ ಮೇಲೆ ನಾನು ಬೇಜಾರು ಆಗಿ ಈ ಕೆಲಸವನ್ನು ಅಲ್ಲಿಗೆ ಬಿಟ್ಟೆ. ಬೇರೆಯವರಿಗೂ ಉದ್ಯೋಗ ಸಿಕ್ಕಲಿ ಎನ್ನುವ ಮನೋಭಾವ ಇಲ್ಲದೆ ಇರುವವರು ಹಾಗೆ ಮಾಡಿದ್ದಾರೆಂದು ತಿಳಿಯಿತು. ಇದು ಆರೋಗ್ಯಕರ ಲಕ್ಷಣವಲ್ಲ. ಬೇರೆ ರಾಜ್ಯಗಳಲ್ಲಿ ಪಬ್ಲಿಕ್ ರಿಲೇಷನ್ ಯುನಿಟ್ ಎಂದು ಮಾಡಿದ್ದಾರೆ. ತಾಲ್ಲೂಕು ಮತ್ತು ಜಿಲ್ಲಾ ಭಾಗಗಳಲ್ಲಿ ಈ ರೀತಿಯ ಮಾಹಿತಿಯನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು.

5-00 P.M.

ಅವರಿಗೆ ಸೌಜನ್ಯವಾಗಿ ಹೇಳುವಂಥಾ ಬುದ್ಧಿ ಬರಬೇಕು, ಮತ್ತು ಕಾಗದವನ್ನು ಬರೆದು ಕೇಳತಕ್ಕಂಥಾವರಿಗೆ ಆ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸುವಂಥಾ ಒಂದು ವ್ಯವಸ್ಥೆ ಮಾಡಬೇಕು, ಹಾಗೆ ಮಾಡದೇ ಹೋದರೆ ಬೇರೆ ಯಾವ ರೀತಿಯಿಂದಲೂ ಪ್ರಯೋಜನವಾಗುವುದಿಲ್ಲ.

ಇನ್ನು ಟ್ರೈನಿಂಗ್ ಬಗ್ಗೆ ಹೇಳುವುದಾದರೆ ಐ.ಟಿ.ಐ.ನವರು ಈಗ ಏನು ಟ್ರೈನಿಂಗ್ ಕೊಡುತ್ತಿದ್ದಾರೆ ಅದನ್ನು ಮುಕ್ತಾಯವಾಗಿ ಕಾಣಿಸುವುದು ಬೇಡವೇ. ಆ ಟ್ರೈನಿಂಗ್ ಪಡೆದುಕೊಂಡು ಸಾವಿರಾರು ಹುಡುಗರು ಹೊರಗೆ ಬರುತ್ತಿದ್ದಾರೆ. ಆ ಬಗ್ಗೆ ಸರಿಯಾದ ಒಂದು ವ್ಯವಸ್ಥೆ ಇಲ್ಲ. ಆ ರೀತಿ ಟ್ರೈನಿಂಗ್ ಕೊಡುವ ಬದಲು ಈವೊತ್ತಿನ ದಿವಸ ಅತ್ಯಾಧುನಿಕವಾದ ಟ್ರೈನಿಂಗ್ ಏನು ಇದೆ ರೇಡಿಯೋ ಟ್ರೈನಿಂಗ್, ಎಲೆಕ್ಟ್ರಾನಿಕಲ್ ಟ್ರೈನಿಂಗ್ ವಗೈರೆಗಳು ಏನು ಇವೆ ಅಂಥಾ ಟ್ರೈನಿಂಗ್ ಅನ್ನು ಕೊಟ್ಟರೆ ಅವರು ಆ ಟ್ರೈನಿಂಗ್ ಅನ್ನು ಮುಗಿಸಿಕೊಂಡು ಬಂದ ಮೇಲೆ ಸರ್ಕಾರದ ಸಹಾಯವನ್ನೋ ಅಥವಾ ಇನ್ನ್ಯಾವ ರೀತಿಯಿಂದಲಾದರೂ ಸಹಾಯ ಪಡೆದು ತಮ್ಮ ಕಾಲ ಮೇಲೆ ತಾವು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಈ ಬಗ್ಗೆ ಸರ್ಕಾರದವರು ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ

ಇನ್ನು ಕಡೆಯದಾಗಿ ಲೇಬರ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಈ ಇಲಾಖೆ ಬಗ್ಗೆ ಈ ಮೊದಲು ನಮ್ಮ ಹಿರಿಯರಾದಂಥಾ ಮಾನ್ಯ ಅಬ್ದುಲ್ ಖುದ್ದೂಸ್‌ರವರು ಮಾತನಾಡಿದ್ದಾರೆ. ಅಲ್ಲದೆ ಮಾನ್ಯ ಶ್ರೀ ಶೀರನಾಳಿ ಚಂದ್ರಶೇಖರ್‌ರವರೂ ಸಹ ಒಂದೆರಡು ಸತ್ಯಾಂಶಗಳನ್ನು ಶಿವಮೊಗ್ಗಾಕ್ಕೆ ಸಂಬಂಧಪಟ್ಟಂತೆ ಹೇಳಿರುವುದು ನಾನು ಆ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇಷ್ಟು ದಿವಸವೂ ತಾವು ಮರುಕ ಪಡುತ್ತಿದ್ದರೇನೋ ?

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಅದನ್ನು ಗ್ರಹಿಸಿಕೊಳ್ಳಬೇಕು. ಶಿವಮೊಗ್ಗಾದ ಸಕ್ಕರೆ ಕಾರ್ಖಾನೆ ಬಗ್ಗೆ ಅವರು ಚೆನ್ನಾಗಿ ಹೇಳಿರುವುದರಿಂದ ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಹಾಗೆಯೇ ಭದ್ರಾವತಿ ಬಗ್ಗೆ ಶ್ರೀಮಾನ್ ಅಬ್ದುಲ್ ಖುದ್ದೂಸ್‌ರವರು ಹೇಳಿರುವುದರಿಂದ ಆ ಬಗ್ಗೆಯೂ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈವೊತ್ತು ಈ ಬಗ್ಗೆ ಒಂದು ಮೂಲಭೂತವಾದ ಉದ್ದೇಶ ನಮಗೆ ಏನು ಕಾಣುತ್ತ ಇದೆ ಎಂದರೆ ಈ ಸರ್ಕಾರ ಕೇಂದ್ರ ಸರ್ಕಾರದ ವಿರುದ್ಧ ಹೆಜ್ಜೆ ಹಾಕುತ್ತಾ ಇದೆ ಎಂದು ನಾನು ಅದನ್ನು ಸುಸ್ಪಷ್ಟವಾಗಿ ಹೇಳುತ್ತೇನೆ. ಈ ಸರ್ಕಾರ ಕೇಂದ್ರ ಸರ್ಕಾರದ ವಿರುದ್ಧ ಭುಜಬಲ ಪ್ರದರ್ಶನ ತೋರಿಸುವ ಹಾದಿಯಲ್ಲಿ ನಡೆಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಿಮಗೆ ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ತುರ್ತು ಪರಿಸ್ಥಿತಿ ಸಮಯದಲ್ಲಿ ಯಾರು ಯಾರನ್ನು ಕೆಲಸದಿಂದ ತೆಗೆದುಹಾಕಿದ್ದರೋ ಅವರೆಲ್ಲರನ್ನೂ ಕೂಡ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒಂದು ಆಜ್ಞೆಯನ್ನು ಪ್ರತಿ ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರ ಪ್ರಕಾರ ಈ ತುರ್ತು ಪರಿಸ್ಥಿತಿ ಸಮಯದಲ್ಲಿ ರೈಲ್ವೆ ಮುಷ್ಕರ ಹೂಡಿದಾಗ ಯಾರು ಯಾರನ್ನು ಕೆಲಸದಿಂದ ತೆಗೆದು ಹಾಕಿದ್ದರೋ ಅಂಥವರನ್ನೆಲ್ಲಾ ಸುಮಾರು 18-20 ಸಾವಿರ ಜನರನ್ನು ವಾಪಸ್ಸು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಹಾಗೆಯೇ ಕೇಂದ್ರ ಸರ್ಕಾರದ ಇನ್ನು ಇತರ ನಾನಾ ಇಲಾಖೆಗಳಲ್ಲೂ ಕೂಡ ಅವರುಗಳನ್ನು ವಾಪಸ್ಸು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಅದೇ ರೀತಿಯಾಗಿ ರಾಜ್ಯ ಸರ್ಕಾರದವರೂ ಕೂಡ ಪಾಲಿಸಬೇಕು ಎನ್ನುವ ಆದೇಶವನ್ನು ಕೊಟ್ಟಿದ್ದಾರೆ. ಹಾಗಿದ್ದರೂ ಕೂಡ ನಮ್ಮ ಸರ್ಕಾರದವರು ಈವೊತ್ತಿನವರೆಗೂ ಸಹ ಯಾರೊಬ್ಬರನ್ನೂ ವಾಪಸ್ಸು ಕೆಲಸಕ್ಕೆ ತೆಗೆದುಕೊಂಡಿಲ್ಲ. ಆದುದರಿಂದ ನಾನು ಹೇಳುವುದು ಈ ಸರ್ಕಾರ ಕೇಂದ್ರ ಸರ್ಕಾರ ವಿರುದ್ಧ ತಮ್ಮ ಭುಜಬಲ ಪ್ರದರ್ಶನವನ್ನು ತೋರಿಸುವ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ ಎಂದು ಇದಕ್ಕೆ ಕೇಂದ್ರ ಸರ್ಕಾರದವರು ತಕ್ಕ ಬುದ್ಧಿಯನ್ನು ಕಲಿಸಲೇಬೇಕು. ಕೇಂದ್ರ ಸರ್ಕಾರದಿಂದ ಬಂದಂಥಾ ಆಜ್ಞೆಯನ್ನು ಶಿರಸಾವಹಿಸಿ, ಅನುಷ್ಠಾನಕ್ಕೆ ತರತಕ್ಕಂಥಾ ಬುದ್ಧಿಯನ್ನು ಇವರಿಗೆ ಕಲಿಸಬೇಕು ಎಂದು ತಮ್ಮ ಮೂಲಕ ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ವಿಚಾರವಾಗಿ ನಾನು ತಮಗೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಈವೊತ್ತು ನಮ್ಮ ಹಿರಿಯರಾದಂಥಾ ಶ್ರೀಮಾನ್ ಬಿ. ವಿ. ಕಕ್ಕಿಲಾಯ ಅವರು ಹೇಳಿದರು ಏನೆಂದರೆ ವಿಧಾನಸೌಧದ ಸುತ್ತಲೂ ಟೆಂಟ್ ಹಾಕಿಕೊಂಡು ಕಾರ್ಮಿಕ ಮುಖಂಡರುಗಳು ಸತ್ಯಾಗ್ರಹ ಮಾಡುತ್ತಿದ್ದಾರೆ ಎಂದು ಅದಕ್ಕೆ ಒಬ್ಬರು ಕಾಂಗ್ರೆಸ್ ಸದಸ್ಯರು ಏನು ಹೇಳಿದರು ಎಂದರೆ ಪ್ರತಿನಿತ್ಯವೂ ಈ ರೀತಿ

ಮಾಡುತ್ತಾ ಇರುವುದು 'ಹಿಂದಾನ' ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ 'ಹೌದು' ಏತಕ್ಕೆಂದರೆ ತುರ್ತು ಪರಿಸ್ಥಿತಿ ಸಮಯದಲ್ಲಿ ಸುಮಾರು 2 ವರ್ಷಗಳಿಂದ ಅವರ ಬೇಡಿಕೆಗಳು ಏನು ಇತ್ತು ಅದು ಈಡೇರದೆ ಅವರನ್ನು ಸರ್ವಾಧಿಕಾರದ ಅಡಿಯಲ್ಲಿ ಮೂಕ ಪಶುಗಳಂತೆ ಇಟ್ಟಿದ್ದರಲ್ಲಾ ಇದು ಸರಿಯೇ ಅಂತ ಕೇಳಿದೆ. ಅವರು ಹೋರಾಟ ಏತಕ್ಕೆ ಮಾಡುತ್ತಿದ್ದಾರೆ ಎಂದರೆ ತುರ್ತು ಪರಿಸ್ಥಿತಿ ಸಮಯದಲ್ಲಿ ಎರಡು ವರ್ಷಗಳ ಕಾಲ ಅವರನ್ನು ಏನು ನೋಯಿಸಿದ್ದರೋ ಆ ನೋವನ್ನು ಆ ಜನ ಈವಾಗ ತೋಡುಕೊಂಡರೆ ಅದರಲ್ಲಿ ತಪ್ಪೇನಿಲ್ಲವಲ್ಲಾ. ಅದರ ಸಂಕೇತವಾಗಿ ಅವರುಗಳು ವಿಧಾನಸೌಧದ ಸುತ್ತಲೂ ಟೆಂಟ್ ಹಾಕಿಕೊಂಡು ತಮಗೆ ಆಗಿರುವ ಅನ್ಯಾಯವನ್ನು, ತಮಗೆ ಆ ಸಂದರ್ಭದಲ್ಲಿ ಆಗಿರುವ ನೋವನ್ನು ತೋಡಿಕೊಳ್ಳುವ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದಾರೆ. ಇದು ಇನ್ನೂ ಹೆಚ್ಚಾಗಬೇಕು. ಅವರು ತಮ್ಮ ಕಷ್ಟಗಳನ್ನು ವ್ಯಕ್ತಪಡಿಸುವುದಕ್ಕೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬೇಡಿಕೆಗಳ ಈಡೇರಿಕೆಗಾಗಿ ಈ ತಿಂಗಳು 13ನೇ ತಾರೀಕಿನಿಂದ ಅವರುಗಳು ಸತ್ಯಾಗ್ರಹಕ್ಕೆ ಕೂತಿದ್ದಾರೆ. ಮತ್ತು ಈ ಸಂಬಂಧವಾಗಿ ಕಾರ್ಮಿಕ ಸಚಿವರಿಗೆ ಒಂದು ಮನವಿಯನ್ನು 16ನೇ ತಾರೀಕು ಸಲ್ಲಿಸಿದ್ದಾರೆ. ನಂತರ 18ನೇ ತಾರೀಕು ರಾಜ್ಯದ ಕಾರ್ಮಿಕ ಮಂತ್ರಿಗಳು ಹೇದಿಕೆಯು ಮುಖಂಡರೊಡನೆ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳ ಎದುರಿಗೆ ಸಮಾಲೋಚನೆ ನಡೆಸಿ ಚರ್ಚೆ ನಡೆಸಿದ್ದಾರೆ. ಆವಾಗ ಕೆಲವು ಬೇಡಿಕೆಗಳು ಇತ್ಯರ್ಥವಾಗಿವೆ. ಇನ್ನು ಕೆಲವು ಬೇಡಿಕೆಗಳು ಏನು ಉಳಿದಿವೆ. ಆ ಬೇಡಿಕೆಗಳನ್ನು ಪುನರ್ಪರಿಶೀಲನೆ ಮಾಡುತ್ತೇವೆ ಎಂದು ಕಾರ್ಮಿಕ ಸಚಿವರು ಅವರಿಗೆ ಭರವಸೆ ಕೊಟ್ಟಿದ್ದು ಉಂಟು. ಆದರೆ ಇದುವರೆಗೂ ಸಹ ಆ ಪರಿಶೀಲನೆ ಪರಿಶೀಲನೆಯಾಗಿಯೇ ಉಳಿದಿದೆ ಏನೂ ಮಾಡಿಲ್ಲಾ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದು ಏನೆಂದರೆ ಈವೊತ್ತಿನವರೆಗೂ ಕೂಡ ಆ ಕಾರ್ಮಿಕ ಮುಖಂಡರನ್ನು ಕರೆಸಿ, ಏನು ಪರಿಹಾರವನ್ನೂ ಮಾಡುತ್ತೇವೆಂದು ಹೇಳದೇ ಇರುವುದರಿಂದ ಕಾರ್ಮಿಕ ಮುಖಂಡರುಗಳು ಅಲ್ಲದೆ ಇನ್ನೂ ಇತರ 100ಕ್ಕೂ ಹೆಚ್ಚು ಕಾರ್ಮಿಕ ಮುಖಂಡರುಗಳು, ಕಾರ್ಯಕರ್ತರುಗಳು ಜೂನ್ 22, 1977ರ ಬೆಳಿಗ್ಗೆಯಿಂದ 23ರ ಬೆಳಿಗ್ಗೆಯವರೆಗೆ ಸಾಮೂಹಿಕ ಉಪವಾಸ ಮುಷ್ಕರ ಹೂಡಿದ್ದಾರೆ. ಇದರಲ್ಲಿ ದೊಡ್ಡ ದೊಡ್ಡ ಲೇಬರ್ ಮುಖಂಡರುಗಳು ಇದ್ದಾರೆ. ಅವರುಗಳು ಯಾರ್ಯಾರು ಎಂದರೆ.—

ಸರ್ವಶ್ರೀ : ಎಸ್. ವೆಂಕಟರಾಂ (ಹೆಚ್.ಎಂ.ಪಿ.)
ಎಸ್. ಸೂರ್ಯನಾರಾಯಣರಾವ್ (ಸಿ.ಐ.ಟಿ.ಯು.)
ಆಲಂಪಲ್ಲಿ ವೆಂಕಟರಾಂ (ಬಿ.ಎಂ.ಎಸ್.)
ಕೆ. ವಿ. ಶ್ರೀನಿವಾಸ್ (ಎಲ್.ಐ ಸಿ.)
ಎಂ. ಕೆ. ರವೀಂದ್ರನ್‌ಪಿಳ್ಳೈ (ಎ.ಐ.ಡಿ.ಇ.ಎಫ್.)
ರಾಂಮೋಹನರಾವ್ (ಎಸ್.ಐ.ಜಿ.ಇ.ಎಫ್.)
ಕೆ. ರಾಮದಾಸನ್ (ಎನ್.ಡಬ್ಲ್ಯು.ಎಫ್.)
ಆರ್. ನಾಗೇಂದ್ರಪ್ರಸಾದ್ (ಐ.ಟಿ.ಐ.)
ಕೆ. ಪಿ. ಸಚ್ಚೀಂದ್ರನಾಥ್ (ಕೆ.ಕೆ.ಸಿ.)

ಇವರುಗಳ ಜೊತೆಗೆ ಇನ್ನೂ ದೊಡ್ಡ ದೊಡ್ಡ ಲೀಡರ್‌ಗಳು ಸತ್ಯಾಗ್ರಹ ಮಾಡುವುದಕ್ಕೆ ಕುಳಿತಿದ್ದಾರೆ, ಅವರ ಇತಿಹಾಸವನ್ನೂ ಸಹ ಬೇಕಾದರೆ ಹೇಳುತ್ತೇನೆ. ಅವರು ತುರ್ತುಪರಿಸ್ಥಿತಿ ಸಮಯದಲ್ಲಿ ಸರ್ವಾಧಿಕಾರದ ವಿರುದ್ಧ ಕಾರ್ಮಿಕರ ಹಕ್ಕುಗಳ ಪರವಾಗಿ ಹೋರಾಟ ಮಾಡಿದಂಥಾ ಜನರು. ಅವರು ಮೀಸಾದಲ್ಲಿ ಇದ್ದು ಮೊನ್ನೆ ತಾನೇ ಹೊರಗೆ ಬಂದವರು. ಅಂಥಾವರು ಇದರಲ್ಲಿ ವಿಶೇಷವಾದ ಆಸಕ್ತಿ ವಹಿಸಿದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಸರ್ಕಾರ ಆ ಕಾರ್ಮಿಕ ಮುಖಂಡರನ್ನೂ ಕರೆಸಿ, ಮಾಲೀಕ ವರ್ಗದವರೊಡನೆ ಸಮಾಲೋಚನೆ ಮಾಡಿ ಅವರೊಂದಿಗೆ ಮಾತುಕತೆ ನಡೆಸಿ ಒಂದು ಇತ್ಯರ್ಥಕ್ಕೆ ಬರಬೇಕು ಎಂದು

ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಬಗ್ಗೆ ತ್ರಿಪಕ್ಷೀಯವಾಗಿ ಆಲೋಚನೆ ಮಾಡಬೇಕು ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳುವುದಾದರೆ ನಮ್ಮ ಹಿರಿಯ ಮುಖಂಡರಾದಂಥಾ ಶ್ರೀಮಾನ್ ಎಂ. ಎಸ್ ಕೃಷ್ಣನ್‌ರವರು ಈ ಬಗ್ಗೆ ಏನು ಉಪವಾಸ ಮಾಡುತ್ತಿದ್ದಾರೆ ಅವರ ಬಗ್ಗೆ ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರ ಹೇಳಿದ ಮೇಲೆ ನಾವೂ ಕೂಡ ಆ ಒಂದು ವಿವಂಚನೆಗೆ ಒಳಗಾಗಿದ್ದೇವೆ. ಅವರು ಏನು ಹೇಳಿದರು ಎಂದರೆ ಈ ಸದನದಲ್ಲಿ ಅವರಿಗೆ ಹೇಳುವುದಕ್ಕೆ ಅವಕಾಶ ಇರುವಾಗ ಹೊರಗೆ ಕೂತುಕೊಂಡು ಸತ್ಯಾಗ್ರಹ ಮಾಡುವುದು ಸಾಧುವೇ ಎಂದು ಈ ಬಗ್ಗೆ ನಾವೂ ಕೂಡ ಆಲೋಚನೆ ಮಾಡಬೇಕು. ಒಂದು ವೇಳೆ ಈ ಸದನ ಇಲ್ಲದೇ ಇರುವಾಗ ಹೊರಗೆ ಸತ್ಯಾಗ್ರಹ ಮಾಡುವುದು ಸರಿ. ಹಾಗೆ ಇರುವಾಗ ಈ ಸದನ ಇರುವಾಗ ಇಲ್ಲಿ ಹೇಳುವುದಕ್ಕೆ ಬೇಕಾದಷ್ಟು ಅವಕಾಶ ಇರುವಾಗ ಅವರು ಸತ್ಯಾಗ್ರಹ ಮಾಡುವುದು ಸಾಧುವೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ ನಾವೂ ಕೂಡ ಇದರ ಬಗ್ಗೆ ವಿವಂಚನೆಗೆ ಒಳಗಾಗಿದ್ದೇವೆ. ಅದೇನೇ ಇರಲಿ ಮಾನ್ಯ ಎಂ. ಎಸ್. ಕೃಷ್ಣನ್‌ರವರನ್ನೂ ಮತ್ತು ಬೇರೆ ಬೇರೆ ಯೂನಿಟ್‌ಗಳ ಮುಖಂಡರನ್ನೂ ಕರೆಸಿ ಅವರ ಬೇಡಿಕೆಗಳು ಏನು ಇವೆ ಅದನ್ನು ಪರಿಹಾರ ಮಾಡುವುದು ಒಳ್ಳೆಯದು.

ಶ್ರೀ ಬಿ. ವಿ. ಕಕ್ಕಿಲಾಯ.—ಹಾಗಾದರೆ ಈ ಸದನ ನಡೆಯುತ್ತಾ ಇರುವಾಗ ಯಾವ ರೀತಿಯಾಗಿಯೂ ಪ್ರತಿಭಟನೆ ಮಾಡಬಾರದು ಅಂತ ನಿಮ್ಮ ಅರ್ಥವೇ ?

ಶ್ರೀ ಕೋಣಂದೂರು ಲಿಂಗಪ್ಪ.—ಹಾಗೇನಿಲ್ಲಾ. ಯಾವ ರೀತಿಯಾಗಿಯೂ ಪ್ರತಿಭಟನೆ ಮಾಡುವುದಕ್ಕೆ ನಾನು ಸಮರ್ಥಿಸುತ್ತೇನೆ ಆದರೆ ಅದಕ್ಕಿಂತಲೂ ಹೆಚ್ಚಾಗಿ ಈ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದ ಈ ದಿನ ಅವರು ಮಾತನಾಡುವುದು ಬಹಳ ನಷ್ಟವಾಯಿತಲ್ಲಾ ಅನ್ನುವ ಸಂಕೋಚದಿಂದ ನಾನು ಈ ರೀತಿ ಹೇಳಿದೆ. ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನಾನು ಒಂದೇ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈವೊತ್ತಿನ ದಿವಸ ಯಾವ ಯಾವ ಕಾರ್ಮಿಕರನ್ನು ಹೊರಗೆ ತೆಗೆದು ಹಾಕಿದ್ದಾರೆ ಯಾವ ಯಾವ ಕಾರ್ಖಾನೆಗಳು ಮುಚ್ಚಿವೆ ಅನ್ನುವುದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈವೊತ್ತಿನ ದಿವಸ ಮೈಸೂರು ವೈರ್ ಅಂಡ್ ಮೆಟಲ್ ಇಂಡಸ್ಟ್ರೀಸ್ ಮೂರೂವರೆ ವರ್ಷದಿಂದಲೂ ಮುಚ್ಚಿದೆ ನಂತರ ಮೈಸೂರ್ ಸ್ಟೀಲ್ ಅಂಡ್ ವೈರ್ ಪ್ರಾಜೆಕ್ಟ್ಸ್ ಕೂಡ 2 ವರ್ಷದಿಂದ ಕೆಲಸ ಇಲ್ಲದೆ ಆ ಕಾರ್ಮಿಕರ ಸ್ಥಿತಿ ಈವೊತ್ತಿನ ದಿವಸ ಹೇಳುವುದಕ್ಕೇನೇ ಸಾಧ್ಯವಿಲ್ಲದ ಹಾಗೆ ಆಗಿದೆ ಈ ಮಾಲೀಕರು ಏನು ಮಾಡುತ್ತಾರೋ ಗೊತ್ತಿಲ್ಲ. ಹಾಗೆಯೇ ಮೈಸೂರ್ ಟೂಲ್ಸ್ ಒಂದು ವರ್ಷದಿಂದಲೂ ಮುಚ್ಚಿದೆ. ಅಲ್ಲಿ ಸಾವಿರಾರು ಜನರು ಬೀದಿ ಪಾಲಾಗಿದ್ದಾರೆ. ಹಾಗೆಯೇ ಮೈಸೂರು ಕೆ. ಆರ್. ಮಿಲ್ಸ್ ತೆಗೆದುಕೊಂಡರೆ ಅದು ಲಾಕ್‌ಔಟ್ ಆಗಿದೆ. ಅಷ್ಟೇ ಅಲ್ಲ, ಸರ್ಕಾರೀ ನೌಕರರನ್ನು ತೆಗೆದುಕೊಂಡರೆ ರೂಲ್ ನಂಬರ್ 285ರ ಪ್ರಕಾರ ಎಷ್ಟೋ ನೌಕರರನ್ನು ಹೊರಗೆ ಹಾಕಿದ್ದೀರಿ ಅವರನ್ನು ಇನ್ನೂ ಕೆಲಸಕ್ಕೆ ತೆಗೆದುಕೊಂಡಿಲ್ಲಾ, ಅವರೆಲ್ಲಾ ಬೀದಿ ಪಾಲಾಗಿದ್ದಾರೆ. ಹಾಗೆಯೇ ದೇವಿಕಾರಾಣಿ ಅನ್ನುವ ಒಂದು ಎಸ್ಟೇಟ್ ತೆಗೆದುಕೊಂಡರೆ ಅಲ್ಲಿ 12 ಜನರನ್ನು ತೆಗೆದಿದ್ದಾರೆ. ಯಾರು ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ತೆಗೆದಿದ್ದಾರೋ ಅವರು ಆ ಕಾರ್ಮಿಕರನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದಿಂದ ಆದೇಶ ಬಂದಿದ್ದರೂ ಕೂಡ ಯಾರೂ ಸಹ ಆ ಆದೇಶವನ್ನು ಈವೊತ್ತಿನ ದಿವಸ ಪರಿಪಾಲಿಸುತ್ತಾ ಇಲ್ಲ, ಅನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಆದ್ದರಿಂದ ನಮ್ಮ ಸರ್ಕಾರದವರು ಮಾಲೀಕ ವರ್ಗದವರನ್ನು ಮತ್ತು ಕಾರ್ಮಿಕ ಮುಖಂಡರನ್ನು ಕರೆಸಿ ಅವರೊಡನೆ ಚರ್ಚೆ ಮಾಡುವುದರ ಮೂಲಕ ಅವರ ಒಂದು ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವುದಕ್ಕೆ ಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಕಾರ್ಮಿಕ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಂದ ಒಂದು ಹತ್ತು ಮಾರು ದೂರ ಒಂದು ಸಣ್ಣ ವಾಕ್ ಹೋದರೆ ಅವರುಗಳು ಸತ್ಯಾಗ್ರಹ ಮಾಡುತ್ತಿರುವ ಜಾಗ ಸಿಗುತ್ತದೆ. ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಎಸ್. ವೆಂಕಟರಾಂ, ಶ್ರೀ ಸೂರ್ಯನಾರಾಯಣರಾವ್ ಮುಂತಾದ ಕಾರ್ಮಿಕ ಮುಖಂಡರನ್ನು ಭೇಟಿ ಮಾಡಿ ಅವರಿಗೆ ಒಂದು ಸಮಯ ಕೊಟ್ಟು,

ಇಲ್ಲಿಗೆ ಕರೆಸಿಕೊಂಡು ಕೂತು ಮಾತನಾಡಬೇಕು. ಅವರ ಜೊತೆ ಮಾಲೀಕರ ಪ್ರತಿನಿಧಿಗಳನ್ನು ಸಹ ಕರೆಸಿ ತ್ರಿಪಕ್ಷೀಯವಾಗಿ ಮಾತನಾಡುವುದರ ಮೂಲಕ ಅವರ ಬೇಡಿಕೆಗಳನ್ನೆಲ್ಲ ಇತ್ಯರ್ಥ ಮಾಡಬೇಕೆಂದು ಪ್ರಾರ್ಥಿಸಿಕೊಂಡು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರರೆಡ್ಡಿ (ಚಾವ ರಾಜಪೇಟೆ) —ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳ ಬಗ್ಗೆ ಕಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇವೊತ್ತು ಹೋಟೇಲ್ ಕಾರ್ಮಿಕರ ಬಗ್ಗೆ ಹೇಳುವುದಾದರೆ, ಆ ಕಾರ್ಮಿಕರ ಸ್ಥಿತಿ ಚಿಂತಾಜನಕ ವಾಗಿದೆ. ಸರ್ಕಾರದವರು ಹೋಟೇಲ್ ಕಾರ್ಮಿಕರ ಸಂಬಳವನ್ನು ನಿಗದಿ ಮಾಡಿದ್ದರೂ ಸಹ ಅದರಂತೆ ಹೋಟೇಲ್ ಮಾಲೀಕರು ಕೊಡುತ್ತಿಲ್ಲ ಈ ಬಗ್ಗೆ ಕಾರ್ಮಿಕ ಇಲಾಖೆಯ ಇನ್ಸ್‌ಪೆಕ್ಟರ್ ಆಗಲೀ, ಕಾರ್ಮಿಕ ಇಲಾಖೆಯ ಸಿಬ್ಬಂದಿಯವರಾಗಲೀ ಹೋಗಿ ತನಿಖೆ ಮಾಡುತ್ತಿಲ್ಲ. ಕಾರ್ಮಿಕ ರೇನಾದರೂ ಸರಿಯಾದ ಸಂಬಳವನ್ನು ಕೇಳಿದರೆ ಅಂತಹವರನ್ನು ಕೆಲಸದಿಂದ ತೆಗೆಯುತ್ತಾರೆ. ಪೋಲೀಸಿನವರ ಸಹಾಯದಿಂದ ಹೋಟೇಲ್ ಮಾಲೀಕರು ಜಾಸ್ತಿ ಸಂಬಳ ಕೇಳಿದ ನೌಕರರನ್ನು ಹೆದರಿಸಿ ಬೆದರಿಸಿ ಕೆಲಸದಿಂದ ಹೊರಗೆ ಹಾಕುತ್ತಿರುವಂತಹ ಪರಿಸ್ಥಿತಿಯನ್ನು ನಾವು ಇಂದು ಕಾಣುತ್ತಿದ್ದೇವೆ. ಈ ರೀತಿ ಕೆಲಸ ಕಳೆದುಕೊಂಡಂತಹವರು ಲೇಬರ್ ಕಮೀಷನರ್ ಅವರ ಹತ್ತಿರ ಹೋಗಿ ಅರ್ಜಿ ಕೊಟ್ಟರೆ, ಅವು ಒಂದು ವರ್ಷ, ಒಂದೂವರೆ ವರ್ಷ ಇಲ್ಲವೇ ಎರಡು ವರ್ಷಗಳಾ ದರೂ ತೀರ್ಮಾನವಾಗುತ್ತಿಲ್ಲ. ಈ ರೀತಿ ಅವರು ಕೊಟ್ಟ ಅರ್ಜಿ ಜಾಗ್ರತೆ ತೀರ್ಮಾನವಾಗ ದಿದ್ದರೆ, ಅಂತಹವರು ನಿರುದ್ಯೋಗದಿಂದ ನರಳಬೇಕಾಗಿದೆ. ಇದರಿಂದ ಹೋಟೇಲ್ ಮಾಲೀಕರಿ ಗೇನೂ ನಷ್ಟವಾಗುವುದಿಲ್ಲ ಆದರೆ ಕಾರ್ಮಿಕರು ಬಹಳ ಕಷ್ಟ ಅನುಭವಿಸಬೇಕಾಗಿದೆ. ಇಂತಹ ವರ ಬಗ್ಗೆ ಒಂದು ತನಿಖೆಯನ್ನು ಮಾಡಿಸಬೇಕು. ಈಗ ಈ ಹೋಟೇಲ್ ಕಾರ್ಮಿಕರಿಗೆ ವೈದ್ಯ ಕೀಯ ಸೌಲಭ್ಯವನ್ನು ಸಹ ನೀಡುತ್ತಿಲ್ಲ ಈ ಸೌಲಭ್ಯ ಕೊಡದ ಕಾರಣ ಹೋಟೇಲ್‌ನೊಳಗೆ ತಟ್ಟೆ ಲೋಟಗಳನ್ನು ತೊಳೆಯುತಕ್ಕ ಹುಡುಗರ ಕೈಕಾಲುಗಳನ್ನು ನೋಡುವುದಕ್ಕೆ ಸಾಧ್ಯವಿಲ್ಲದಂತಾ ಗಿದೆ. ಇದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ವೈದ್ಯಕೀಯ ಸೌಲಭ್ಯ ಕೊಡದ ಮಾಲೀಕರ ಬಗ್ಗೆ ಕಾರ್ಮಿಕ ಇಲಾಖೆಯವರು ಯಾವ ಕ್ರಮವನ್ನೂ ಕೈಕೊಂಡಿಲ್ಲವೆಂದು ಹೇಳುತ್ತೇನೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ಒಬ್ಬ ಹುಡುಗ ತನ್ನ ನ್ಯಾಯವಾದ ಬೇಡಿಕೆಯನ್ನು ಹೋಟೇಲ್ ಮಾಲೀಕರ ಮುಂದೆ ಇಟ್ಟು ಕೇಳಿದಾಗ ಆತನನ್ನು ಹೋಟೆಲ್ ಮಾಲೀಕರು ಪೋಲೀಸ್ ಸ್ಟೇಷನ್‌ಗೆ ಕರೆದು ಕೊಂಡು ಹೋಗಿ ಅಲ್ಲಿ ಶಿಕ್ಷೆ ಕೊಡಿಸಿದರು ಈ ವಿಚಾರ ನನ್ನ ಗಮನಕ್ಕೆ ಬಂದಾಗ, ನಾನು ಅವರಿಗೆ ಫೋನ್ ಮಾಡಿ, ಈ ರೀತಿ ಮಾಡಿದ್ದು ಅನ್ಯಾಯವೆಂದು ಹೇಳಿ ಆತನನ್ನು ಬಿಡಿಸಿದೆ. ನಂತರ ಆತನ ಮೇಲೆ ಬೇರೆ ಏನೋ ಅಪಾದನೆ ಹೊರಿಸಿ ತುರ್ತುಪರಿಸ್ಥಿತಿಯ ಒಂದು ಅವಕಾಶವನ್ನು ಪಡೆದುಕೊಂಡು ಆತನನ್ನು ಜೈಲಿಗೆ ಹಾಕಿಸಿದರು. ಇಂತಹ ಒಂದು ಸ್ಥಿತಿಯನ್ನು ನಾವು ಕಾಣು ತ್ತಿದ್ದೇವೆ. ಮಾನ್ಯ ಕಾರ್ಮಿಕ ಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವು ಹೋಟೆಲ್ ಮಾಲೀಕರು ಗೂಂಡಾಗಳನ್ನು ಇಟ್ಟು ಕೊಂಡು. ಅವರಿಗೆ ಕಾಫಿ ತಿಂಡಿ ಕೊಡುವುದರ ಮೂಲಕ, ಗಲಾಟೆ ಮಾಡತಕ್ಕಂಥ ಕಾರ್ಮಿಕರನ್ನು ಹೊಡೆಸುತ್ತಿದ್ದಾರೆ.

ಶ್ರೀ ಕೆ ಪ್ರಭಾಕರ ರೆಡ್ಡಿ.—ಪೋಲೀಸರ ಸಹಾಯವನ್ನು ಸಹ ಪಡೆದುಕೊಂಡು ಗಲಾಟೆ ಮಾಡಿದಂಥ ಕಾರ್ಮಿಕರನ್ನು ಹೆದರಿಸಿ ಬೆದರಿಸಿ ಕೆಲಸದಿಂದ ಹೊರಗೆ ಹಾಕುತ್ತಿದ್ದಾರೆ.

ಅಧ್ಯಕ್ಷರು —ತಾವು ಬೇರೆ ವಿಷಯಗಳನ್ನು ಹೇಳಿ. ಅದೊಂದು ವಿಷಯಕ್ಕೆ 15 ನಿಮಿಷ ತೆಗೆದುಕೊಳ್ಳಬೇಡಿ.

ಶ್ರೀ ಕೆ. ಪ್ರಭಾಕರ ರೆಡಿ. – ಮುಖ್ಯವಾಗಿ ಹೋಟೇಲ್ ಕೆಲಸಗಾರರು ಎಷ್ಟೆಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ಪರಿಶೀಲನೆ ಮಾಡಿ, ಕಾರ್ಮಿಕ ಇಲಾಖೆಯವರು ಆ ಬಗ್ಗೆ ಒಂದು ಲೆಕ್ಕ ತೆಗೆದುಕೊಳ್ಳಬೇಕು ಏಕೆಂದರೆ ಇಂದು 5-6 ವರ್ಷಗಳ ಕಾಲ ಕೆಲಸ ಮಾಡಿದವರನ್ನು ಸಹ ಪರಿಹಾರ ಭತ್ಯ ಕೊಡದೆ ಕೆಲಸದಿಂದ ತೆಗೆಯುತ್ತಿದ್ದಾರೆ. ಈ ವಿಚಾರದಲ್ಲಿ ಕಾರ್ಮಿಕ ಇಲಾಖೆ ಯವರು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ವಾರ್ತಾ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಹಿಂದೆ ವಾರ್ತಾ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದ ವಾರ್ತಾ ಸಚಿವರು ವಾರ್ತಾ ಇಲಾಖೆಯನ್ನು ತಮ್ಮ ಮನೆಯ ಬೊಕ್ಕಸವೆಂದು ತಿಳಿದುಕೊಂಡು ವರ್ತನೆ ಮಾಡಿದ್ದಾರೆ. ಅದು ಸರ್ಕಾರದ ಬೊಕ್ಕಸ ಅಲ್ಲ ಒಂದು ಪಾರ್ಟಿಯ ಬೊಕ್ಕಸ ಅಲ್ಲ ಅದು ಒಬ್ಬ ವ್ಯಕ್ತಿಯ ಬೊಕ್ಕಸವೆಂದು ಅವರು ತಿಳಿದುಕೊಂಡು ತಮಗೆ ಬೇಕಾದವರಿಗೆ ಜಾಹೀರಾತು ನೀಡಿದ್ದಾರೆ. ಒಬ್ಬೊಬ್ಬ ವ್ಯಕ್ತಿಗೆ 5 ಸಾವಿರ, ಹತ್ತು ಸಾವಿರ ಎಂದು ಬರೆದು ಕಳುಹಿಸುವುದರ ಮೂಲಕ ಜಾಹೀರಾತು ನೀಡಿದ್ದಾರೆ. ಈ ರೀತಿ ಕೆಲವೇ ವ್ಯಕ್ತಿಗಳಿಗೆ ನೀಡಿದ ಜಾಹೀರಾತುಗಳು ಎಷ್ಟು ಎಂಬ ಬಗ್ಗೆ ತನಿಖೆ ಮಾಡಬೇಕೆಂದು ಹೇಳುತ್ತೇನೆ. ಶ್ರೀ ಸಂಜಯಗಾಂಧಿಯವರು ಬೆಂಗಳೂರಿಗೆ ಬಂದಾಗ ಸ್ಪೆಷಲ್ ಇಷ್ಯೂ ಎಂದು ಅವರ ಹೆಸರಿನ ಮೇಲೆ ಜಾಹೀರಾತು ನೀಡಿದ್ದಾರೆ. ಈ ಇಲಾಖೆ ಕಾಂಗ್ರೆಸ್ ಪಕ್ಷದ ಒಂದು ಸೊತ್ತು ಎನ್ನುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಶ್ರೀ ಸಂಜಯ ಗಾಂಧಿಯವರು ಇಲ್ಲಿಗೆ ಬಂದಾಗ ನ್ಯೂಸ್-ರೀಲ್ ತೆಗೆಯುವುದರ ಬಗ್ಗೆಯೂ ಸಹ ಹಣದ ದುರುಪಯೋಗ ಕಾಂಗ್ರೆಸ್ ಪಾರ್ಟಿಯ ಒಬ್ಬ ವ್ಯಕ್ತಿಗಾಗಿ ನಡೆದಿದೆ. ಒಟ್ಟಿನಲ್ಲಿ ಅವರು ಈ ವಾರ್ತಾ ಇಲಾಖೆಯನ್ನು ಯಾವ ರೀತಿಯಲ್ಲಿ ದುರುಪಯೋಗ ಮಾಡಿಕೊಂಡಿದ್ದಾರೆಂಬ ಬಗ್ಗೆ ಈಗಿನ ಮಂತ್ರಿಗಳು ತನಿಖೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಬಗ್ಗೆ ತನಿಖೆಯಾಗಬೇಕು ಎಂಬುದನ್ನು ನಾನೂ ಸಹ ಒಪ್ಪುತ್ತೇನೆ. ಅವರ ಮೇಲೆ ಆರೋಪಣೆ ಇದೆ ಎಂಬ ಕಾರಣದಿಂದಲೇ ಅವರನ್ನು ಆ ಇಲಾಖೆಯಿಂದ ತೆಗೆಯಲಾಯಿತು. ಶ್ರೀ ಗುಂಡೂರಾವ್ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಅವರ ಮೇಲೆ ಆಪಾದನೆಗಳು ಬಂದ ಕಾರಣದಿಂದ ಅವರನ್ನು ಆ ಇಲಾಖೆಯಿಂದ ತೆಗೆದರು. ಈಗ ರಾಜೀನಾಮೆ ಕೊಡಬೇಕೆಂದಿರುವ 8 ಜನ ಮಂತ್ರಿಗಳ ಪೈಕಿ ಶ್ರೀ ಗುಂಡೂರಾವ್ ಅವರು ಸಹ ಇದ್ದಾರೆ. ಈ 8 ಜನರ ರಾಜೀನಾಮೆ ಪತ್ರಗಳನ್ನು ಮಾನ್ಯ ನಂಜೇಗೌಡರು ಕೀಸಿಂಜರ್ ಆಗಿ ದೆಹಲಿಗೆ ತೆಗೆದುಕೊಂಡು ಹೋದರು. ಈ 8 ಜನರ ಪೈಕಿ ಶ್ರೀ ಗುಂಡೂರಾವ್ ಅವರು ನಾನು ರಾಜೀನಾಮೆಗೆ ಪ್ರೆಸ್ ಮಾಡುವುದಿಲ್ಲ, ನನ್ನನ್ನು ಸೇಫ್ ಗಾರ್ಡ್ ಮಾಡಿ ಎಂದು ಹೇಳಿಕೊಂಡು ವಾಪಸ್ ಇವರ ಕಡೆಯೇ ಹೋಗಿ ಸೇರಿಕೊಂಡಿದ್ದಾರೆ. ಮುಂದಿನ ಚುನಾವಣೆಗೆ ದುಡ್ಡು ಕಾಸು ನೋಡಿ ಈ ಕೊಳ್ಳಬೇಕು, ಅದಕ್ಕಾಗಿ ರಾಜೀನಾಮೆಗೆ ಪ್ರೆಸ್ ಮಾಡುವುದಿಲ್ಲವೆಂದು ಅವರಿಗೆ ಶರಣು ಹೋಗಿದ್ದಾರೆಂದು ನಾನು ಕೇಳಿದ್ದೇನೆ.

ಅಧ್ಯಕ್ಷರು.—ಈ ವಿಷಯಗಳೆಲ್ಲಾ ಈ ಡಿಮ್ಯಾಂಡ್ಸ್‌ನಲ್ಲಿ ಹೇಗೆ ಬರುತ್ತದೆ?

ಶ್ರೀ ಕೆ. ಬಿ. ಶಿವಯ್ಯ.—ಅದೆಲ್ಲಾ ಇವರಿಗೆ ಹೇಗೆ ಗೊತ್ತಾಯಿತು?

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಶಿವಯ್ಯನವರೇ ಇದನ್ನೆಲ್ಲಾ ಹೇಳಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಯಾರು ಏಕೆ ಹೇಳಬೇಕು, ಅದು ಪೇಪರ್‌ನಲ್ಲಿಯೇ ಬಂದಿದೆ ಮಾತ್ರ ಅವರೇ ಮುಂದಿನ ಚುನಾವಣೆಗೆ ಸೀಟು ಬೇಕು, ದುಡ್ಡು ಬೇಕು ಎನ್ನುವವರು ಶ್ರೀ ಅರಸು ಅವರ ಪರವಾಗಿ ರುಜು ಹಾಕಿ ಎಂದು ಸದಸ್ಯರಿಂದ ಸಹಿ ಪಡೆಯುತಕ್ಕಂಥ ಕೆಲಸ ಲಾಂಜ್‌ನಲ್ಲಿ ನಡೆಯುತ್ತಿದೆ.

ಮಾನ್ಯ ಮುಖ್ಯ ಮಂತ್ರಿಗಳು ಚುನಾವಣೆಯ ಒಂದು ಪ್ರಚಾರವನ್ನು ವಾರ್ತಾ ಇಲಾಖೆಯ ನ್ಯೂಸ್‌ನಲ್ಲಿ ಕೊಟ್ಟಿದ್ದಾರೆ. ಆದ್ದರಿಂದ ಚುನಾವಣೆಯ ಸಂದರ್ಭದಲ್ಲಿ ವಾರ್ತಾ ಇಲಾಖೆಯನ್ನು ಒಂದು ಪಾರ್ಟಿಯ ಪ್ರಚಾರಕ್ಕಾಗಿ ಉಪಯೋಗ ಮಾಡಕೂಡದು ಎಂದು ನಾನು ಹೇಳುತ್ತೇನೆ.

ಇನ್ನು ಕನ್ನಡ ಚಲನ ಚಿತ್ರದ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳುತ್ತೇನೆ. ಇವೊತ್ತು ಚಲನಚಿತ ತೆರಿಗೆಯ ವಿನಾಯ್ತಿಯನ್ನು ಕೆಲವು ಚಿತ್ರಗಳಿಗೆ ಮಾತ್ರ ನೀಡುತ್ತಿದ್ದಾರೆ. ಕೆಲವು ಚಿತ್ರಗಳಿಗೆ ತೆರಿಗೆ ವಿನಾಯ್ತಿಯನ್ನು ನೀಡುತ್ತಾ ಇಲ್ಲ.

ಅಧ್ಯಕ್ಷರು.—ಎಲ್ಲಕ್ಕೂ ತೆರಿಗೆ ವಿನಾಯ್ತಿಯನ್ನು ಕೊಡಬೇಕು ಎಂದು ಹೇಳುತ್ತೀರಾ?

ಶ್ರೀ ಕೆ. ಪ್ರಭಾಕರ ರೆಡ್ಡಿ.—ಇವೊತ್ತು ಯಾವ ಒಂದು ದೃಷ್ಟಿಯಿಂದ ಚಲನಚಿತ್ರ ತೆರಿಗೆಯ ವಿನಾಯ್ತಿಯನ್ನು ನೀಡುತ್ತಿದ್ದಾರೆ ಎಂದರೆ ಕೆಲವು ಉತ್ತಮ ಚಿತ್ರಗಳಿಗೆ ತೆರಿಗೆಯ ವಿನಾಯ್ತಿಯನ್ನು ನೀಡುತ್ತಿಲ್ಲ ಮಾನ್ಯ ಹಣಕಾಸಿನ ಮಂತ್ರಿಗಳು ನಾಗರಹೊಳೆ ಚಿತ್ರವನ್ನು ನೋಡಿ ಇದು ಮಕ್ಕಳ ಚಿತ್ರ ಅಲ್ಲ ಇದಕ್ಕೆ ತೆರಿಗೆಯ ವಿನಾಯ್ತಿಯನ್ನು ಕೊಡಬಾರದು ಎಂದು ಹೇಳಿದ್ದಾರೆ. ಇದು ಉತ್ತಮವಾದ ಚಿತ್ರ ಎಂದುಕೊಂಡಿದ್ದೆ ಆದರೆ ಇದನ್ನು ನೋಡುವುದಕ್ಕೆ ಒಂದು ಕಾಲ ವ್ಯರ್ಥವಾಯಿತು ಎಂದು ಹೇಳಿದ್ದಾರೆ. ಯಾವ ಬೇಧ ಭಾವದಿಂದ ಯಾವ ಇನ್‌ಫ್ಲುಯೆನ್ಸಿನಿಂದ ತೆರಿಗೆಯನ್ನು ವಿನಾಯಿತಿ ಕೊಡುವುದಕ್ಕೆ ಹೋಗಬೇಡಿ. ಉತ್ತಮ ಚಿತ್ರಗಳಿಗೆ ಎಲ್ಲಾ ಚಿತ್ರಗಳಿಗೂ ಅವು ಬಿಡುಗಡೆಯಾದ 8 ವಾರಗಳ ತನಕ ತೆರಿಗೆಯ ವಿನಾಯಿತಿಯನ್ನು ಕೊಡಬೇಕು. ಕೆಲವು ಚಿತ್ರಗಳಿಗೆ ಯಾವರೀತಿ ವಿನಾಯಿತಿಯನ್ನು ಕೊಡುತ್ತಾರೆ ಎಂದರೆ ಚಿತ್ರ ಬಿಡುಗಡೆಯಾಗಿ ಕೆಲವು ವಾರ ಪ್ರದರ್ಶನವಾದಮೇಲೆ ತೆರಿಗೆಯ ವಿನಾಯಿತಿಯನ್ನು ಕೊಡುತ್ತಾರೆ. ಇದರಿಂದ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ತೆರಿಗೆಯ ವಿನಾಯಿತಿಯನ್ನು ನೀಡುವಾಗ ಉತ್ತಮ ಚಿತ್ರಗಳಿಗೆ ಎಲ್ಲಾ ಚಿತ್ರಗಳಿಗೂ 8 ವಾರಗಳ ತನಕ ತೆರಿಗೆಯ ವಿನಾಯಿತಿಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಚಲನ ಚಿತ್ರಗಳಿಗೆ ಪ್ರಶಸ್ತಿಯನ್ನು ನೀಡುವಾಗ ನಿರ್ಮಾಪಕರಿಗೆ ಎಷ್ಟು ಹಣವನ್ನು ನೀಡುತ್ತಾರೆಯೋ ಅದೇರೀತಿ ತಾಂತ್ರಿಕ ವರ್ಗದವರಿಗೂ ಹೆಚ್ಚಿಗೆ ಹಣವನ್ನು ಕೊಡಬೇಕು. ಇದು ಬಹಳ ಮುಖ್ಯವಾದದ್ದು. ಒಂದು ಚಲನ ಚಿತ್ರ ಬಹಳ ಉತ್ತಮ ರೀತಿಯಲ್ಲಿ ಬರಬೇಕಾದರೆ ತಾಂತ್ರಿಕ ವರ್ಗದವರ ಕೆಲಸ ಬಹಳ ಮುಖ್ಯವಾದದ್ದು ಇರುತ್ತದೆ. ಇವೊತ್ತು ಕನ್ನಡ ಚಿತ್ರರಂಗದಲ್ಲಿ ತಾಂತ್ರಿಕ ವರ್ಗದವರ ಒಂದು ಪರಿಸ್ಥಿತಿ ಏನಾಗಿದೆ ಎಂದರೆ ಅವರ ಒಂದು ಪರಿಸ್ಥಿತಿ ಚಿಂತಾಜನಕವಾಗಿದೆ. ಆದ್ದರಿಂದ ತಾಂತ್ರಿಕ ವರ್ಗದವರಿಗೆ ಹೆಚ್ಚಿನ ರೀತಿ ಹಣ ಸಹಾಯವನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೊತ್ತು ಕಪ್ಪು ಬಿಳುಪು ಚಿತ್ರಕ್ಕೆ ಒಂದು ಲಕ್ಷ ರೂಪಾಯಿಗಳ ಸಬ್ಸಿಡಿಯನ್ನೂ ಬಣ್ಣದ ಚಿತ್ರಕ್ಕೆ $1\frac{1}{2}$ ಲಕ್ಷ ರೂಪಾಯಿಗಳನ್ನು ನೀಡುತ್ತಿದ್ದಾರೆ. ಅದೂ ಎಲ್ಲ ಚಿತ್ರಗಳಿಗೂ ಸಬ್ಸಿಡಿಯನ್ನು ಕೊಡುವುದಿಲ್ಲ. ಅನುವಾದದ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುವುದಿಲ್ಲ. ಈಗ ಬಣ್ಣದ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುವಾಗ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಉತ್ತಮ ಚಿತ್ರವಾಗಿದ್ದರೆ ಸುಮಾರು 2 ಲಕ್ಷ ರೂಪಾಯಿಗಳನ್ನು ಕೊಡಬೇಕು. ಮತ್ತು ಆ ಚಿತ್ರಗಳನ್ನು ಚಿತ್ರ ಮಂದಿರಗಳಲ್ಲಿ ಕಡ್ಡಾಯವಾಗಿ ಪ್ರದರ್ಶನಕ್ಕೆ ತೆಗೆದುಕೊಂಡು ಬರಬೇಕು. ಕೆಲವು ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುತ್ತಿಲ್ಲ. ಆದ್ದರಿಂದ ಎಲ್ಲಾ ಚಿತ್ರಮಂದಿರಗಳಲ್ಲಿಯೂ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಬೇಕು ಎಂದು ಕಾನೂನು ಮಾಡಬೇಕು. 6 ತಿಂಗಳ ಕಾಲ ಕಡ್ಡಾಯವಾಗಿ ಕನ್ನಡ ಚಲನ ಚಿತ್ರವನ್ನು ಪ್ರದರ್ಶನ ಮಾಡಬೇಕು ಎಂದು ಒಂದು ಕಾನೂನು ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಆದ್ದರಿಂದ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ 10 ವರ್ಷಗಳ ಹಿಂದೆ ಹೆಸರನ್ನು ರಿಜಿಸ್ಟರ್ ಮಾಡಿಸಿದವರು ಅಲ್ಲಿಯೇ ಇದ್ದಾರೆ. ಆದರೆ ಈಗ ಹೊಸದಾಗಿ ಹೆಸರನ್ನು ರಿಜಿಸ್ಟಾರ್ ಮಾಡಿಸಿದವರಿಗೆ ಕೆಲವರಿಗೆ ಬೇಗ ಕೆಲಸಕ್ಕೆ ಅರ್ಹರುಗಳು ಇಂಟರ್‌ವ್ಯೂಗಳು ಬರುತ್ತವೆ. ಕೆಲವರಿಗೆ ಬರುವುದಿಲ್ಲ ಆದ್ದರಿಂದ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಯಾವಾಗ ಅವರು ಹೆಸರುಗಳನ್ನು ರಿಜಿಸ್ಟರ್ ಮಾಡಿಸಿರುತ್ತಾರೆ ಅವರಿಗೆ ಇಷ್ಟು ದಿವಸ ಆದಮೇಲೆ ಅವರಿಗೆ ಕೆಲಸಕ್ಕೆ ಇಂಟರ್‌ವ್ಯೂ ಕಳುಹಿಸಬೇಕು ಎನ್ನುವ ಒಂದು ನಿಯಮವನ್ನು ಹಾಕಿಕೊಂಡು ಅವರಂತೆ ಪ್ರಯಾಣದ ಪ್ರಕಾರ ಕೆಲಸಕ್ಕೆ ಇಂಟರ್‌ವ್ಯೂ ಕಳುಹಿಸುವಂತಹ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಇಷ್ಟು ಮಾತನಾಡುವುದಕ್ಕೆ ನನಗೆ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI B. SUBBIAH SHETTY (Minister of State for Information and Publicity) —Madam Speaker, I am thankful to the hon'ble members for the valuable suggestions and I am really much educated by the discussions. ಪಬ್ಲಿಕೇಷನ್ ಬಗ್ಗೆ ಮಾತನಾಡುವಾಗ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಸರ್ಕಾರಿ ಪಬ್ಲಿಕೇಷನ್‌ಗಳು ಏನಿವೆ ಜನಪದ ಹಾಗೂ ಮಾರ್ಚ್ ಆಫ್ ಕರ್ನಾಟಕ ಇವುಗಳಲ್ಲಿ ಕೇಂದ್ರ ಸರ್ಕಾರದಲ್ಲಿ ನಡೆಯುತ್ತಿಂತಹ ವಿದ್ಯಮಾನಗಳು, ಕಾರ್ಯಗಳು ಹಾಗೂ ಸಮಾಚಾರಗಳನ್ನು ತೆಗೆದುಕೊಂಡು ಸರಿಯಾಗಿ ಇವುಗಳಲ್ಲಿ ನಮೂದಿಸುತ್ತಾ ಇಲ್ಲ ಎಂದು ತಿಳಿಸಿದ್ದಾರೆ. ಹಾಗೂ ಕೇಂದ್ರದ ಮಂತ್ರಿಗಳ ಫೋಟೋಗಳನ್ನು ಹಾಕಲಿಲ್ಲ ಎಂದು ಒಂದು ಆಪಾದನೆಯನ್ನು ಮಾಡಿದ್ದಾರೆ. ಪಬ್ಲಿಸಿಟಿ ಡಿಪಾರ್ಟ್‌ಮೆಂಟ್ ನಮ್ಮ ಸ್ಟೇಟ್ ಗೌರ್ನ್‌ಮೆಂಟ್ ಅಚೀವ್‌ಮೆಂಟ್‌ಗಳೇನಿವೆ ಅವುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಾರೆ. ಹಾಗೆಯೇ ಸೆಂಟ್ರಲ್ ಗೌರ್ನ್‌ಮೆಂಟ್ ಅಚೀವ್‌ಮೆಂಟ್‌ಗಳೇನಿವೆ ಅವುಗಳಿಗೂ ಕೂಡ ಪಬ್ಲಿಸಿಟಿಯನ್ನು ಕೊಡುತ್ತಿದ್ದಾರೆ.

SRI H. D. DEVEGOWDA.—We are not interested in these things and the Prime Minister especially want to the extent of ordering not to put up any photos in the offices.

SRI B. SUBBAIAH SHETTY.—I am telling what is the general policy as regards the State Publicity Department and the Central publicity department. ಕೇಂದ್ರದ ಮಂತ್ರಿಗಳ ಫೋಟೋವನ್ನು ಪಬ್ಲಿಕ್ ಮಾಡಿಲ್ಲ ಎಂದು ಮಾನ್ಯ ಸದಸ್ಯರು ಅಪಾದನೆ ಮಾಡಿದರು. ಆದರೆ ನಮಗೆ ಅವರ ಫೋಟೋಗಳ ಪ್ರತಿಗಳು ಸಿಕ್ಕಿದ ತಕ್ಷಣ ಜನಪದದಲ್ಲಿ ಎಲ್ಲಾ ಕೇಂದ್ರದ ಕ್ಯಾಬಿನೆಟ್ ಸಚಿವರ ಫೋಟೋಗಳನ್ನೂ ಪ್ರಿಂಟ್ ಮಾಡಿ ವಾಲ್ ನ್ಯೂಸ್ ಪೇಪರ್‌ನಲ್ಲಿ ಹಾಕಿಸಿ ಅವುಗಳನ್ನು ಜನರಿಗೆ ಹಂಚುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಫೋಟೋಗಳನ್ನು ಭಿತ್ತಿ ಪತ್ರದಲ್ಲಿ ಪ್ರಿಂಟ್ ಮಾಡುವುದಕ್ಕೂ ಪತ್ರಿಕೆಯಲ್ಲಿ ಪ್ರಿಂಟ್ ಮಾಡುವುದಕ್ಕೂ ವ್ಯತ್ಯಾಸವಿಲ್ಲವೇ ? ಇವರು ಆ ಫೋಟೋಗಳನ್ನು ಭಿತ್ತಿ ಪತ್ರದಲ್ಲಿ ಪ್ರಿಂಟ್ ಮಾಡಿಸಿ ಜನಗಳಿಗೆ ಹಂಚಿದ್ದಾರೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇದರಲ್ಲಿ ಜನಪದದಲ್ಲಿ ವಾಲ್ ನ್ಯೂಸ್ ಪೇಪರ್ ಟೈಪ್ ಮಾಡಿಸುತ್ತಿದ್ದೇವೆ. ಗುಣಮಟ್ಟದಲ್ಲಿ ವಾಲ ನ್ಯೂಸ್ ಪೇಪರಿಗೂ ಮತ್ತು ಪತ್ರಿಕೆಗೂ ಯಾವ ವ್ಯತ್ಯಾಸವೂ ಇಲ್ಲ. ಎರಡನ್ನೂ ಒಂದೇ ರೀತಿ ಮಾಡಿಸುತ್ತಿದ್ದೇವೆ. ಇದನ್ನು ಮಾನ್ಯ ಸದಸ್ಯರು ಬಹುಶಃ ಸರಿಯಾಗಿ ನೋಡಿಲ್ಲ ಎಂದು ಕಾಣುತ್ತದೆ. ಕೇಂದ್ರದ ಬಜೆಟ್ ಬಗ್ಗೆ ಮತ್ತು ನೀತಿಯ ಬಗ್ಗೆ ನಾವು ಏನೂ ಅದರಲ್ಲಿ ಹೇಳಿಲ್ಲ.

ಮಾನ್ಯ ಸದಸ್ಯರು ಈ ಪತ್ರಿಕೆಯಲ್ಲಿ ಬಜೆಟ್‌ನ್ನು ಹಾಕಬೇಕಾಗಿತ್ತು, ಕೇಂದ್ರ ಸರ್ಕಾರದ ನೀತಿಯನ್ನು ಹಾಕಬೇಕಾಗಿತ್ತು ಎಂದು ಹೇಳಿದರು. ಬಜೆಟ್ ಯಾವಾಗ ಬಂತು ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಬಜೆಟ್ ಬಂದ ಮೇಲೆ ನಮ್ಮ ಇಷ್ಯೂ ಇನ್ನೂ ಬಂದಿಲ್ಲ. ಕೇಂದ್ರ ಸರ್ಕಾರದವರು ಬಜೆಟ್‌ನ್ನು ಎಲೆಕ್ಷನ್‌ಗೋಸ್ಕರ ಮುಂದೂಡಿದರೋ ಏನೋ ಗೊತ್ತಿಲ್ಲ. ಮೊದಲು ಮಂಡಿಸಲಾದ ಬಜೆಟ್‌ನಲ್ಲಿ ಏನೇನು ಸಂಗತಿಗಳಿವೆ ಮತ್ತು ಕೇಂದ್ರ ಸರ್ಕಾರದ ಸಮಗ್ರ ನೀತಿಗಳನ್ನು ಮುಂದಕ್ಕೆ ಹಾಕಬೇಕು. ಏಕೆಂದರೆ ಈಗ ಅಲ್ಲಿ ಪ್ರೋಬ್, ಇಲ್ಲಿ ಪ್ರೋಬ್ ನಡೆಯುತ್ತಿದೆ. ಸಮಗ್ರವಾಗಿ ರಾಷ್ಟ್ರಕ್ಕೆ ನೀತಿಗಳು ಬಂದಾಗ, ಅದರ ಬಗ್ಗೆ ಹೇಳಿಕೆ ಕೊಟ್ಟಾಗ, ಅವು ಒಳ್ಳೊಳ್ಳೆಯ ನೀತಿಗಳಾದರೆ ನಾವು ಪ್ರಚಾರ ಮಾಡುತ್ತೇವೆ.

5-30 ಪಿ.ಎಂ.

ಶ್ರೀ ಕೋಣಂದೂರು ಲಿಂಗಪ್ಪ.—ಕೇಂದ್ರದ ಮಂತ್ರಿಮಂಡಲ ಪ್ರಮಾಣವಚನ ಸ್ವೀಕಾರ ಮಾಡಿದ ಮೇಲೆ ಕೆಲಸದಿಂದ ಹೊರಗೆ ಹಾಕಿದವರನ್ನು ಮತ್ತೆ ವಾಪಸು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರಲ್ಲ ಅದು ನೀತಿ ಪ್ರಶ್ನೆ ಅಲ್ಲವೇ, ಅದನ್ನು ಏಕೆ ಹಾಕಲಿಲ್ಲ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಸಣ್ಣ ಪತ್ರಿಕೆಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯ ಮತ್ತು ಶ್ರೀಮಾನ್ ಕೆ. ಆರ್. ಶ್ರೀನಿವಾಸುಲುನಾಯ್ಡುರವರು ಹೇಳಿದ್ದಾರೆ. ಶ್ರೀಮಾನ್ ಕಕ್ಕಿಲಾಯರವರು ಮಾತನಾಡುವಾಗ ಸಣ್ಣ ಪತ್ರಿಕೆಗಳಲ್ಲಿ ಕೆಲವು ಪತ್ರಿಕೆಗಳು ಸರಿಯಾಗಿ ಸುದ್ದಿಗಳನ್ನು ಹಾಕುತ್ತಾ ಇಲ್ಲ ಜಾಹೀರಾತುಗಳಿಗೆ ಮಾತ್ರ ಇಂತಹ ಒಂದು ಹೆಸರುಗಳನ್ನು ಇಟ್ಟುಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಸರ್ಕಾರ ಕೂಡ ಸ್ವಲ್ಪ ವಿಚಾರ ಮಾಡುತ್ತಾ ಇದೆ. ಯಾರು ಈ ರೀತಿ ಜಾಹೀರಾತುಗಳಿಗಾಗಿ ಪತ್ರಿಕೆಗಳನ್ನು ಉಪಯೋಗ ಮಾಡುತ್ತಾ ಇದ್ದಾರೆ ಅಂತಹ ಪತ್ರಿಕೆಗಳಿಗೆ ಕೊಡದ ಹಾಗೆ ಜಾಗ್ರತೆ ವಹಿಸಬೇಕು ಎಂದು ಇದೆ. ಮಫ್ಯೂಸಲ್ ಏರಿಯಾನಲ್ಲಿ ಸಣ್ಣ ಸಣ್ಣ ಒಳ್ಳೆಯ ಪತ್ರಿಕೆಗಳಿಗೆ ಜಾಹೀರಾತು ಮುಖಾಂತರ ಪ್ರೋತ್ಸಾಹ ಕೊಡುತ್ತಾ ಇದ್ದೇವೆ ಈಗ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ಇದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಳೆದ ವರ್ಷ ಬೆಂಗಳೂರಿನಲ್ಲಿ ಪ್ರಕಟಣೆಯಾಗುವ ಸಣ್ಣ ಪತ್ರಿಕೆಗಳಿಗೆ ಅಂದರೆ ದಿನ ಪತ್ರಿಕೆಗಳಿಗೆ, ವಾರ ಪತ್ರಿಕೆಗಳಿಗೆ ಎಷ್ಟು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದೀರಿ, ಎಷ್ಟು ಹಣದ್ದು ಕೊಟ್ಟಿದ್ದೀರಿ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಸಣ್ಣ ಪತ್ರಿಕೆಗಳಿಗೆ ಅವುಗಳ ಇಂಪಾರ್ಟೆನ್ಸ್ ನೋಡಿಕೊಂಡು ಕೊಡುತ್ತಾ ಇದ್ದೇವೆ. ಅದಕ್ಕೆ ಸಂಬಂಧಪಟ್ಟ ಮಾಹಿತಿ ಈಗ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಸಯನಕ್‌ರವರು ಮಾತನಾಡುತ್ತಾ ಮರಾಠಿ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾ ಇಲ್ಲ ಎಂದು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ನಿಮಗೆ ಮಾಹಿತಿ ಕೊಡಲಿಕ್ಕೆ ಸಾಧ್ಯ ಆಗದೇ ಹೋದರೆ ನಾಳೆ ಅಥವಾ ನಾಡಿದ್ದು ಕೊಡಿ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸಯನಕ್‌ರವರು ಮರಾಠಿ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾ ಇಲ್ಲ ಎಂದು ಹೇಳಿದ್ದಾರೆ ಇದು ಸರಿಯಲ್ಲ. ಏಕೆಂದರೆ, ಕೆಲವೊಂದು ಮರಾಠಿ ಪತ್ರಿಕೆಗಳಿಗೆ ಪ್ರೋತ್ಸಾಹವನ್ನು ಕೊಟ್ಟಿದ್ದೇವೆ.

SRI B. B. SAYANAK.—Marati Paper "Tarun Bharat" has got the highest circulation in Belgaum. Is the Government giving advertisements to this paper ?

SRI B. SUBBAYYA SHETTY.—Recently, we have released to "Tarun Bharat" also. We are also giving advertisements to two other Marati Papers. So, the allegation of the Hon'ble member may not be correct.

ಕೆಲವು ಜನ ಮಾನ್ಯ ಸದಸ್ಯರು ಸಿನಿಮಾಗಳ ಬಗ್ಗೆ ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರಜಾಮತ, ಸುಧಾ, ಜನಪ್ರಗತಿ ಜ್ವಾಲಾಮುಖಿ ಇಂತಹ ದಿನ ಪತ್ರಿಕೆಗಳಿಗೆ, ವಾರಪತ್ರಿಕೆಗಳಿಗೆ. ಸಣ್ಣಪತ್ರಿಕೆಗಳಿಗೆ ಎಷ್ಟು ಕೊಟ್ಟಿದ್ದೀರಿ ಎನ್ನುವುದನ್ನು ಹೇಳಬೇಕು. ಇವತ್ತು ಹೇಳುವುದಕ್ಕೆ ಆಗದೇ ಹೋದರೆ ನಾಳೆ ಕೊಡಿ.

ಶ್ರೀ ಎಚ್. ಡಿ. ದೇವೇಗೌಡ.—ಒಂದು ಪ್ರಮುಖ್ಯವಾದ ವಿಷಯವೆಂದರೆ, ಸರ್ಕ್ಯುಲೇಶನ್ ಆಧಾರದ ಮೇಲೆ ಅಡ್ವರ್‌ಟೈಸ್‌ಮೆಂಟ್ ಕೊಡತಕ್ಕಂಥಾದ್ದು ಸರ್ಕಾರದ ಧೋರಣೆಯಾಗಿದ್ದರೆ, ಯಾವಯಾವ ಪತ್ರಿಕೆಗಳು ಎಷ್ಟೆಷ್ಟು ಸರ್ಕ್ಯುಲೇಷನ್ ಇವೆ, ತಾವು ಎಷ್ಟೆಷ್ಟು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದೀರಿ—ಎನ್ನುವುದನ್ನು ದಯಮಾಡಿ ತಿಳಿಸಬೇಕು. ತಾವು ಬರುವುದಕ್ಕೆ ಪೂರ್ವದಲ್ಲಿ ಹಿಂದೆ ಇದ್ದ ಸಚಿವರು ಶ್ರೀ ಗುಂಡೂರಾಯರ ಕಾಲದಲ್ಲಿ ಯಾವ ಯಾವ ಪತ್ರಿಕೆಗೆ ಎಷ್ಟೆಷ್ಟು ಕೊಟ್ಟಿದ್ದಾರೆ ಸಣ್ಣ ಪತ್ರಿಕೆಗಳಿಗೆ ಎಷ್ಟು ಕೊಟ್ಟಿದ್ದಾರೆ, ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದಹಾಗೆ

ಪ್ರಜಾಮತ, ಜ್ವಾಲಾಮುಖಿ ಸುಧಾ, ವಿಶಾಲ ಕರ್ನಾಟಕ, ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಪತ್ರಿಕೆಗಳಿಗೆ ಎಷ್ಟು ಕೊಟ್ಟಿದ್ದೀರಿ ? ಈ ಇನ್‌ಫರ್ಮೇಷನನ್ನು ಮಾನ್ಯ ಮಂತ್ರಿಗಳು ನಾಳೆ ಅಥವಾ ನಾಡಿದ್ದು ಕೊಟ್ಟರೆ ಸಾಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—1976-77ರಲ್ಲಿ ಬೆಂಗಳೂರಿನ ವಿಶಾಲ ಕರ್ನಾಟಕಕ್ಕೆ 70,615-00, ಅದೇ ರೀತಿ ಬೆಂಗಳೂರಿನ ಸಂಯುಕ್ತ ಕರ್ನಾಟಕಕ್ಕೆ 79,179-00, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕಕ್ಕೆ 43,526-00, ಹುಬ್ಬಳ್ಳಿಯ ವಿಶಾಲ ಕರ್ನಾಟಕಕ್ಕೆ 51,509-00 ರೂಪಾಯಿಗಳ ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದೆ. ಇಷ್ಟು ನನಗೆ ಸಿಕ್ಕಿರುವ ಮಾಹಿತಿಯನ್ನು ಹೇಳಿದ್ದೇನೆ.

ಶ್ರೀ ಕೆ. ಪ್ರಭಾಕರ ರೆಡ್ಡಿ.—ಶ್ರೀ ಸಂಜಯಗಾಂಧಿಯವರು ಬೆಂಗಳೂರಿಗೆ ಬಂದಾಗ ಎಷ್ಟೆಷ್ಟು ಜಾಹೀರಾತು ಕೊಟ್ಟಿದ್ದೀರಿ ?

ಶ್ರೀ ಕೋಣಂದೂರು ಲಿಂಗಪ್ಪ.—ಉಳಿದ ಪತ್ರಿಕೆಗಳಿಗೆ ಮಾಹಿತಿಯನ್ನು ನಾಳೆ ಅಥವಾ ನಾಡಿದ್ದು ಕೊಡಿ.

ಶ್ರೀ ಸುಬ್ಬಯ್ಯಶೆಟ್ಟಿ.—ಎಷ್ಟು ಸಾಧ್ಯವೋ ಅಷ್ಟು ಕೊಡುತ್ತೇನೆ.

SRI B. B. SAYANAK.—It was stated that the Government is giving advertisments to Tarun Bharat also. May I know the exact date from which advertisements are given to this Paper ?

SRI B. SUBBAYYA SHETTY.—The exact date is not available with me now. But we have released the advertisments, last month.

About films, hon. member Sri Sheernali Chandrashekar suggested that while giving subsidy the quality of the film should be looked into. It is extremely difficult to find out the quality of the film for subsidy purposes. Certain people see whether the story is good, whether the photography is good, whether the direction is good or whether the acting is good. Different people like different things.

Since the film industry in Karnataka is still in an infant stage, we thought that it should be given a sort of good encouragement, and because of the encouragement the industry has picked up. We do not encourage merely films of regional languages like Kannada, Tulu, Tamil, etc., but also other languages, for instance Hindi. We are encouraging films of any language produced in Karnataka,

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದಿಗೆ ನಮ್ಮ ರಾಜ್ಯದಲ್ಲಿ ಎನ್‌ಕರೇಜ್‌ಮೆಂಟ್ ಇಲ್ಲವೇ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ನಮ್ಮ ರಾಜ್ಯದಲ್ಲಿ ಕೂಡ ಹಿಂದಿಗೆ ಎನ್‌ಕರೇಜ್‌ಮೆಂಟ್ ಕೊಡತಕ್ಕಂಥಾದ್ದು ಇದೆ ಎಂದು ಹೇಳುತ್ತಾ ಇದ್ದೇನೆ. ನಮ್ಮ ರಾಜ್ಯದಲ್ಲಿ ಬೇರೆ ಭಾಷೆಗಳ ಫಿಲಂ ತಯಾರು ಮಾಡಿದರೆ ಅರ್ಥವನ್ನು ನಾವು ನೋಡುತ್ತಾ ಇದ್ದೇವೆ.

SRI B. B SAYANAK.—Since most of the student world attend shows between 10-30 A.M. and 3-00 P.M., why not the 10-30 shows be stopped ?

SRI B. SUBBAYYA SHETTY.—I cannot answer this question because I am not the concerned Minister on the subject.

Questions regarding the Act, reduction of the rates in the film theatres and the suspension of the entertainment tax, I may not be able to answer those questions. Anyway I will pass on those questions to the concerned Minister for needful action. ಮತ್ತೆ ಡಾಕ್ಯುಮೆಂಟರಿ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಅವರಲ್ಲಿ ಅನೇಕರು ಎಕ್ಸ್‌ಪ್ರೆಸ್ ಮಾಡಿದ ಹಾಗೆ ಹೆಚ್ಚಿನ ಡಾಕ್ಯುಮೆಂಟರಿಗಳಲ್ಲಿ ಕೆಲವು ಸಂಸ್ಕೃತಿಯ ಬಗ್ಗೆ, ಇನ್ನು ಕೆಲವು ಬೋಧಪ್ರಿಯ ವಾದ್ದು ಮತ್ತೆ ಕೆಲವು ಲ್ಯಾಂಡ್ ರಿಫಾರ್ಮ್ಸ್ ವಿಷಯ-ಇಂತಹ ಕಾರ್ಯಕ್ರಮಗಳ ಬಗ್ಗೆ ಡಾಕ್ಯುಮೆಂಟರಿಗಳು ಅಗತ್ಯವಾಗಿದೆ ಎಂದು ನಮಗೆ ಮನಗಂಡಿದೆ. ಹಣದ ಅಭಾವದಿಂದ ಅದನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ನ್ಯೂಸ್‌ರೀಲ್ಸ್ ಬಗ್ಗೆ ಹೇಳುವುದಾದರೆ ಅದರಲ್ಲಿ ಡಬ್ಬಲ್ ಫಂಕ್ಷನ್ಸ್ ಇಲ್ಲ. ನನಗೆ ತಿಳಿದು ಬಂದಿರುವ ಹಾಗೆ ನಾಲ್ಕು ನ್ಯೂಸ್‌ರೀಲ್ಸ್ ಫಿಲಂಸ್ ಡಿವಿಜನ್ ಅವರದನ್ನು ಕೇಂದ್ರ ಸರ್ಕಾರದವರು ಮೆಚ್ಚಿ ಅದನ್ನು ಆಲ್ ಇಂಡಿಯಾದಲ್ಲಿ ಪ್ರದರ್ಶನ ಮಾಡಲು ಸಹಾಯ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಆದ್ದರಿಂದ ಅವು ಅಂತಹ ಒಳ್ಳೆಯ ಮಟ್ಟದ ನ್ಯೂಸ್ ರೀಲ್‌ಗಳು.

ಮತ್ತೆ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ಬಗ್ಗೆ ಮಾನ್ಯ ಶ್ರೀ ದೇವೇಗೌಡರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ, ಅದಕ್ಕೆ ನಾನು ಕೆಲವು ಆಶ್ವಾಸನೆಗಳನ್ನು ಇಲ್ಲಿ ಕೊಡುತ್ತೇನೆ. ಅವರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಮಾಡಬೇಕೆಂಬ ಬಗ್ಗೆ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಈಗಾಗಲೇ ಒಂದು ತೀರ್ಮಾನ ಕೈಗೊಂಡಿದೆ. ಅಲ್ಲಿ ಆ ತೀರ್ಮಾನವನ್ನು ಕೈಗೊಂಡಿದ್ದಾಕ್ಷಣಕ್ಕೆ ಅವರು ಮ್ಯಾನೇಜಿಂಗ್ ಡೈರೆಕ್ಟರ್ ಆಗುತ್ತಾರೆಂದು ಅಲ್ಲ. ನಂತರ ಅದನ್ನು ಅವರು ಆ ಬೋರ್ಡಿನ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇಡಬೇಕು. ಸರ್ಕಾರ ಅದನ್ನು ಒಪ್ಪಿಕೊಳ್ಳಬೇಕು, ಕಂಪನಿ ಲಾ ಪ್ರಕಾರ ಬೇರೆ ಒಪ್ಪಿಕೊಳ್ಳಬೇಕು. ಅಲ್ಲದೆ ಈ ಸಭೆಯಲ್ಲಿ ನಾನು ಮೊದಲೇ ತಿಳಿಸಿದಹಾಗೆ ಇನ್ನೊಂದು ತೀರ್ಮಾನವನ್ನು ಅವರ ರೆಮ್ಯೂನರೇಷನ್ ಬಗ್ಗೆ ತೆಗೆದುಕೊಂಡಿತ್ತು. ಆ ತೀರ್ಮಾನವನ್ನು ಸರ್ಕಾರದ ನೋಟಿಫಿಕೇಷನ್ ಇಲ್ಲದೆಯೇ ತೆಗೆದುಕೊಂಡಿತ್ತು. ಆ ತೀರ್ಮಾನ ಈಗ ಸರಿಯಿಲ್ಲವೆಂದು ತಿಳಿದು ಬಂದಿದ್ದರಿಂದ ಸರಿಪಡಿಸುತ್ತೇನೆಂದು ತಿಳಿಸಿದ್ದೇನೆ. ಅದೇ ರೀತಿಯಲ್ಲಿ ಮುಂದಿನ ಬೋರ್ಡ್ ಮೀಟಿಂಗ್‌ನಲ್ಲಿ ಅದೇ ತೀರ್ಮಾನವನ್ನು ಪುನಃ ಚರ್ಚೆಗೆ ತೆಗೆದುಕೊಂಡು ಗೌರ್ನಮೆಂಟ್ ನೋಟಿಫಿಕೇಷನ್ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನವನ್ನು ಕೈಗೊಂಡಿದ್ದಾರೆ. ಅದೇ ಪ್ರಕಾರ ನಡೆಯಿತು. ಮೊದಲಿನ ತೀರ್ಮಾನ ಅವರಿಗೆ 2500 ರೂಪಾಯಿಗಳು ರೆಮ್ಯೂನರೇಷನ್ ಇರಬೇಕೆಂಬುದು. ಕೆಲವು ಪೇಮೆಂಟ್‌ಗಳ ಬಗ್ಗೆ ತೀರ್ಮಾನವನ್ನು ಬೋರ್ಡಿಗೆ ಬಿಟ್ಟಿದ್ದಾರೆ. ನಂತರ ಅದನ್ನು ಸರ್ಕಾರಕ್ಕೆ ಒಪ್ಪಿಸಿದೆ. ಈಗ ಅದನ್ನು ಜನರಲ್ ಬಾಡಿ ಮೀಟಿಂಗ್‌ನಲ್ಲಿ ಹಾಕಬೇಕಾಗಿದೆ. ಹಾಗೂ ಕಂಪನಿ ಲಾ ಒಪೀನಿಯನ್ನಿಗೆ ಕಳುಹಿಸಬೇಕಾಗಿದೆ. ಮ್ಯಾನೇಜಿಂಗ್ ಡೈರೆಕ್ಟರ್ ಅವರ ಹೆಸರನ್ನು ಯಾವ ರೀತಿ ಹೇಗೆ ಉಪಯೋಗಿಸಿದ್ದಾರೆಂಬುದನ್ನು ಈಗ ಪತ್ತೆಹಚ್ಚಿದ್ದಾರೆ. ನಾವು ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಎಂಬುದಾಗಿ ಡಿಸಿಗ್ನೇಷನ್ ಇರಬೇಕೆಂದು ತೀರ್ಮಾನ ಮಾಡಿದ್ದು. ಹೊಸದಾಗಿ ಅದನ್ನು ಈಗ ಉಪಯೋಗಿಸುತ್ತಿದ್ದೇವೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೋ ಅದನ್ನು ಈಗ ಕೈಬಿಟ್ಟಿದ್ದೇವೆ.

SRI H. D. DEVE GOWDA.—The Managing Director has written letters to the banks which reads thus; "That as per the Board decision I am the Managing Director. I would like to inform you that the Board of Directors have resolved in their meeting held on 9-4-1977, Kemparaj Urs, Director, the Committee of Management of KFIDC appointed as Managing Director from 1-1-1977. Hence further all the cheques will be issued under the signature as Managing Director and the same may be accepted and honoured.

Sd/-
Administrative Officer"

SRI B. SUBBIAH SHETTY.—The first part of the letter is a statement of fact. The Board had taken decision that he would be appointed as the Managing Director. Regarding payment of his salary, that was modified as per the assurance given to this Honourable House.

SRI H. D. DEVE GOWDA.—What are the modifications that have been effected ?

SRI B. SUBBIAH SHETTY.—As per the Government notification, ಅವರಿಗೆ ಎಷ್ಟು ಪೇ ಕೊಡಬೇಕೆಂದು ಇದೆಯೋ ಅದೇ ಪೇಗೆ ಅವರು ಅರ್ಹರು ಎಂಬುದಾಗಿ ನಾವು ತೀರ್ಮಾನ ಮಾಡಿದ್ದೇವೆ.

SRI H. D. DEVE GOWDA.—We have not gone into the notification. Please enlighten the House according to the notification what his salary is and other emoluments like car allowance and how much he has drawn from 1-1-1977.

SRI B. SUBBIAH SHETTY.—According to the Government Notification, the remuneration is Rs. 1,000 p.m; HRA 500 P.M. and C.A. 500 P.M. and the total is 2,000 p.m. Now that he has not been finally made the Managing Director as per the rules now stand because it has to be ratified by the Government and the Company Law Board and by the General Body.

SRI H. D. DEVE GOWDA.—But he is drwing that amount......

SRI B. SUBBIAH SHETTY.—I have made an investigation into the matter and I am telling you. As soon as the first Board meeting was convened and when remuneration was fixed at Rs. 2500, I learn that immediately he drew the amount. As soon as he came to know about that, I directed the staff to pay the amount immediately to the Board. I learn he has done it. He has paid back the excess amount which he had drawn. He is continuing in the former post and he is drawing whatever is sanctioned by the Company Law Board and nothing more than that. I have verified this.

ಇನ್ನು ಮಿನಿ ಥಿಯೇಟರ್ಸ್‌ಗಳ ಬಗ್ಗೆ ಕೆಲವು ಸದಸ್ಯರು ಸಾಕಷ್ಟು ಮಾತನಾಡಿದ್ದಾರೆ. ಸಾಧಾರಣವಾಗಿ 16 ಮಿನಿ ಥಿಯೇಟರ್ಸ್‌ಗಳಿಗೆ ಈಗಾಗಲೇ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅವರು ಸಾಲವನ್ನು ಕೊಟ್ಟಿದ್ದಾರೆ. ಆ ಥಿಯೇಟರ್ಸ್ ಇತ್ತೀಚೆಗೆ ಮೇಲೆ ಬರುತ್ತಿವೆ. ಒಂದೆರಡು ಥಿಯೇಟರ್ಸ್ ಈಗಾಗಲೇ ಸಿನಿಮಾನವನ್ನು ತೋರಿಸುತ್ತಿವೆ. ಈಗಲಾದರೂ ಕರ್ನಾಟಕದಲ್ಲಿ ಫಿಲಂ ಇಂಡಸ್ಟ್ರಿ ಬಗ್ಗೆ ಒಂದು ಸ್ವಾಯತ್ತತೆಯನ್ನು ಪಡೆಯಬೇಕೆಂಬ ಉದ್ದೇಶದಿಂದ ಇಲ್ಲಿ ಕಲರ್ ಲ್ಯಾಬ್ ಬರುವ ಹಾಗೆ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಪ್ರಯತ್ನ ಮಾಡಿದರೆ ಆಗ ಅದು ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಕರ್ನಾಟಕದಲ್ಲಿ ಯಾವ ಯಾವ ಚಿತ್ರಗಳು ತಯಾರಾಗುತ್ತವೆಯೋ ಅವನ್ನು ಕಲರ್ ಲ್ಯಾಬ್‌ನಲ್ಲಿ ಪ್ರೊಸೆಸ್ ಮಾಡುವುದಕ್ಕೆ ಅವರು ಮುಂದೆ ಬರುತ್ತಾ ಇದ್ದಾರೆ ಆದ್ದರಿಂದ ಫಿಲಂ ಸ್ಕ್ರ್ಯಾಬ್ ಏನಿದೆಯೋ ಅದನ್ನು ಮಂಜೂರು ಮಾಡುವುದಕ್ಕೆ ಬದಲು ಅದಕ್ಕೆ ಒಂದು ಕಮಿಟಿಯನ್ನು ರಚನೆ ಮಾಡಿದ್ದಾರೆ. ಆ ಕಮಿಟಿಯವರು ಅದನ್ನು ಸ್ಕ್ರೂಟಿನಿ ಮಾಡಿ ಒಳ್ಳೆಯ ಫಿಲಂ ತಯಾರು ಮಾಡಲು ಅವಕಾಶ ಕೊಟ್ಟಿದೆ. ಮುಂದೆ ಹೆಚ್ಚಿಗೆ ಒಳ್ಳೆಯ ಚಿತ್ರಗಳಿಗೆ ಅವಕಾಶ ಕೊಡಲು ನಾವು ಪ್ರಯತ್ನ ಮಾಡುತ್ತೇವೆ.

ಕೊನೆಯದಾಗಿ ಇಷ್ಟು ಮಾತುಗಳನ್ನು ಹೇಳಿ, ಈ ಡಿಮ್ಯಾಂಡಿಗೆ ಸದಸ್ಯರೆಲ್ಲರೂ ಪೂರ್ಣ ಸಮ್ಮತಿ ಕೊಡಲು ನಾನು ತಮ್ಮ ಮೂಲಕ ಈ ಮಾನ್ಯ ಸದಸ್ಯರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ ರೆಡ್ಡಿ.—ಕರ್ನಾಟಕದಲ್ಲಿ ಕನ್ನಡ ಚಲನಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸುವ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎನ್. ಪಾಟೀಲ್ (ಕಾರ್ಮಿಕ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷಿಣಿಯವರೇ ಕಾರ್ಮಿಕ ಬಾಬುಗಳ ಚರ್ಚೆಯಲ್ಲಿ ಭಾಗವಹಿಸುತ್ತಾ ಈ ಸದನದ ಸದಸ್ಯರು ಕೆಲವಾರು ಯೋಗ್ಯ ಸಲಹೆಗಳನ್ನು ಮಾಡಿದ್ದಕ್ಕೆ ಹಾಗೂ ಆ ಚರ್ಚೆಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತಾ ಅವರು ಕೇಳಿದ ಕೆಲವೊಂದು ಅಂಶಗಳಿಗೆ ಉತ್ತರವನ್ನು ಕೊಡುವಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಇದುವರೆಗೂ ಮಾತನಾಡಿ ಎಲ್ಲ ಕಡೆ ಮುಷ್ಕರಗಳು, ಲಾಕ್‌ಔಟ್‌ಗಳು ನಡೆಯುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಯೋಗ್ಯವಾಗಿ ಕಾರ್ಯನಿರ್ವಹಿಸಬೇಕು ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆ ಅಭಿಪ್ರಾಯ ಸಾಧುವಾದುದು ಎಂದು ಹೇಳಬಯಸುತ್ತೇನೆ. ಕೆಲವು ಸದಸ್ಯರು ತುರ್ತುಪರಿಸ್ಥಿತಿಯಲ್ಲಿ ಮತ್ತು ತುರ್ತುಪರಿಸ್ಥಿತಿ ನಂತರ ನಡೆದ ಮುಷ್ಕರಗಳು ಮತ್ತು ಲಾಕ್‌ಔಟ್‌ಗಳ ಹೋಲಿಕೆಯನ್ನು ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ಅಂಕಿ ಸಂಖ್ಯೆಗಳಲ್ಲಿ ಹೇಳಬೇಕಾದರೆ ಎಮರ್ಜನ್ಸಿ ಇದ್ದಾಗ 1976ರಲ್ಲಿ Number of strikes 40 ಆಗಿದ್ದರೆ 77ರಲ್ಲಿ ಅಂದರೆ ಈ 6 ತಿಂಗಳುಗಳಲ್ಲಿ ಸುಮಾರು 12 ಆಗಿದೆ. Number of workers involved 76ರಲ್ಲಿ ಅಂದರೆ ಎಮರ್ಜನ್ಸಿ ಇದ್ದಾಗ 23,358 ಇದ್ದರೆ ಈಗ ಎಮರ್ಜನ್ಸಿ ತೆಗೆದನಂತರ 2,457 ಆಗಿದೆ. 1976ರಲ್ಲಿ Man days loss-56,112 ಇದ್ದರೆ ಈಗ 5,000. ಲಾಕೌಟ್‌ಗಳು 1976ರಲ್ಲಿ—2 ಆಗಿದೆ, 77ರಲ್ಲಿ ಎಮರ್ಜನ್ಸಿ ತೆಗೆದನಂತರ 6 ಆಗಿದೆ. Number of workers involved 76ರಲ್ಲಿ 14,870, Man days lost-73,?60. 77ರ ಅಂಕಿಅಂಶ ಸಿಕ್ಕಿಲ್ಲ. ಈ ಅಂಕಿಅಂಶಗಳ ಕಡೆಗೆ ಮಾನ್ಯ ಸದಸ್ಯರ ಗಮನವನ್ನು ಸೆಳೆಯುತ್ತಾ ಇನ್ನೊಂದು ವಿಷಯವನ್ನು ತಮಗೆ ತಿಳಿಸಬಯಸುತ್ತಿದ್ದೇನೆ. ಇವತ್ತು ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಮುಷ್ಕರಗಳು, ಉಪವಾಸ ಸತ್ಯಾಗ್ರಹ, ಇನ್ನಿತರ ಜನತಂತ್ರದಲ್ಲಿ ಸಾಧುವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ವಿಧಾನಸೌಧದ ಸುತ್ತಮುತ್ತ ಹಲವಾರು ಟೆಂಟುಗಳನ್ನು ಹಾಕಿಕೊಂಡು ಇಲಾಖೆಯ ನೌಕರರು ಅನುಸರಿಸುತ್ತಿರುವ ಮಾರ್ಗವನ್ನು ನೋಡಿದಾಗ ಈ ಇಲಾಖೆ ಪ್ರಜಾಪ್ರಭುತ್ವದ ಮಾರ್ಗವನ್ನು ಅನುಸರಿಸುತ್ತಿದೆ ಎಂದು ನನ್ನ ನಂಬಿಕೆಯಾಗಿದೆ. ವಿಧಾನಸೌಧದ ಸುತ್ತಮುತ್ತಲೂ ಇದನ್ನೆಲ್ಲಾ ನೋಡಿದಾಗ ಅದೊಂದು ತರಹ ಹೈಡ್ ಪಾರ್ಕ್ ತರಹ ಕಾಣುತ್ತಿದೆ. ನಮ್ಮ ದೇಶ ದೊಡ್ಡ ದೇಶ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಎಷ್ಟು ಟೆಂಟುಗಳ ಹತ್ತಿರ ಹೋಗಿದ್ದೀರಿ ?

ಶ್ರೀ ಸಿ. ಎನ್. ಪಾಟೀಲ್.—ಟೆಂಟ್‌ಗಳ ಹತ್ತಿರ ಹೋಗಿದ್ದೇನೆ. ನೀವು ನೋಡಿಲ್ಲದಿರಬಹುದು.

ಶ್ರೀ ಬಿ. ವಿ. ಕಕ್ಕಿಲಾಯ.—ಹೌದು ತಾವು ಹೋಗಿದ್ದೀರಿ. ಆದಕ್ಕಾಗಿ ತಮ್ಮನ್ನು ಅಭಿನಂದಿಸಬೇಕಾಗಿದೆ.

ಶ್ರೀ ಸಿ. ಎನ್. ಪಾಟೀಲ್.—ನೋಡಿ. ಮಾನ್ಯ ಸದಸ್ಯರಿಂದ ಅಭಿನಂದನೆಗಳು ಬಂದ ಮೇಲಾದರೂ ನಾವು ಹೋಗಿರುವುದು ಖಚಿತವಾಯಿತಲ್ಲವೆ ? ನಾನು ಕಾರ್ಮಿಕ ಮಂತ್ರಿಯಾಗಿ ಕಾರ್ಮಿಕರ ತೊಂದರೆಗಳನ್ನು ಅರಿತಿದ್ದೇನೆ ಮತ್ತು ಅವರ ಬಗ್ಗೆ ಅನುಕಂಪವನ್ನು ಹೊಂದಿದ್ದೇನೆ ಎಂಬ ಮಾತನ್ನು ಮಾನ್ಯ ಕೋಣಂದೂರು ಲಿಂಗಪ್ಪನವರಿಗೆ ತಿಳಿಸಬಯಸುತ್ತೇನೆ ಮತ್ತು ಕಕ್ಕಿಲಾಯ ಅವರು ನನ್ನ ಗಮನ ಸೆಳೆಯುತ್ತಾ 11ನೇ ತಾರೀಖು ಇಡೀ ದೇಶದಲ್ಲಿ ವರ್ಕಿಂಗ್ ಜರ್ನಲಿಸ್ಟ್‌ಗಳ ಮಿಂಚಿನ ಮುಷ್ಕರ ಹೂಡಿದಾಗ ನಮ್ಮ ಸರ್ಕಾರ ಏನೂ ಮಾಡಲಿಲ್ಲ ಎಂಬ ಒಂದು ಭಾವನೆಯನ್ನು ವ್ಯಕ್ತಪಡಿಸಿದರು. ಸರ್ಕಾರ ಏನೇನು ಮಾಡಬೇಕೋ ಅದನ್ನೆಲ್ಲಾ ಕಾರ್ಯಕ್ರಮ ಹಾಕಿಕೊಂಡು ...ರುವ ಮಾಡುತ್ತಿದ್ದೇವೆ. ಒಂದು ವಿಷಯ ಏನೆಂದರೆ ನಾವು ಪ್ರಚಾರಪ್ರಿಯರಲ್ಲ, ಕಾರ್ಯಪ್ರಿಯರು

ಎಂಬ ಮಾತನ್ನು ಕವಿ ಕೋಣಂದೂರು ಲಿಂಗಪ್ಪನವರಿಗೆ ಹೇಳಬಯಸುತ್ತೇನೆ. ಮಿನಿಮಂ ವೇಜಸ್ ಆಕ್ಟ್ ಇಂಪ್ಲಿಮೆಂಟೇಷನ್ ಈಗಾಲೇ ಮಾಡಲಾಗಿದೆ. ನಮ್ಮ ಕಾರ್ಯದರ್ಶಿಯವರು ರಾಜಧಾನಿಯಲ್ಲಿರುವ ಎಲ್ಲ ಪತ್ರಿಕಾ ಮಾಲೀಕರ ಒಂದು ಸಭೆ ಕರೆದು ಸರ್ಕಾರದ ವತಿಯಿಂದ ಅವರನ್ನು ಕೇಳಿಕೊಂಡಾಗಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಉದಯವಾಣಿ ಈ ಎರಡು ಪತ್ರಿಕೆಯವರು ಬಿಟ್ಟರೆ ಮಿಕ್ಕ ಪತ್ರಿಕೆಯವರು ಇಂಟೀರಿಯಂ ರಿಲೀಫ್ ಕೊಡುವುದಕ್ಕೆ ಮುಂದೆ ಬಂದಿದ್ದಾರೆ ಎಂದು ಸಂತೋಷದಿಂದ ಈ ಸಭೆಗೆ ಹೇಳಬಯಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ವಿಶಾಲ ಕರ್ನಾಟಕ ?

ಶ್ರೀ ಸಿ. ಎನ್. ಪಾಟೀಲ್.—ವಿಶಾಲ ಕರ್ನಾಟಕ ಪತ್ರಿಕಾಲಯ ಬೀಗ ಹಾಕಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿಶಾಲ ಕರ್ನಾಟಕ ವಿಷಾದ ಕರ್ನಾಟಕ ಆಗಿದೆ.

ಶ್ರೀ ಸಿ. ಎನ್. ಪಾಟೀಲ್.—ಕವಿ ಏನೇನೋ ಕಾಣುತ್ತಿರುತ್ತಾನೆ. ಕವಿ ಕಲ್ಪನೆಗೆ ಉತ್ತರ ಕೊಡುವ ಚೈತನ್ಯ ಮಂತ್ರಿಗೆ ಇರುವುದಿಲ್ಲ. ಲೇಬರ್ ಕೋರ್ಟುಗಳ ಬಗ್ಗೆ ಗಮನ ಸೆಳೆಯುತ್ತಾ ಹಿರಿಯ ಸದಸ್ಯರಾದ ಕಕ್ಕಿಲಾಯ ಅವರು ಲೇಬರ್ ಕೋರ್ಟುಗಳಲ್ಲಿ ಕಾರ್ಮಿಕರ ಕೇಸುಗಳನ್ನು ಡಿಸ್‌ಪೋಸ್ ಮಾಡುವುದಕ್ಕೆ ಕೆಲವೊಂದು ಕೋರ್ಟಿನಲ್ಲಿ ನ್ಯಾಯಾಧೀಶರುಗಳಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅದು ನಿಜ. ಎಲ್ಲೆಲ್ಲಿ ಜಡ್ಜ್‌ಗಳಿರಲಿಲ್ಲ ಅಲ್ಲಲ್ಲಿ ಹೈಕೋರ್ಟಿನಿಂದ ಜಡ್ಜ್‌ಗಳನ್ನು ಎರವಲು ಪಡೆದುಕೊಂಡು ಪೋಸ್ಟ್ ಮಾಡಿದೆ. ಪೆಂಡಿಗ್ ಇರುವ ಕೇಸುಗಳನ್ನು ಡಿಸ್‌ಪೋಸ್ ಮಾಡಲಾಗುತ್ತಿದೆ. ಈಗ 76ನೇ ಇಸವಿಗಿಂತ ತ್ವರಿತಗತಿಯಿಂದ ಕೆಲಸ ನಡೆಯುತ್ತಿದೆ ಎಂಬ ವಿಷಯ ತಮ್ಮ ಗಮನಕ್ಕೂ ಬಂದಿರಬಹುದೆಂದು ತಿಳಿಯಬಯಸುತ್ತೇನೆ. 31-3-1976 ರಲ್ಲಿ 1,787 ಕೇಸ್‌ಗಳು ಪೆಂಡಿಂಗ್ ಇತ್ತು. 31-3-1977ರಲ್ಲಿ 1082 ಕೇಸ್‌ಗಳು ಮಾತ್ರ ಪೆಂಡಿಂಗ್ ಇದ್ದು ಡಿಸ್‌ಪೋಸ್‌ನಲ್ಲಿ ಒಳ್ಳೆಯ ಲಕ್ಷಣ ಕಂಡುಬರುತ್ತಿದೆ. ಹೊಸದಾಗಿ 500 ಕೇಸ್‌ಗಳು ಫೈಲ್ ಆಗಿದ್ದರೂ ಈ ರೀತಿ ತ್ವರಿತಗತಿಯಿಂದ ಕೋರ್ಟಿನಿಂದ ನಿರ್ಣಯ ಸಿಕ್ಕಿದರೆ ಕಾರ್ಮಿಕಬಂಧುಗಳಿಗೆ ಅನುಕೂಲವಾಗುತ್ತದೆ ಎಂಬ ಅನುಕಂಪವನ್ನು ನಾನು ಹೊಂದಿದ್ದೇನೆಂಬ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ದುರುದ್ದೇಶದಿಂದ ಕೆಲವು ಕೇಸುಗಳನ್ನು ಇತ್ಯರ್ಥ ಮಾಡದೇ ಹಾಗೆ ಇಟ್ಟಿದ್ದಾರೆ. 14-9-1972 ರಿಂದ ಟಿ. ಎಲ್. ಆನಂದಕುಮಾರ್ ಎಂಬ ಎಚ್. ಎಂ. ಟಿ. ಕಾರ್ಮಿಕರೊಬ್ಬರ ಕೇಸನ್ನು ಇತ್ಯರ್ಥ ಮಾಡದೇ ಮುಂದುವರೆಸುತ್ತಿದ್ದಾರೆ.

ಶ್ರೀ ಸಿ. ಎನ್. ಪಾಟೀಲ್.—ಮಾನ್ಯ ಸದಸ್ಯರಿಗೆ 1972 ರಿಂದೀಚೆಗೆ ಇರುವ ಕೇಸಿನ ಬಗ್ಗೆ ಮಾತ್ರ ಗೊತ್ತಾಗಿದೆ. 9 ವರ್ಷದಿಂದ ಪೆಂಡಿಂಗ್ ಇರುವ ಕೇಸ್‌ಗಳೂ ಇವೆ. 9 ವರ್ಷಗಳವರೆಗೂ ಕೆಲವು ಕೇಸ್‌ಗಳ ಪೆಂಡಿಂಗ್ ಇರುವ ಸಂದರ್ಭಗಳಿವೆ. ಮ್ಯಾನೇಜ್‌ಮೆಂಟ್ ಮತ್ತು ಟ್ರೇಡ್ ಯೂನಿಯನ್ ಇಬ್ಬರೂ ಲಿಟಿಗೆಂಟಾದರೆ ಲೇಬರ್ ಮಿನಿಸ್ಟರ್ ಅವರು ಏನೂ ಮಾಡುವುದಕ್ಕಾಗುವುದಿಲ್ಲ. ಜಡ್ಜ್‌ಸ್ ಹತ್ತಿರ ಮಾತನಾಡುವುದಕ್ಕೆ ಹೋದರೆ ಮಂತ್ರಿಗಳು ಜಡ್ ಹತ್ತಿರ ಮಾತನಾಡುವುದಕ್ಕೆ ಹೋಗಿದ್ದರು ಎಂಬ ಅಪಾದನೆಗೆ ಗುರಿಯಾಗಬೇಕಾಗುತ್ತದೆ. ಕೇಸುಗಳನ್ನು ಕೋರ್ಟಿಗೆ ಕಳಿಸಿದ ಮೇಲೆ ಡಿಸ್‌ಪೋಸ್ ಮಾಡುವುದು ಬಿಡುವುದು ಅದರ ಜವಾಬ್ದಾರಿ. ಕೋರ್ಟನು ಕೇಳಿಕೊಳ್ಳುವ ಮಾರ್ಗವನ್ನು ಅನುಸರಿಸಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಕೇಸನ್ನು ಆ ಕೋರ್ಟಿನಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರೂ ಮಾಡುವುದಿಲ್ಲ. ಅಲ್ಲೇ ಇಟ್ಟುಕೊಂಡು ಸುಮ್ಮನೆ ಯಾತಕ್ಕೆ ಹಿಂಸೆ ಕೊಡಬೇಕು ?

ಶ್ರೀ ಸಿ. ಎನ್. ಪಾಟೀಲ್.—ನಿರ್ದಿಷ್ಟವಾದ ಕೇಸ್ ಇದ್ದರೆ ಹೇಳಿದರೆ ಸರ್ಕಾರದ ವತಿಯಿಂದ ಪ್ರಯತ್ನ ಮಾಡುತ್ತೇನೆ. ತುರ್ತುಪರಿಸ್ಥಿತಿಯಲ್ಲಿ ಕೆಲಸ ಕಳೆದುಕೊಂಡ ಕಾರ್ಮಿಕರ ಬಗ್ಗೆ ಕೇಂದ್ರಸರ್ಕಾರದಿಂದ ಡೈರೆಕ್ಷನ್ ಬಂದಿದ್ದರೂ ಈ ಸರ್ಕಾರದ ಆಲಕ್ಷ್ಯದಿಂದ ನ್ಯಾಯ ದೊರಕಿಲ್ಲ ಎಂಬ ಮಾತನ್ನು ಕೆಲವು ಮಾನ್ಯ ಸದಸ್ಯರೇನು ಹೇಳುತ್ತಿದ್ದಾರೆ ಅದು ತಪ್ಪು ಎಂದು ನಾನು ಹೇಳಬಯಸುತ್ತೇನೆ. ತುರ್ತು ಪರಿಸ್ಥಿತಿ ಅವಧಿಯಲ್ಲಿ ಯಾವ ಕಾರಣಕ್ಕಾಗಿ ಡಿಸ್‌ಮಿಸ್ ಆಗಿದ್ದಾರೆ

ಎಂಬುದನ್ನೂ ಕೂಡ ಸರಿಯಾಗಿ ನೋಡಬೇಕು. ವಿಸಾದಲ್ಲಿ ಅಥವಾ ಯೂನಿಯನ್ ಚಟುವಟಿಕೆಗಳಲ್ಲಿ ಅರೆಸ್ಟ್ ಮಾಡಿ ಒಳಗಡೆ ಹೋಗಿದ್ದವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಮ್ಯಾನೇಜ್‌ಮೆಂಟಿನವನ್ನು ಸ್ಪಷ್ಟವಾಗಿ ಕೇಳಿಕೊಂಡಾಗಿದೆ. ಅಂತಹ ಪ್ರಕರಣ ಹೆಚ್.ಎ.ಎಲ್ ನಲ್ಲಿ 2, ಐ.ಟಿ.ಐ ನಲ್ಲಿ 3, ಬಿ.ಇ.ಎಂ.ಎಲ್. ನಲ್ಲಿ 7, ಸುಜಾತಾ ಟೆಕ್ಸ್‌ಟೈಲ್ಸ್‌ನಲ್ಲಿ 2 ಮೋದಿ ಸಿಮೆಂಟ್ ವರ್ಕ್ಸ್‌ನಲ್ಲಿ 2, ಇವೆ. ಒಟ್ಟು 15 ವರ್ಕರಗಳನ್ನು ತುರ್ತುಪರಿಸ್ಥಿತಿ ಕಾನೂನಿಗೆ ಒಳಪಡಿಸಿದ್ದರಿಂದ ಕೆಲಸ ಕಳೆದುಕೊಂಡಿದ್ದರು. ಈಗಾಗಲೇ ಅವರಿಗೆ ಕೆಲಸವನ್ನು ದೊರಕಿಸಿಕೊಟ್ಟಿದ್ದೇವೆ. ಎಂಬ ಮಾತನ್ನು ಸಂತೋಷದಿಂದ ಸಭೆಗೆ ತಿಳಿಸಬಯಸುತ್ತೇನೆ.

6-00 P.M.

ಮತ್ತೆ ಬಾಂಡೆಡ್ ಲೇಬರ್ ಬಗ್ಗೆ ಮಾನ್ಯ ಶ್ರೀ ಅನ್ವರ್ ಖುದ್ದೂಸ್‌ರವರು ಮಾತನಾಡುತ್ತಾ ಹೇಳಿದರು. ಸರ್ಕಾರ ಈ ದಿಸೆಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 63,397 ಜನರನ್ನು ವಿಮುಕ್ತರನ್ನಾಗಿ ಮಾಡಿದ್ದೇವೆ. ಮತ್ತೆ 7,877 ಜನರಿಗೆ ಮತ್ತು ಡಿಐಆರ್ ಸ್ಕೀಂನಲ್ಲಿ 3½ ಲಕ್ಷ ರೂಪಾಯಿ ಸಾಲವನ್ನು ಕೊಡಿಸಿ ಕೊಟ್ಟಿದ್ದೇವೆ. 1,091 ಸೈಟ್‌ಗಳನ್ನು ಕೊಟ್ಟಿದೆ, 376ಜನತಾ ಹೌಸ್‌ಗಳನ್ನು ಕೆಲವರಿಗೆ ಕೊಡಲಾಗಿದೆ. ಅಮೇಲೆ 2-3 ಎಕರೆ ಲ್ಯಾಂಡ್ ಇಲ್ಲದೇ ಇರತಕ್ಕ ಸುಮಾರು 50 ಜನರಿಗೆ ಜಮೀನು ಕೊಡಲಾಗಿದೆ. ಮತ್ತೆ 300ಜನ ಮಕ್ಕಳಿಗೆ 15 ವರ್ಷಕ್ಕಿಂತ ಕೆಳಗಡೆಯಲ್ಲಿರುವ ಷೆಡ್ಯೂಲ್ ಕ್ಯಾಸ್ಟ್ ಮಕ್ಕಳಿಗೆ ಹಾಸ್ಟಲ್‌ನಲ್ಲಿ ಸೇರಿಸಿದ್ದೇವೆ. ಈ ರೀತಿಯ ರಿಲೀಫ್ ಕೆಲಸವನ್ನು ತೃಪ್ತಿದಾಯಕವಾಗಿ ಮಾಡಿದ್ದೇವೆ ಎನ್ನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು 583 ಕೇಸ್‌ಗಳನ್ನು ಬುಕ್ ಮಾಡಲಾಗಿದೆ. 13 ಕನ್ವಿಕ್ಟೆಡ್ ಕೇಸ್‌ಗಳಿವೆ, ಅಕ್ವಿಟೆಡ್ 16 ಕೇಸ್‌ಗಳು ಕಾಂಪೌಂಡೆಡ್ 13 ಕೇಸ್‌ಗಳು. ಅದರ್ ವೈಸ್ ಡಿಸ್ಪೋಸ್ಡ್ ಕೇಸ್‌ಗಳು 20, ಪೆಂಡಿಂಗ್ ಟ್ರೈಯಲ್ ಕೇಸ್‌ಗಳು, 437, ಇನ್‌ವೆಸ್ಟಿಗೇಷನ್ ಕೆಳಗೆ ಇರತಕ್ಕಂಥ ಕೇಸ್‌ಗಳು 84 ಇವೆ.

ಶ್ರೀ ಕೋಣಂದೂರು ಲಿಂಗಪ್ಪ.— 63 ಸಾವಿರ ಜನರನ್ನು ವಿಮುಕ್ತರನ್ನಾಗಿ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ ಆದರೆ ಇವತ್ತು ಅವರು ಹೇಗೆ ಬದುಕುತ್ತಿದ್ದಾರೆ. ಎನ್ನುವ ಬಗ್ಗೆ ಯೋಚಿಸಿ ಅವರಿಗೆ ಪುನರ್ ವ್ಯವಸ್ಥೆಯ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ? ಅವರನ್ನು ನೀರಿನಲ್ಲಿರುವ ಮೀನನ್ನು ಮರಳಿನಲ್ಲಿ ಹಾಕಿದ ಹಾಗೆ ಆಗಿದೆ ಅವರ ಪರಿಸ್ಥಿತಿ.

ಶ್ರೀ ಸಿ. ಎನ್. ಪಾಟೀಲ್.— ಈಗಾಗಲೇ ಅದರ ಬಗ್ಗೆ ಅಂಕಿ ಸಂಖ್ಯೆಗಳನ್ನೇ ಕೊಟ್ಟಿರುವುದರಿಂದ ಪುನಃ ಅದರ ಬಗ್ಗೆ ಹೇಳಬೇಕಾದ ಅವಶ್ಯಕತೆ ಇಲ್ಲ, ಕನಿಷ್ಠ ವೇತನವನ್ನು ವ್ಯವಸಾಯ ಕೂಲಿಗಾರರಿಗೆ ಕೊಡುವ ಬಗ್ಗೆ ಎಷ್ಟು ಇಂಪ್ಲಿಮೆಂಟ್ ಮಾಡಬೇಕಾಗಿತ್ತೋ ಅದನ್ನು ಮಾಡುವುದಕ್ಕೆ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಏತಕ್ಕೆಂದರೆ ಗಂಡು ಮತ್ತು ಹೆಣ್ಣು ಕೂಲಿಗಳಿಗೆ ಸಮಾನವಾಗಿ ಕೂಲಿಯನ್ನು ಕೊಡಬೇಕೆಂದು ಏನು ಕಾನೂನನ್ನು ಆಚರಣೆಯಲ್ಲಿ ತಂದಿದ್ದೇವೆ. ಅದನ್ನು ಆಚರಣೆಯಲ್ಲಿ ತರುವುದಕ್ಕೆ ಆಗಿಲ್ಲ. ಅದಕ್ಕೆ ಕಾರಣವೇನೆಂದರೆ ರಾಜ್ಯದ 19 ಜಿಲ್ಲೆಗಳಲ್ಲಿ 13 ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿವೆ. ಇವತ್ತು ಅಲ್ಲಿಯ ಮಾಲೀಕರಿಗೇ ಅನ್ನವಿಲ್ಲಾ. ಕೂಲಿಗಾರರಿಗೂ ಅನ್ನವಿಲ್ಲ ಈ ದಿಶೆಯಲ್ಲಿ ಇಂಥ ಒಂದು ಪರಿಸ್ಥಿತಿ ಅಲ್ಲಿರುವುದರಿಂದ ನಾವು ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. ಆದರೂ ಕೂಡ ನಾವು ಹಾಕಿಕೊಂಡ ಕಾರ್ಯಕ್ರಮದಂತೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆನ್ನುವುದನ್ನು ವಿಶಾದದಿಂದ ತಿಳಿಸುತ್ತೇನೆ.

ಇನ್ನು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಎಷ್ಟು ಜನ ರಿಜಿಸ್ಟರ್ ಮಾಡಿಸಿದ್ದಾರೆ ಎಷ್ಟು ಜನಕ್ಕೆ ಕೆಲಸ ಸಿಕ್ಕಿದೆ ಎನ್ನುವ ಬಗ್ಗೆ ಹೇಳುವುದಾದರೆ 1974 75ರಲ್ಲಿ 12,632 ಜನರಿಗೆ ನೌಕರಿ ದೊರಕಿದೆ 1975-76ರಲ್ಲಿ 13,356 ಜನರಿಗೆ ಕೆಲಸ ದೊರಕಿದೆ, 1976-77ರಲ್ಲಿ 13,296 ಜನರಿಗೆ ದೊರಕಿದೆ ಹಾಗೂ ವೊಕೇಷನಲ್ ಗ್ರೈಡಲೈನ್ಸ್‌ನಲ್ಲಿ ಹೇಳುವುದಾದರೆ 2022 ಜನರು ಗ್ರೂಪ್ ಡಿಸ್ಕಷನ್‌ನಲ್ಲಿ ಭಾಗವಹಿಸಿದ್ದರು. ಮತ್ತೆ 47,844 ಜನರು ಗ್ರೂಪ್ ಡಿಸ್ಕಷನ್‌ನಲ್ಲಿ ಭಾಗವಹಿಸಿ ಗೈಡ್‌ಲೈನ್ಸ್‌ನ್ನು ಪಡೆದುಕೊಂಡಿದ್ದಾರೆಂದು ಹೇಳಬಯಸುತ್ತೇನೆ.

ಇನ್ನು ಐ.ಟಿ.ಐ. ಅಪ್ರೆಂಟಿಶಿಪ್ ಬಗ್ಗೆ ಹೇಳುವುದಾದರೆ 1-7-75ರಲ್ಲಿ **3,675** ಫಿಕ್ಸ್ ಮಾಡಿದ್ದರಲ್ಲಿ 2,150 ಜನರು ಕೆಲಸವನ್ನು ಕಲಿತರು, ಮತ್ತೆ 31-1-1977ರಲ್ಲಿ **7,249** ಜನರಿಗೆ ಅಪ್ರೆಂಟಿಸ್‌ಶಿಪ್ ಕೊಡಬೇಕೆಂದು ಫಿಕ್ಸ್ ಮಾಡಿದ್ದರಲ್ಲಿ 6,733 ಜನರು ಟ್ರೈನಿಂಗ್ ಪಡೆದರು

ಇನ್ನು ಕೆಲವೊಂದು ಸದಸ್ಯರು ತುಂಗಭದ್ರ ಶುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವಂಥ ಕಾರ್ಮಿಕರ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಿದರು. ಅಲ್ಲಿಯ ಕಾರ್ಮಿಕ ಸದಸ್ಯರು ಸಹ ಬಂದು ನನ್ನನ್ನು ಕಂಡು ನನ್ನೊಡನೆ ಮಾತನಾಡಿ ಹೋಗಿದ್ದಾರೆ ಅಲ್ಲಿಯ ಕೊರತೆಯೇನೆಂದರೆ ಕಬ್ಬಿನ ಕೊರತೆಯೊಂದೇ ಆಗಿರುವುದರಿಂದ ವರ್ಷ ಒಂದಕ್ಕೆ ಸುಮಾರು 20,250 ಜನ ಕೆಲಸ ಮಾಡುವಂಥಾ ಪ್ರಸಂಗವಿರುವಾಗ ಕೇವಲ 100-125 ಜನ ಇವತ್ತು ಅಲ್ಲಿ ಕೆಲಸಮಾಡುವಂಥಾ ಪರಿಸ್ಥಿತಿ ಬಂದಿದೆ ಇದಕ್ಕೆ ಕಬ್ಬಿನ ಕೊರತೆ ಎಂಬುದಾಗಿ ತಜ್ಞರು ತಿಳಿಸಿದ್ದಾರೆ. ಬಾಕಿ ಕಾರ್ಮಿಕರನ್ನು ಇದರಿಂದಾಗಿ ಕೆಲಸದಿಂದ ತೆಗೆದು ಹಾಕಿರುವುದರ ಬಗ್ಗೆ ಕಾರ್ಮಿಕರ ಪ್ರತಿನಿಧಿಗಳು ನನ್ನ ಹತ್ತಿರ ಬಂದು ಒಂದು ಮನವಿ ಪತ್ರವನ್ನು ಸಲ್ಲಿಸಿದ್ದಾರೆ. ಆದರೆ ಇವತ್ತು ಅಲ್ಲಿ ರಾ ಮೆಟೀರಿಯಲ್ಸ್ ಅವೇಲ್ಬಲ್ ಆದರೆ ಅಲ್ಲಿಯ ಫ್ಯಾಕ್ಟರಿಯ ಮಾಲೀಕರು ಇನ್ನು ಹೆಚ್ಚಿನ ಕಾರ್ಮಿಕರನ್ನು ತೆಗೆದುಕೊಂಡು, ಕಬ್ಬನ್ನು ಕ್ರಶ್ ಮಾಡುವುದಕ್ಕೆ ಸಾಧ್ಯತೆ ಇದೆ ಮತ್ತೆ ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಮಾತನಾಡುತ್ತಾ ಯಾವುದೋ ಸಿಕ್ ಮಿಲ್ಲಿನ ಜೊತೆಯಲ್ಲಿ ಸೇರಿಸಿದ್ದಾರೆ ಅದಕ್ಕೋಸ್ಕರವಾಗಿ ಆ ಕಂಪನಿಗೆ ಹಾನಿಯಾಗುತ್ತಿದೆ ಎಂದು ಹೇಳಿದರು, ಅದೇನೋ ನನಗೆ ಗೊತ್ತಿಲ್ಲ ಗೊತ್ತಿದ್ದರೂ ಏನು ಮಾಡುವ ಹಾಗಿಲ್ಲ ಕಾರ್ಮಿಕ ಮಂತ್ರಿಯಾಗಿ ನಾನು ಬರೀ ಕಣ್ಣೀರು ಸುರಿಸಬೇಕಾಗುತ್ತದೆ ಅಷ್ಟೆ. ಏತಕ್ಕೆಂದರೆ ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಸುಮಾರು 4-5 ವರ್ಷಗಳ ಹಿಂದೆ ಮದ್ರಾಸಿನಲ್ಲಿ ಫ್ಲಡ್ ಬಂತು, ಅಲ್ಲಿಯ ಬಿನ್ನಿಮಿಲ್ ಬಹಳ ಸುವ್ಯವಸ್ಥಿತವಾದಂಥ ಮಿಲ್ ಅದು ಎಲ್ಲರಿಗೂ ಗೊತ್ತಿದೆ. ಆದರೆ ಇವತ್ತು ಬೆಂಗಳೂರಿನಲ್ಲಿರುವ ಬಿನ್ನಿಮಿಲ್ ಚೆನ್ನಾಗಿ ನಡೆಯುತ್ತಿದ್ದರೂ ಕೂಡ ಅಲ್ಲಿಯ ಬಿನ್ನಿಮಿಲ್ ಲಾಸ್‌ನಲ್ಲಿ ನಡೆಯುತ್ತಿರುವುದರಿಂದ ಮುಂದೆ ಇದಕ್ಕೂ ನಷ್ಟ ಸಂಭವಿಸಬಹುದೆನ್ನುವ ಸೂಚನೆ ನಮಗೆ ಕಂಡು ಬರುತ್ತಿದೆ. ಅದಕ್ಕೆ ನಾನು ಹೇಳುವುದೇನೆಂದರೆ ಕರ್ನಾಟಕ ಸರ್ಕಾರದಲ್ಲಿ ಯಾರೇ ಕಾರ್ಮಿಕ ಮಂತ್ರಿಯಾಗಿರಲಿ ಒಂದು ಯೂನಿಟ್ ಹಾಳಾಗುತ್ತಿದೆ ಎನ್ನುವ ವಿಷಯ ಗೊತ್ತಾದಾಗ ಅದನ್ನು ಸರ್ಕಾರದವರೇ ವಹಿಸಿಕೊಳ್ಳಲು ಪ್ರತಿಯೊಂದು ಮುಂಜಾಗರೂಕತೆಯ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ—ಒಂದು ಕಡೆ ಲಾಭವನ್ನು ತೋರಿಸಿ ಮತ್ತೊಂದು ಕಡೆ ನಷ್ಟವಾಗಿದೆ ಎಂದು ತೋರಿಸುತ್ತಾ ಈ ರೀತಿ ಲಾಭವನ್ನು ಮಾಲೀಕರು ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಸಿ. ಎನ್. ಪಾಟೀಲ್—ಇದೇನು ಯಕ್ಷಗಾನದಲ್ಲಿ ಬಂದ ಹಾಗೆ ಬರುತ್ತಿರಲ್ಲಾ.

ಶ್ರೀ ಕೋಣಂದೂರು ಲಿಂಗಪ್ಪ—ತಾವೇನು ಬಕಾಸುರರ ಹಾಗೆ ಮಾತನಾಡುತ್ತಿದ್ದೀರಿ. ನಿಜವಾದ ವಿಷಯವನ್ನು ನಾನು ಹೇಳುತ್ತಿದ್ದೇನೆ ಮುಕೇಶ್ ಇಂಡಸ್ಟ್ರೀಯು ಮುಂಬೈನಲ್ಲಿ ಒಂದು ಇದೆ. ಅಲ್ಲಿ ಲಾಸ್ ಎಂದು ತೋರಿಸಿ ಇಲ್ಲಿ ಲಾಭ ಮಾಡಿಕೊಳ್ಳುತ್ತಿದ್ದಾರೆ, ಬ್ಯಾಂಕ್ ಮನಿಯಿಂದ ಬರತಕ್ಕಂಥ ಹಣದಿಂದ ಅವರು ಖರ್ಚು ಮಾಡುತ್ತಾ, ಲೆಕ್ಕವನ್ನು ಸರಿಯಾಗಿ ಕೊಡದೇ ರೈತರ ಗೋಣನ್ನು ಮುರಿಯುತ್ತಾ ಇದ್ದಾರೆಂದು ಹೇಳಿದರೆ ತಾವು ಯಕ್ಷಗಾನದಲ್ಲಿ ಬಂದ ಹಾಗೆ ಬರುತ್ತೀನೆಂದು ಹೇಳುತ್ತೀರಲ್ಲಾ.

ಶ್ರೀ ಸಿ. ಎನ್. ಪಾಟೀಲ್.—ಇನ್ನು ಅರೆಯುವ ಗಿರಣಿಯ ಬಗ್ಗೆ ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್‌ರವರು ಹೇಳಿದರು. ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನ್ಯಾಯವಾಗಿದ್ದರೆ ಅದನ್ನು ತನಿಖೆ ಮಾಡಿಸುವ ಅಧಿಕಾರ ಸಂಬಂಧಪಟ್ಟ ಮಂತ್ರಿಗಳಿಗೆ ಇದೆಯೇ ಹೊರತು ಕಾರ್ಮಿಕ ಮಂತ್ರಿಗಳಿಗೆ ಅಲ್ಲವೆಂದು ಹೇಳಬಯಸುತ್ತೇನೆ. ಆಕಸ್ಮಾತ್ ಅದು ಕಾರ್ಮಿಕ ಇಲಾಖೆಗೆ ಸೇರಿದ್ದು, ಅದನ್ನು ತನಿಖೆ ಮಾಡಿಸಬೇಕೆಂದು ತಾವು ಹೇಳುವುದಾದರೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅವರಿಗೆ ನ್ಯಾಯ ದೊರಕಿಸಿಕೊಡುತ್ತೇನೆ ಎನ್ನುವ ಆಶ್ವಾಸನೆ ಸನೆ ಕೊಡುತ್ತೇನೆ, ಇನ್ನು ನ್ಯೂ ರೆಂಕೋದಲ್ಲಿ 1975ರಿಂದ ಕೆಲವರು ಸ್ಟ್ರೈಕ್ ಮಾಡುತ್ತಿದ್ದಾರೆ ಅದರ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಡೆಪ್ಯುಟಿ ಲೇಬರ್ ಕಮೀಷನರ್‌ರವರಿಗೆ ತಿಳಿಸಿದ್ದು ಆಗಿದೆ.

ಇನ್ನು ಇಂಡಾಲ್ ಫ್ಯಾಕ್ಟರಿಯಲ್ಲಿ ಸ್ಟ್ರೈಕ್‌ನ್ನು ಮಾಡಿಕೊಂಡು ಬರುತ್ತಿದ್ದಾರೆ, ಅಲ್ಲಿ 31ನೇ ತಾರೀಖು ಇದೇ ತಿಂಗಳು ರಿ ಓಪನ್ ಆಗುತ್ತದೆ. ಅಲ್ಲಿ ಒಂದು ಕನ್ಸಿಲೇಷನ್ ಮಾಡಿ ಮ್ಯಾನೇಜ್‌ಮೆಂಟಿನವರಿಗೂ ಮತ್ತು ಕಾರ್ಮಿಕರಿಗೂ ಒಂದು ಹತ್ತಿರದ ಸಂಬಂಧವನ್ನುಂಟು ಮಾಡಬೇಕೆನ್ನುವ ಉದ್ದೇಶದಿಂದ ಅದು ಇಷ್ಟರಲ್ಲಿಯೇ ರೀ ಓಪನ್ ಆಗುತ್ತದೆ.

ಮೊನ್ನೆ ಈ ಸಭೆಯಲ್ಲಿ ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ಕೊಡುತ್ತಾ ನಾನು ಅಲ್ಲಿ ಸ್ಟ್ರೈಕ್ ಮಾಡಿರುವುದು ಇಲ್ಲೀಗಲ್ ಎಂದು ತಪ್ಪು ಕಲ್ಪನೆಯಿಂದ ತಪ್ಪು ಉತ್ತರವನ್ನು ಕೊಟ್ಟಿದ್ದೆ. ಆದರೆ ಲೀಗಲ್ ಸ್ಟ್ರೈಕ್ ಎನ್ನುವುದನ್ನು ಅರಿತುಕೊಂಡು ಆ ತಪ್ಪನ್ನು ಕರೆಕ್ಟ್ ಮಾಡಿಕೊಳ್ಳ ಬಯಸುತ್ತೇನೆ. ಹಾಗೆಯೇ ಕೆ ಆರ್ ಮಿಲ್ಸ್ ಲಾಕೌಟ್ ಆಗಿದ್ದುದನ್ನು ಲೀಗಲ್ ಆಗಿ ಟ್ರೀಟ್ ಮಾಡಬೇಕೇ ಇಲ್ಲೀಗಲ್ ಆಗಿ ಟ್ರೀಟ್ ಮಾಡಬೇಕೇ ಎನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಹಾಗೂ ಅಲ್ಲಿಯ ಕಾರ್ಮಿಕರಿಗೂ ಮತ್ತು ಮ್ಯಾನೇಜ್‌ಮೆಂಟಿನವರಿಗೂ ಒಂದು ಹತ್ತಿರದ ಸಂಬಂಧವನ್ನು ಕಲ್ಪಿಸುವುದಕ್ಕೆ ಅವರನ್ನು ಆದಷ್ಟು ಬೇಗ ಒಂದುಗೂಡಿಸುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಮೈಸೂರು ಟ್ಯೂಲ್ಸ್ ಕಂಪೆನಿಯವರು ತುಂಬ ದಿವಸಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯವರು ಇದರ ಬಗ್ಗೆ ಆಸಕ್ತಿಯನ್ನು ವಹಿಸಿ ಒಂದು ವ್ಯವಸ್ಥೆ ಮಾಡಿದ್ದಾರೆ. ಕರ್ನಾಟಕ ಸ್ಟೀಲ್ ಮತ್ತು ವೈರ್ ಕಂಪೆನಿ ಬಗ್ಗೆ ಮಾನ್ಯ ಸದಸ್ಯರು ನನ್ನ ಗಮನವನ್ನು ಸೆಳೆದಿದ್ದಾರೆ. ಇದರ ಸಮಸ್ಯೆಯನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯವರು ಕೈಗೆತ್ತಿಕೊಂಡು, ಆ ಕಂಪೆನಿಯನ್ನು ಉಳಿಸಿಕೊಂಡು ಹೋಗಬೇಕೇ ಅಥವಾ ಕಾರ್ಮಿಕರನ್ನು ಮುಂದುವರಿಸಿಕೊಂಡು ಹೋಗಬೇಕೇ ಎನ್ನುವ ವಿಚಾರದಲ್ಲಿ ವ್ಯವಹರಿಸುತ್ತಿದ್ದಾರೆ ಎಂದು ಎಂದು ಈ ಸಭೆಗೆ ನಾನು ತಿಳಿಸಬಯಸುತ್ತೇನೆ. ಇಂದು ಮಾನ್ಯ ಎಂ. ಎಸ್. ಕೃಷ್ಣನ್‌ರವರು ಚರ್ಚೆಯಲ್ಲಿ ಭಾಗವಹಿಸದೇ ಇರುವುದಕ್ಕಾಗಿ ನನಗೆ ಬಹಳ ವಿಷಾದವಾಗುತ್ತಿದೆ. ಸರ್ಕಾರ ಏನಾದರೂ ಅಪರಾಧ ಮಾಡುತ್ತಿದ್ದರೆ, ಆ ಅಪರಾಧವನ್ನು ಶಾಸಕರು ತಿಳಿಸಿ, ಮುಂದೆ ಇಂತಹ ಅಪರಾಧಗಳನ್ನು ಮಾಡದಂತೆ ನೋಡಿಕೊಳ್ಳುವುದು ಅವರ ಕರ್ತವ್ಯ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಹೂಡಿರುವ ಮುಷ್ಕರ ಇಂದು ಐದನೆಯ ದಿವಸಕ್ಕೆ ಕಾಲಿಟ್ಟಿದೆ. ಮೊನ್ನೆ ಮತ್ತು ನಿನ್ನೆ ನಾನೇ ಸ್ವತಃ ಅವರ ಬಳಿ ಹೋಗಿ ಸತ್ಯಾಗ್ರಹವನ್ನು ಹಿಂತೆಗೆದು ಕೊಳ್ಳಬೇಕೆಂದು ಕೇಳಿಕೊಂಡೆ. ಶಂಕರಬಟ್ಟೆ ಗಿರಣಿ ದಾವಣಗೆರೆ ಇದರ ಈ ವಿಚಾರ ಅವರ ಮುಖ್ಯವಾದ ಬೇಡಿಕೆಗಳಲ್ಲೊಂದು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಈಗಾಗಲೇ ಹೇಳಿಕೆ ಕೊಟ್ಟಿದ್ದಾರೆ ಎರಡನೆಯದಾಗಿ, ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆನ್ನುವ ಬೇಡಿಕೆ. ಎಲ್ಲ ಸತ್ಯಾಗ್ರಹಿಗಳು ಇದನ್ನು ಬೇಡಿಕೆಯನ್ನಾಗಿಟ್ಟುಕೊಂಡು ಸತ್ಯಾಗ್ರಹ ಮಾಡುತ್ತಿದ್ದಾರೆ. ಹಣಕಾಸಿಗೆ ಸಂಬಂಧಪಟ್ಟ ಈ ಪ್ರಶ್ನೆ ನನ್ನ ಗೆಳೆಯ ಸಚಿವರಾದ ಶ್ರೀಮಾನ್ ಘೋರ್ಪಡೆಯವರಿಗೆ ಸಂಬಂಧಪಟ್ಟದ್ದಾಗಿದೆ. ಸರ್ಕಾರಕ್ಕೆ ದುಡ್ಡು ಬೇಕು. ದುಡ್ಡಿಲ್ಲದಿದ್ದರೆ ಅದು ನಡೆಯುವುದಿಲ್ಲ. ನಾನೇನು ಈ ತೆರಿಗೆಯನ್ನು ರದ್ದು ಮಾಡಿ ಎಂದು ಹೇಳುವುದಿಲ್ಲ. ಈ ತೆರಿಗೆಯನ್ನು ಕಾರ್ಮಿಕರೂ ಕೊಡುತ್ತಿದ್ದಾರೆ ಈ ತೆರಿಗೆಯಲ್ಲಿ ಕಾರ್ಮಿಕರಿಗೆ ಸ್ವಲ್ಪ ರಿಯಾಯತಿಯನ್ನು ತೋರಿಸಬೇಕೆಂದು ನಾನು ಕಾರ್ಮಿಕರ ಪರವಾಗಿ, ಅವರ ಮಂತ್ರಿಯಾಗಿ ಮತ್ತು [ಮಂತ್ರಿಮಂಡಲದ ಸದಸ್ಯನಾಗಿ ನನ್ನ ಭಾವನೆಗಳನ್ನು ಅಧ್ಯಕ್ಷರ ಮೂಲಕ ವ್ಯಕ್ತಪಡಿಸುತ್ತಿದ್ದೇನೆ. ಆದರೆ, ಈ ತೆರಿಗೆಯನ್ನು ಪೂರ್ತಿಯಾಗಿ ತೆಗೆಯಬೇಕೆಂಬುದು ನನ್ನ ಅಭಿಪ್ರಾಯವಲ್ಲ ಎನ್ನುವುದನ್ನು ಸ್ಪಷ್ಟೀಕರಿಸುತ್ತೇನೆ.

ಇನ್ನು ವಿಕ್ಟಿಮಿಜೇಷನ್ ಆಫ್ ಎಂಪ್ಲಾಯಿಸ್ ಬಗ್ಗೆ ಹೇಳಿದ್ದಾರೆ ತುರ್ತುಪರಿಸ್ಥಿತಿ ಕಾಲದಲ್ಲಿ ತೆಗೆದು ಹಾಕಿದ್ದ ಕಾರ್ಮಿಕರಲ್ಲಿ ಕೆಲವರನ್ನು ಪುನಃ ತೆಗೆದುಕೊಳ್ಳಲಾಗಿದೆ, ಆದರೆ ಅಶಿಸ್ತು ಕಾರಣದಿಂದ ತೆಗೆದು ಹಾಕಿದ್ದರೆ.........

ಶ್ರೀ ಬಿ. ವಿ. ಕಕ್ಕಿಲಾಯ.— ಕಾರ್ಖಾನೆಯ ಮ್ಯಾನೇಜ್‌ಮೆಂಟಿನವರನ್ನೂ ಮತ್ತು ಕಾರ್ಮಿಕರನ್ನೂ ಕರೆದು ತಾವು ಸಮಾಲೋಚಿಸಬೇಕು.

ಶ್ರೀ ಸಿ. ಎನ್. ಪಾಟೀಲ್.— ಅಸಾಲ್ಟ್ ನಡೆದು, ಕ್ರಿಮಿನಲ್ ಕೇಸ್ ದಾಖಲು ಮಾಡಿಕೊಂಡಿರುವ ಪ್ರಕರಣಗಳ ಬಗ್ಗೆ ನಾನು ಮ್ಯಾನೇಜ್‌ಮೆಂಟ್‌ನವರನ್ನು ಕರೆದು ಸಮಾಲೋಚಿಸುವುದಕ್ಕೆ ನನಗೆ ನೈತಿಕ ಧೈರ್ಯವಿಲ್ಲ. ಅಂತಹ ಸಂದರ್ಭಗಳಿಗೆ ನಾನು ಹೇಳಲಿಕ್ಕೂ ಸಿದ್ಧವಿಲ್ಲ.

ಇನ್ನು ಲಿಫ್ಟಿಂಗ್ ಆಫ್ ಲಾಕ್‌ಔಟ್ಸ್ ಮತ್ತು ಕಡ್ಡಾಯ ಠೇವಣಿ ಕೇಂದ್ರ ಸರ್ಕಾರಕ್ಕೆ ಸಂಬಂಧ ಪಟ್ಟದಾಗಿದೆ. ಶಂಕರ ಬಟ್ಟೆ ಗಿರಣಿಯನ್ನು ರೀ-ಓಪನ್ ಮಾಡುವ ವಿಚಾರವಾಗಿ ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿಕೆ ನೀಡಿದ್ದಾರೆ.

ಮಾನ್ಯ ಕೋಣಂದೂರು ಲಿಂಗಪ್ಪನವರು ಕಾರ್ಮಿಕರ ಸಂಘಗಳ ವೇದಿಕೆ ವಿಚಾರವಾಗಿ ಹೇಳಿದ್ದಾರೆ. ಕಾರ್ಮಿಕರ ನ್ಯಾಯವಾದ ಹಕ್ಕುಗಳಿಗೆ ಬೆಂಬಲ ಕೊಡುವುದು ನ್ಯಾಯ ಮತ್ತು ಧರ್ಮವೆಂಬುದನ್ನು ನಾನು ಒಪ್ಪುತ್ತೇನೆ. ಒಪ್ಪದಿದ್ದರೆ, ನಾನು ಕಾರ್ಮಿಕ ಮಂತ್ರಿಯಾಗಿ ಮುಂದುವರಿಯಲಿಕ್ಕೆ ಯೋಗ್ಯನಲ್ಲ. ಕಾರ್ಮಿಕರ ಸಂಘಗಳ ವೇದಿಕೆಯವರು ಕೆಲವು ದಿವಸಗಳ ಹಿಂದೆ ಬಂದು ನನ್ನ ಭೇಟಿ ಮಾಡಿದ್ದರು. ಅವರೊಡನೆ ಸಮಾಲೋಚನೆ ನಡೆಸಿ, ಅವರನ್ನು ನಾನು ಕನ್‌ವಿನ್ಸ್ ಮಾಡಿದ್ದೇನೆ. ನ್ಯಾಯವಾದ ಬೇಡಿಕೆಗಳಿದ್ದು, ನನ್ನನ್ನು ಬಂದು ಭೇಟಿ ಮಾಡಿದರೆ ನಾನು ನಿಮಗೆ ಬೆಂಬಲ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಅಷ್ಟು ಹೇಳಿದ್ದರೂ ಅವರು ಅನ್ನ ಸತ್ಯಾಗ್ರಹ ಮಾಡುತ್ತಿದ್ದಾರೆ. ನಾನು ಮೊನ್ನೆ ಮಾನ್ಯ ಸದಸ್ಯ ಶ್ರೀ ಕೃಷ್ಣನ್ ಅವರ ಬಳಿಗೆ ಹೋಗಿ ಅನ್ನ ಸತ್ಯಾಗ್ರಹ ಮಾಡಬಾರದೆಂದು ಬುದ್ಧಿವಾದ ಹೇಳಿದ್ದೇನೆ. ಆದರೆ, ನಾನು ಅಲ್ಲಿಗೆ ಯಾವ ರಾಜಕೀಯ ಭಾವನೆಯನ್ನಿಟ್ಟುಕೊಂಡೂ ಹೋಗಿರಲಿಲ್ಲ. ಮಾನ್ಯ ಸದಸ್ಯರು ಕೇಳಿದ ಎಲ್ಲ ಪ್ರಶ್ನೆಗಳಿಗೂ ನಾನು ಉತ್ತರಿಸುವ ಪ್ರಯತ್ನವನ್ನು ಸಾಧ್ಯವಾದಷ್ಟು ಮಾಡಿದ್ದೇನೆ. ಮಾನ್ಯ ಸದಸ್ಯರ ಭಾವನೆಗಳನ್ನು ಹಂಸಕ್ಷೀರ ನ್ಯಾಯದಂತೆ ತೆಗೆದುಕೊಂಡು......

ಶ್ರೀ ಕೆ. ಪ್ರಭಾಕರ ರೆಡ್ಡಿ.— ಹೋಟೆಲು ಕಾರ್ಮಿಕರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಸಿ. ಎನ್. ಪಾಟೀಲ್.— ಹೋಟೆಲ್ ಕೆಲಸಗಾರರಿಗೆ ತಿಂಗಳಿಗೆ ಕನಿಷ್ಠ 125-250 ರವರೆಗೆ ಪಗಾರ ಸಿಗುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು : ಹೋಟೆಲ್ ಕಾರ್ಮಿಕರಾಗಲೀ ಅಥವಾ ಕಾರ್ಖಾನೆಯ ಕಾರ್ಮಿಕರೇ ಆಗಲಿ, ನ್ಯಾಯವಲ್ಲದ ಬೇಡಿಕೆಗಳಿಗೋಸ್ಕರ ಮುಷ್ಕರ ಹೂಡುತ್ತ ಹೋದರೆ, ಅಂತಹವರಿಗೆ ಸರ್ಕಾರ ಸಹಾಯ ಮಾಡುವುದಕ್ಕೆ ಸಿದ್ಧವಿಲ್ಲ. ಆದರೆ, ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಆಶ್ವಾಸನೆ ನೀಡಿ, ಸಭೆಯಲ್ಲಿ ಮಂಡಿಸಿರುವ ಕಾರ್ಮಿಕ ಇಲಾಖೆಯ ಬೇಡಿಕೆಯನ್ನು ಅವಿರೋಧವಾಗಿ ಮಂಜೂರು ಮಾಡಿಕೊಡಬೇಕೆಂದು ಪ್ರಾರ್ಥನೆ.

MADAM SPEAKRR.— I will put the Demands to the Vote of the House. The question is :

"That the respective sums not exceeding the amounts mentioned in the list of Demands for Grants be granted to Government to defray the charges which will come in course of payment during the financial year ending 31st day of March, 1978 in respect of Demand Nos. 28 and 29".

The Motion was adopted and sums were granted.

As ordered by the Chair, the Motion for Demands for Grants adopted by the House are reproduced below.

Demand No. 28- Information and Publicity

"That a sum not exceeding Rs. 1,80,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 28 'Information and Publicity"

Demand No. 29– Labour and Employment

"That a sum not exceeding Rs. 2,70,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No, 29 "Labour and Employment".

Statement by the Minister for Finance

Re : Professional Tax

† SRI M. Y. GHORPADE (Minister for Finance).—Madam Speaker, I had no intention of making the statement to-day. However in the course of the debate both have Hon. ble Minister for Labour and the Hon' Members Sri B. V. Kakkilaya have mentioned about the professional Tax, and also the fast undertaken by Mr. M. S. Krishnan Now I only want to clarify the Government's stand regarding the professional Tax. Professional Tax, we have introduced in the State after very careful consideration and it is a very progressive tax. As I have repeatedly said, it is not a new tax in the sense that it was already there supposed to be levied by the local bodies and Municipalities. It is because of various reason, they were not able to do this effectively. We are now levying it at the State level in a systematic and scientific manner. Now, while levying this new tax, we have taken care to make it as a reasonable tax. Actually the tax is not only on the salaried employees.

It is not only on the salaried employees but also on various categories of people who are practicing different prfessions. Now, when we discuss professional tax in this House, I remember Sri Krishnan, who took particular interest regarding the slabs and it would not be incorrect for me to say that the extremely reasonable nature of slabs that we introduced was to some extent in response to what Sri Krishnan said during the Debate. I have regard for Sri Krishnan for his genuine concern and sincerity, but I must say on this occasion that fasting may not be the most appropriate way of drawing the attention of the Government regarding the professional tax. As the House knows, the Government has always been extremely sympathetic whenever difficulty has arisen and some specific areas of hardship have been pointed out and we have taken a sympathetic view. For example, in the case of Lawyers and Ayurvedic and Unani practitioners. When they pointed out that the slabs we have indicated is onerous, We have not hesitated to revise the same. As matter of fact, in the case of Lawyers only